ಅಂತೂ ಈ ವರ್ಷದ ಜಯಂತ್ಯುತ್ಸವದ ವೈಭವ ವನ್ನೇನು ವರ್ಣಿಸಲಿ? ಪ್ರತ್ಯಕ್ಷವಾಗಿ ನೋಡಿದವರಿಗೆ ತಿದರ ಆನಂದವು ಗೊತ್ತಾಗುವದೇ ಹೊರತು ವೃತ್ತ ಪತ್ರಿಕೆಗಳಿಂದ ಗೊತ್ತಾಗುವುದು ಶಕ್ಯವಿಲ್ಲ ರಾಯಚೂರು, ಮೊರಬ, ನಿಂಬರಗಿ, ಮಂಗಳೂರು, ಮೇಹೆಕರ, ಆಹಮದಪೂರ, ದಿಗ್ಗಾವ, ಜೈನಾಪೂರ, ಪರಾಂಡಕರ, ಸುತ್ತಗಟ್ಟಿ, ಹುಣಸಿಕಟ್ಟಿ, ಮುಳ್ಳೂರು, ನಾಲವಾರ, ಕನ್ನೊಳ್ಳಿ, ಜಹಗೀರ ಜೇವರಗಿ, ಇತ್ಯಾದಿ ಗ್ರಾಮಗಳ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷರು ಆಗಮಿಸಿದ್ದರು ಅಲ್ಲದೆ ಸೋಲಾಪುರ, ಬಾರ್ಶಿ, ಪಂಢರಪೂರ ವೈರಾಗ, ಟೆಕೇಕರವಾಡೀ, ಕುಂಭಾರಿ, ದರ್ಗನಹಳ್ಳಿ ಧೋತ್ರಿ, ವರ್ಶನಹಾಳ, ವಳಸಂಗ, ಮತ್ತಿಕಣಮಸ, ಪಡನೂರ, ಖಾನಾಪೂರ, ಜೇವರಗಿ, ಪಡಸಲಗಿ, ಸರಂಬ, ಮೋಳೆ, ರಾಯಪೂರ, ಹಣಮಗಾಂವ, ನಿಂಗಡಗಾವ, ಚಪ್ಪಳಗಾಂವ, ಚಪ್ಪಳಗಾಂವವಾಡೀ, ದಿಂಡೂರ, ತೀರ್ಥ, ಕಲಬುರ್ಗಿ ಇತ್ಯಾದಿ ಗ್ರಾಮಗಳಿಂದ ೫-೬ ಸಾವಿರ ಜನರು ನೆರೆದಿದ್ದರು. ಯಾರಿಗೂ ಅನ್ನ ನೀರುಗಳ ಕೊರತೆಯಾಗಲಿಲ್ಲ. ಎಲ್ಲರೂ ಸ್ವಭಕ್ತಿಯಿಂ ಗುರುಸೇವೆಯನ್ನು ಮಾಡುತ್ತಿದ್ದರು. ಸೋಲಾಪುರದಿಂದ ಮುಂಗಳವಾರಪೇಟೆ ಸೇಟೆ, ಗಂಭೀರೆ, ಮಾಳಗೆ, ಕಟಾಪ, ಹಿರೇಹಬ್ಬು, ಶುಕ್ರವಾರಪೇಟೆ ಹಬ್ಬು, ಚಾಕೋತೆ, ತಮಶೆಟ್ಟಿ, ಬಹಿರೋಪಾಟೀಲ, ದರಗೋಪಾಟೀಲ, ಬುಗಡೆ, ಭೋಗಡೆ, ಖಾನಾಪುರೆ ಬೋರಾಮಣಿಕರ, ಬೇಲೂರೆ ಇತ್ಯಾದಿ ಶುಶ್ರುಸಿದ್ಧ ಮನೆತನದವರು ಬಂದು ನಾವು ಶ್ರೀಮಂತರೆಂಬುವ ಗರ್ವವನ್ನು ತಾಳದೆ ಗುರು ಸೇವೆಯಲ್ಲಿ ನಿರತರಾಗಿದ್ದರು ಶ್ರೀ ಮುಕ್ತಾಬಾಯಿ ಲೇಟೆಯವರು ಎರಡುದಿವಸಮುಂಚೆತವಾಗಿಯೆ ಸ್ಪೆಷಲ್ ಮೋಟಾರಿನಿಂದ ಮನೆಯವರೆಲ್ಲಂನ್ನೂ ಕರೆದುಕೊಂಡು ಬಂದು ಗುರುಸೇವೆಯನ್ನು ಒಳ್ಳೇ ಭಕ್ತಿಯಿಂದ ಮಾಡಿದರು ಸೌ॥ ಪಾರ್ವತೀಬಾಯಿ ತಮಶೆಟ್ಟಿ ಇವರ ಗುರುಸೇವೆಯು ಆಗಾಧವಾದದ್ದು. ಸೌ॥ ಭಾಗೀರಥೀಬಾಯಿ ಕಟಪ ಇವರ ಗುರುಭಕ್ತಿಯನ್ನು ಆ ಗುರು ಭಕ್ತಿಯನ್ನು ಬೆಳೆಯಿಸುವದಕ್ಕೆ ತಕ್ಕ ಪ್ರಯತ್ನವೆನ್ನೂ ಇವರ ಸರಳ ಹೃದಯವನ್ನೂ, ವಿನಯವನ್ನೂ, ವಿದ್ವತ್ತೆಯನ್ನೂ, ವರ್ಣಿಸಲು ಅಸದಳವು. ಇವರು ಸ್ವತಃ ದುಡಿಯುವದಿಷ್ಟೆ ಅಲ್ಲ. ಅದಕ್ಕೆ ಬೇಕಾಗುವಷ್ಟು ಹಣವನ್ನೂ ಖರ್ಚು ಮಾಡುವರು. ಇಂತಹವರಿಂದಲೇ ಹೋಟಗಿಯಲ್ಲಿ ಜಗದಾಚಾರ್ಯರ ಜಯಂತ್ಯುತ್ಸವವು ದಿನೇ ದಿನೇ ವೃದ್ಧಿಹೊಂದಹತ್ತಿರುವದು. ಅಸ್ತು! ಈ ಸಮಾರಂಭದಲ್ಲಿ ಜಯಂತ್ಯುತ್ಸವಪ್ರಾಪಿಗಳಾದ ಸರ್ವರಿಗೂ ಶ್ರೀ ಜಗದಾಚಾರ್ಯರು ಇಹೋಪ್ಯತಿಶಯವಾದ ಸುಖಸಂಪತ್ತುಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವೆನು

ಸೆಕ್ರೆಟರಿ
ವೀರಶೈವ ಶುಭಚಿಂತಕಸಂಘ, ಹೋಟಗಿ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ-ದಾರುಕಾಚಾರ್ಯರ ಜಯಂತೀಮಹೋತ್ಸವಗಳು

ಶ್ರೀಕ್ಷೇತ್ರ ಕಾಶೀ

ಭೂಕೈಲಾಸವೆನಿಸಿದ ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ವಿಶ್ವಾರಾಧ್ಯ ಮಹಾ " " ಸಂಸ್ಥಾನ ಜಂಗಮವಾಡೀ ಮಠದಲ್ಲಿ ಸದ್ಭಕ್ತಿಪ್ರಕಾರ ಈ ವರ್ಷವೂ ಶ್ರೀಜಗದ್ಗುರು ಏಕೋರಾಮಾಚಾರ್ಯರ ಮತ್ತು ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವಗಳು, ವೈಶಾಖ ಶುದ್ಧ ಅಷ್ಟಮಿಯಂತೆಯಾ ಮತ್ತು ವೈಶಾಖ ಶುದ್ಧ ಪಂಚಮಿ, ಮಿತಿಗಳಲ್ಲಿ ಅತಿ ವೈಭವದಿಂದ ನೆರವೇರಿದವು.

ವೈಶಾಖ ಶುದ್ಧ ಅಕ್ಷಯ್ಯತೃತೀಯಾ ಸೋಮವಾರ ಕ್ರಾತಃಕಾಲ ಶ್ರೀರಾಮನಾಥ ಮದಾಲಿಂಗಕ್ಕೂ ಶ್ರೀ ಏಕೋರಾಮಾಚಾರ್ಯರ ಲಿಂಗೋದ್ಭವಮೂರ್ತಿಗೂ ಗುರುಕುಲದ ವಿದ್ಯಾರ್ಥಿಗಳಿಂದ ಮಹಾಭಿಷೇಕ, ಅಷ್ಟ ವಿಧಾರ್ಚನಾ ಪೂಜಾವಿಧಾನ ಪೂರ್ವಕ ಬಿಲ್ವಾರ್ಚನೆಯು ಮಾಡಲ್ಪಟ್ಟತಲ್ಲದೆ. ಮಹಾ ಸಂಸ್ಥಾನ ಪದ್ಧತಿಪ್ರಕಾರ ಮಠದಲ್ಲಿರತಕ್ಕ ಸಮಸ್ತ ದೇವತೆಗಳಿಗೂ ಶೀತಕುಂಭಾಭಿಷೇಕವೂ ಮಾಡಲ್ಪಟ್ಟಿತು.

ಅನಂತರ ಸಂಧ್ಯಾಕಾಲದಲ್ಲಿ ರಂಭಾಸ್ತಂಭಾದಿಗಳಿಂದಲೂ ತಳಿರು ತೋರಣಗಳಿಂದಲೂ ವಿದ್ಯುದ್ದೀಪಗಳಿಂದಲೂ, ವಿವಿಧ ಪುಷ್ಪಮಾಲಿಕೆಗಳಿಂದಲೂ ಅಲಂಕೃತವಾದ ಕೈಲಾಸಮಂಟಪದಲ್ಲಿ, ಶ್ರೀ ಏಕೋರಾಮಾಚಾರ್ಯರ ಭಾವಚಿತ್ರವನ್ನು ಉಚ್ಚಪೀಠದಲ್ಲಲಂಕರಿಸಿ, ಶ್ರೀ ಜಗದಾಚಾರ್ಯರ ಅಷ್ಟೋತ್ತರಶತನಾಮಾವಳಿಯಿಂದಲೂ, ವೇದಮಂತ್ರಗಳಿಂದಲೂ ಪೂಜಿಸಿ, ಭಕ್ತಿಪೂರ್ವಕ ಭಜನೆಯು ಮಾಡಲ್ಪಟ್ಟಿತು. ತರುವಾಯ, ಭಗವತ್ಪಾದರವರಿಗೆ ಮಹಾಮಂಗಳಾರತಿಯಾಗಿ ಪ್ರಸಾದ ವಿನಿಯೋಗಗಳು ನಡೆದು ಆಚಾರ್ಯರ ಜಯಘೋಷದೊಡನೆ ಆ ದಿವಸದ ಕಾರ್ಯವು ಸಮಾಪ್ತಿಯನ್ನು ಹೊಂದಿತು

ಪುನಃ ವೈಶಾಖ ಶುದ್ಧ ೫ ಬುಧವಾರ ಬೆಳಿಗ್ಗೆ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಉದ್ದಿಶ್ಯ ಶ್ರೀ ಸಿದ್ಧೇಶ್ವರ ಮಹಾಲಿಂಗಕ್ಕೆ ಸದರಿ ಗುರುಕುಲದ ವಿದ್ಯಾರ್ಥಿಗಳಿಂದ ಮಹಾಭಿಷೇಕಾದಿ ಷೋಡಶೋಪಚಾರ ಪೂಜೆಯು ನೆರವೇರಿಸಲ್ಪಟ್ಟಿತು.

ತರುವಾಯ ಸಂಧ್ಯಾಕಾಲದಲ್ಲಿ, ಮತ್ತು ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದ ಶ್ರೀ ಸಿದ್ಧೇಶ್ವರ ದೇವಸ್ಥಾನದ ಮುಂಭಾಗದ ಅಂಗಳದಲ್ಲಿ ಶ್ರೀಜಗದ್ಗುರು ದಾರುಕಾಚಾರ್ಯ ಭಗವತ್ಪಾದರವರ ಭಾವಚಿತ್ರವನ್ನು ಪೀಠದಲ್ಲಿ ಮುಹೂರ್ತಗೊಳಿಸಿ, ವಿಧ್ಯುಕ್ತ ಪೂಜಾ ಭಜನಾದಿಗಳು ನಡೆದು, ಸಭೆಯು ನೆರೆಯಲ್ಪಟ್ಟಿತು. ಹುಬ್ಬಳ್ಳಿ ಬೆಂಗಳೂರು, ಮತ್ತು ಮಹಾರಾಷ್ಟ್ರದೇಶದ, ನಾಂಡಿ, ಉಸ್ಮಲ ವಸ್ಮೇರೆ ಗ್ರಾಮಗಳಿಂದ ಯಾತ್ರಾರ್ಥಿಗಳಾಗಿ ಬಂದಿದ್ದ ಮಹಾಜನರು ಈ ಮಹೋತ್ಸವಕ್ಕೆ ಭಾಗವಹಿಸಿದ್ದರಿಂದ ಸಭೆಗೆ ದ್ವಿಗುಣಿತವಾದ ಶೋಭೆಯುಂಟಾಗಿತ್ತು.

ಪ್ರಥಮದಲ್ಲಿ ವೀರಶೈವ ವಿದ್ವತ್ಸಂಘದ ಸೆಕ್ರೆಟರಿಗಳಾದ ವೇ॥ ವಿರೂಪಾಕ್ಷಸ್ವಾಮಿ ರೇಕುಳಗಿಮಠ ಇವರು ಪ್ರಸ್ತಾವನಾಪೂರ್ವಕ "ಜಯಂತೀ" ವಿಷಯದಲ್ಲಿಯೂ ಅನಂತರ ಸಂಘದ ಸದಸ್ಯರಾದ ರಾವಲು ಡಕೆ ಹಿರೇಮಠದ ವೇ॥ ಸದಾಶಿವಶಾಸ್ತ್ರಿಗಳು ಕಾವ್ಯತೀರ್ಥ ಇವರು "ಆಚಾರ್ಯರ ಲಿಂಗೋತ್ಪತ್ತಿ" ಯೆಂಬ ವಿಷಯದಲ್ಲಿಯೂ, ವೇ॥ ಶಂಕರಶಾಸ್ತ್ರಿಗಳು ಬೆಕ್ಕಿನಾಳ ಇವರು, "ಧರ್ಮದ ಅವಶ್ಯಕತೆ" ಈ ವಿಷಯದಲ್ಲಿಯೂ ವೇ॥ ಸಿದ್ಧಲಿಂಗಶಾಸ್ತ್ರಿ ಬಂಕಾಪೂರ ಇವರು "ಆಚಾರ್ಯರ ಕರ್ತವ್ಯ" ಈ ವಿಷಯದಲ್ಲಿಯೂ ಮತ್ತು ವೇ॥ ಷಡಕ್ಷರಶಾಸ್ತ್ರಿಗಳು ಸೋಲಾಪುರ, ವೇ॥ ಶ್ರೀ ಶಿವಾನಂದ ಸ್ವಾಮಿಗಳು ಕರ್ಜಗಿ, ವೇ॥ ಗುರುಲಿಂಗಶಾಸ್ತ್ರಿ ಸಾತಾರಾ ಇವರುಗಳು "ಆಚಾರ್ಯರ ಮಹಿಮೆ" ಯೆಂಬ ವಿಷಯದಲ್ಲಿಯೂ ಬಹು ಕಳಕಳಿಯಿಂದ ವ್ಯಾಖ್ಯಾನಮಾಡಿದರು

ಮತ್ತೊಂದು ಸಂತೋಷಕರವಾದ ಸಂಗತಿಯೇನೆಂದರೆ— ಈಶುಭಮುಹೂರ್ತದಲ್ಲಿ ಕಾಶೀ ವೀರಶೈವ ವಿದ್ವತ್ಸಂಘದವರಿಂದ, "ಶ್ರೀ ವಿಶ್ವಾರಾಧ್ಯ ವಾಚನಾಲಯ" ಯೆಂಬ ಹೆಸರಿನ ರೀಡಿಂಗ್ ರೂಮ್ (ವಾಚನಾಲಯ) ವು ಸ್ಥಾಪಿಸಲ್ಪಟ್ಟಿತು. ಶ್ರೀ ಚಿಕ್ಕವೀರ ಸ್ವಾಮಿಗಳು ಸದರಿ ವಾಚನಾಲಯ ಸ್ಥಾಪನೆಯ ಉದ್ದಿಶ್ಯ, ಇದು ಸರ್ವವಾ ನಿರಾತಂಕವಾಗಿ ನಡೆಯಲಿಕ್ಕೆ ಮಾಡತಕ್ಕ ಕರ್ತವ್ಯ ಮತ್ತು ವಾಚಕ ಮಹಾಶಯರು ಪಾಲಿಸತಕ್ಕ ನಿಯಮ ಮೊದಲಾದ ವಿಷಯಗಳನ್ನು ವಿಶದಪಡಿಸಿದರು.

ಸದರಿ ವಾಚನಾಲಯಕ್ಕೆ ಶ್ರೀ ಕಾಶೀಜಗದ್ಗುರುಗಳು ಸಂಘದವರ ಪ್ರಾರ್ಥನೆಮೇರೆ ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ ಭಾಷೆಗಳ ಮಾಸಿಕ, ಪಾಕ್ಷಿಕ-ವಾರ ದೈನಿಕ ಮುಂತಾದ ಸುಮಾರು ೨೨ ಪತ್ರಿಕೆಗಳನ್ನು ದಯಪಾಲಿಸಿರುತ್ತಿರಾಗಿ ತಿಳುಹಿಸಲು ಬಹು ಆನಂದವೆನಿಸುತ್ತದೆ.

ಮತ್ತು ಈ ಸಮಯದಲ್ಲಿ ಶ್ರೀ ಶಿವಾನಂದಸ್ವಾಮಿ ಕರ್ಜಗಿ ಇವರು "ಲೋಕಮತ" ಯೆಂಬ ಕನ್ನಡ ವಾರಪತ್ರಿಕೆಯನ್ನು ವಾಚನಾಲಯಕ್ಕೆ ತರಿಸಿಕೊಡುತ್ತೇವೆಯೆಂದು ವಾಗ್ದಾನಮಾಡಿದರು. ಅನಂತರ ಭಗವತ್ಪಾದ ಶ್ರೀ ದಾರುಕಾಚಾರ್ಯರ ಭಾವಚಿತ್ರಕ್ಕೆ ಮಹಾಮಂಗಳಾರತಿ ರಾಜೋಪಚಾರಗಳು ನಡೆದು ಪ್ರಸಾದ ವಿನಿಯೋಗವು ಮಾಡಲ್ಪಟ್ಟಿತು.

ಶ್ರೀ ಜಗದಾಚಾರ್ಯರು ತಮ್ಮ ಸೇವೆಯಲ್ಲಿ ನಿರತರಾಗಿರುವ ಸಮಸ್ತ ಗುರುಭಕ್ತರಿಗೂ ಶುಭಪರಂಪರೆಯು ಸ್ಥಿರವೆಂಬ ಜಗದಾಚಾರ್ಯರ ಜಯಘೋಷದೊಡನೆ ಜಯಂತೀ ಮಹೋತ್ಸವವು ಸಮಾಪ್ತಿಯನ್ನು ಹೊಂದಿತು.

ತಾ॥ 4-5-1938 ಸೆಕ್ರೆಟರಿ,
ಬೆನಾರಸ್ ಸಿಟಿ ವಿರೂಪಾಕ್ಷಸ್ವಾಮೀ ರೇಕುಳಗೀ.

ಮುಳೂರು

ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿಕಾರಿಪುರ ತಾಲೂಕು ಮುಳೂರು ಗ್ರಾಮದಲ್ಲಿ ವೇ॥ ವೀರಬಸವಯ್ಯನವರು ಮಿ ಭರಮಪ್ಪ ಜೋಗಿಹಳ್ಳಿ ವೀರಶೈವ ಕ್ಷತ್ರಿಯ ಮಿ ಪಟೇಲ್ ಚನ್ನಬಸಪ್ಪಗೌಡ್ರು ಮುಂತಾದ ಭಕ್ತಮಾಹೇಶ್ವರರು ತಾ॥ ೨-೫-೩೮ಲ ದಿವಸ ಶ್ರೀ ವೀರೇಶ್ವರನ ಗುಡಿಯಲ್ಲಿ ಏಕೋರಾಮರಾಧ್ಯರ ಜಯಂತ್ಯುತ್ಸವವನ್ನು ಬಹು ವೈಭವದಿಂದ ನೆರವೇರಿಸಿದರು. ಸ್ತ್ರೀತಃಕಾಲ ಆಚಾರ್ಯಮೂರ್ತಿಗೂ ವಿಶ್ವೇಶ್ವರನಿಗೂ ವೀರೇಶ್ವರನಿಗೂ ಮಂತ್ರಾಭಿಷೇಕ ಷೋಡಶೋಪಚಾರಗಳು ನಡೆದ ಬಳಿಕ ಪಾದ್ಯ ಭಜನೆ ಮುಂತಾದ ವೈಭವದೊಡನೆ ರಾಜಬೀದಿಯಲ್ಲಿ ಪಂಚಾಚಾರ್ಯಮೂರ್ತಿಯ ಮತ್ತು ವೀರೇಶನ ಉತ್ಸವವು ಹೊರಟಿತು. ಅಲ್ಲಿಂದ ಮಾಳಗೆಂಬ ಭಕ್ತನ ಸ್ಥಾನಕ್ಕಾಗಿ ನಿರ್ಮಿಸಿದ ಮಾಲೇಶ್ವರನೆಂಬ ಗುಡಿಗೆ ತಲ್ಪಿತು. ಮಾಲೇಶ್ವರನಿಗೆ ಷೋಡಶೋಪಚಾರ ಪೂಜೆಯು ನಡೆದ ಬಳಿಕ ಎಲ್ಲರು ಆಚಾರ್ಯರ ಜಯಜಯಕಾರಗಳೊಡನೆ ಪ್ರಸಾದವನ್ನು ಸ್ವೀಕರಿಸಿದರು ಉತ್ಸವವು ಸ್ವಸ್ಥಾನವನ್ನು ತಲುಪಿತು. ಹೀಗೆ ಗುರುಜಯಂತಿಗೆ ಎಲ್ಲರೂ ಭಾಗಿಗಳಾಗಿದ್ದು ಬಿ ಪುಟ್ಟಸ್ವಯಂಬುವರು ಮಾತ್ರ ಏಕೆ ಈ ಗುರುಜಯಂತಿಯಲ್ಲಿ ಭಾಗವಹಿಸಲಿಲ್ಲವೊ ತಿಳಿಯದು. ಸದರಿಯವರು ಗುರುಭಕ್ತಿಯಲ್ಲಿ ಬೇಸರ ಗೊಳ್ಳಬಾರದು. ಈ ಗ್ರಾಮದಲ್ಲಿ ಗುರುಗಳ ಉತ್ಸವವು ನೆರವೇರಿದ್ದು ಇದೇ ಪ್ರಥಮವು. ವೇ॥ ವಿ ಮಠದ ಯಿವರು ಗ್ರಾಮವನ್ನು ಸುಧಾರಣೆಗೆತರಬೇಕೆಂದು ಕಂಕಣಬದ್ಧರಾಗಿ ನಿಂತಿದ್ದಾರೆ. ಸರ್ವಭಕ್ತರು ಗುರುಭಕ್ತಿಯಲ್ಲಿ ಪ್ರಖ್ಯಾತಿಗೊಳ್ಳುವದಲ್ಲದೆ ಗ್ರಾಮವೂ ಕೂಡ ಸುಧಾರಿಸುವಂತೆ ಪಂಚಾಚಾರ್ಯರು ಮಂಗಲವನ್ನೀಯಲಿ.

ಓರ್ವ ಗುರುಭಕ್ತ.

...ರು ಗುಡ್ಡುಗೆಮಠ

ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಕುಪ್ಪೂರು ಶ್ರೀ ಮರುಳಶಿದ್ಧೇಶ್ವರಸ್ವಾಮಿ ಗದ್ದುಗೇಮಠದ ಪಾರಪಟ್ಟಾಧ್ಯಕ್ಷ ಶ್ರೀ ಚಂದ್ರಶೇಖರಸ್ವಾಮಿಗಳವರು ಮೇಲ್ಕಂಡ ತಮ್ಮ ಗದ್ದುಗೇ ಮಠದಲ್ಲಿ ಇದೇ ವೈಶಾಖ ಶುದ್ಧ ತದಿಗೆ ತಾ॥ ೨-೫-೩೮ಲ ರಲ್ಲಿ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನು ಮತ್ತು ಇದೇ ವೈಶಾಖ ಶುದ್ಧ ಪಂಚಮಿ ತಾ॥ ೪-೫-೩೮ಲ ರಲ್ಲಿ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಯನ್ನು ವೈಭವದೊಡನೆ ನೆರವೇರಿಸಿದರು. ಈ ಮಹೋತ್ಸವಕ್ಕೆ ನಾನಾಕಡೆಯಿಂದ ಅನೇಕ ಜನ ಮಹಿಸೀಯರು ದಯಮಾಡಿಸಿದ್ದರು. ಆಚಾರ್ಯಭಗವತ್ಪಾದರವರ ಭಾವಚಿತ್ರಪಟಗಳನ್ನು ವಿಧ್ಯುಕ್ತವಾಗಿ ಪೂಜಿಸಿ ಮಹಾಮಂಗಳಾರತಿ ವೈಗೈರೆ ಸೇವಾದಿಗಳನ್ನು ನಡಸಿ ಗುರು ಸಾರ್ವಭೌಮರವರ ಜಯಘೋಷವನ್ನು ಮಾಡಿ ಪ್ರಸಾದವಿ - ಸ್ವೀಕರಿಸಿದ ನಂತರ ಸರ್ವರಿಗೂ ಜಯಂತಿಸಮ್ಮೇಂದ ಸಂತರ್ಪಣೆಯು ನಡೆಸಲ್ಪಟ್ಟಿತು.

(ಓರ್ವ ಪ್ರೇಕ್ಷಕ)

ಚಂದಾದಾರರಲ್ಲಿ ನಿಜ್ಞಾಪನೆ

ಈ ಪತ್ರಿಕೆಯು ಜನ್ಮವತ್ತಿ ವೈಶಾಖ ಶು॥ ಪಂಚಮಿಗೆ ಕನ್ನೊಂದು ವರ್ಷಗಳು ತುಂಬಿ ೧೫ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದ ಪತ್ರಿಕೆಯನ್ನು **ವಿ ಪಿ ಮಾಡಬೇಕಾಗುತ್ತದೆ ವಿ ಪಿ ಮಾಡುವುದ**ರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ ೮ ಆಣೆಗಳನ್ನು ಮನಿಆರ್ಡರ್ ದ್ವಾರಾ ಕಳುಹಿಸ ಬೇಕು. **ವಿ ಪಿ ಮಾಡಿದರೆ ೩ ರೂ ೧೩ ಆಣೆ** ಬೀಳುವುದು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹೆಣಸನ್ನೆಲ್ಲ ಒಬ್ಬರುಕೂಡಿಸಿ ಒಂದೇ ಸಾರಿ ಮನಿಆರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಆರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ತಪ್ಪಿಯಿಟ್ಟು ಮನಿಯಾರ್ಡರ್ ತಿಳಿಸಬೇಕು ನಂಬರು ತಿಳಿಸಿದಿದ್ದರೆ ತೊಂದರೆಯಾಗುವುದು

ಸಂ —

ಪಂಚಾಚಾರ್ಯಪ್ರಭಾ.

ವರ್ಷ ೧೫ ನೆಯ ವರ್ಷ ॥ ೧೬ ನೇ ಸೋಮವಾರ

ಧರ್ಮಾಧರ್ಮಸ್ವರೂಪ.

ನಮ್ಮ ಭರತಖಂಡದ ಸೂರ್ಯಾಚಾರ್ಯರು ಒಳ್ಳೆಯ ವಿಧಗಳ ಧರ್ಮಾಧರ್ಮಗಳನ್ನು ಅನಾಕಾಲದಿಂದಲೂ ಕರ್ಮಾನುಷ್ಠಾನಗಳನ್ನು ಧರ್ಮಸಾಧಗಳಿಗಾಗಿ ತೋರಿಸಿರುತ್ತಾರೆ ಇವುಗಳಿಗೆ ವಿರುದ್ಧವಾದ ದುರಾಚಾರಗಳನ್ನು ದುಷ್ಕರ್ಮಗಳನ್ನು, ಅಧರ್ಮಗಳನ್ನೂ ಸಹ ತೋರಿಸಿರುತ್ತಾರೆ ಇವುಗಳಲ್ಲಿ ಸದಾಚಾರ ಸುಕರ್ಮದವರ್ಗಗಳನ್ನು ಆಸೆ ಸಂಶಯವುಳ್ಳವರಿಂದ ಪರಿಯನ್ನು ಬಿಟ್ಟು ಪರಿಶುದ್ಧಿ ಗೊಂಡ ಹಾವಿನಿಂತೆ ಆತ್ಮನು ಬಹುಕಾಲದಿಂದ ಆವರಿಸಿದ ಜನ್ಮಕರ್ಮವಾದ ಪಾಶವಿದ ಬಿಡುಬ್ಬಿಸುವಾಗಿ ಸುಜ್ಞಾನೋದಯವುಳ್ಳವನಾಗಿ ಮೋಕ್ಷಾನಂದಸೌಖ್ಯವನ್ನನುಭವಿಸುವನು ಇದಕ್ಕೆ ವಿರುದ್ಧವಾಗಿ ಪಾಪ ಚಾರಗಳನ್ನು, ದುಷ್ಕರ್ಮಗಳನ್ನು, ಅಧರ್ಮಗಳನ್ನೂ ಅನುಸರಿಸುವುದಾದರೆ ಆತ್ಮನು ಪಾಪಪಂಕದಿಂದ ಮುಚ್ಚಲ್ಪಟ್ಟವನಾಗಿ ಆಕಾರಕ್ಕೆ ಎನೆನೆ ಮಣ್ಣಿನ ಹೆಂಟೆಯಂತೆ ಜರ್ಝರಿತನಾಗಿ ನಾನಾವಿಧ ಹೀನಯೋನಿಗಳಲ್ಲಿ ಜನ್ಮವನ್ನು ಧರಿಸಿ ದುಃಖಭಾಗಿಯಾಗುವನು. ಇಂಥ ದುಃಖವನ್ನು ಅನುಭವಿಸಲಿಕೆಂಬಿಚ್ಛೆಯುಳ್ಳ ಆತ್ಮನು ದೇಶಾಚಾರ ಜಾತ್ಯಾಚಾರ್ಯಧರ್ಮಗಳಲ್ಲಿ ಅನಕ್ಕಾಗುತ್ತಾನೆ ಮತ್ತು ಅಂಥ ಕಲುಷಿತ ಆತ್ಮನಿಗೆ ಧರ್ಮಾರ್ಗಗಳಲ್ಲಿ ಯೇ ಮನಃಪ್ರತಿಯಾಗುವುದು ಸ್ವಭಾವಸಿದ್ಧವಾಗಿದೆ. ಸಕಲ ಆತ್ಮರೂ ಸಾಪದಿಂದ ಬಿಡಲ್ಪಟ್ಟವರಾಗಿ ಪರಮಾತ್ಮನ ಕೃಪೆಗೆ ಭಾಗಿಗಳಾಗಲೆಬ್ಬಿಸಿದಿಂದ ನಮ್ಮ ಪೂರ್ವಾಚಾರ್ಯರು ಆಚಾರ, ಕರ್ಮ, ಧರ್ಮ ಮುಂತಾದ ನ್ಯಾಯಮಾರ್ಗವನ್ನು ಹಾಕಿ ಕೊಟ್ಟಿರುತ್ತಾರೆ. ಮತ್ತು ಶ್ರೀ ಪರಮೇಶ್ವರನು ಅವಕ್ಕೆ ಅನುಕೂಲವಾದ ಮಾನವದೇಹವನ್ನು ಸಹ ಅನುಗ್ರಹಿಸಿರುತ್ತಾನೆ. ಜೀವನಿಗೆ ಕರ್ಮಗಳು ಪರಿಪಕ್ವವಾದ ಹೊರತು ಜ್ಞಾನವು ಉದಯಿಸುವುದಿಲ್ಲ ಜ್ಞಾನವು ಉದಯವಾಗದ ಹೊರತು ನಿರಂತರ ಆನಂದವು ಉದಯಿಸುವುದಿಲ್ಲ. ಅನುಭವಸದ ಪೂರತು ಕರ್ಮಗಳು ಪರಿಪಕ್ವವಸ್ಥೆಯನ್ನು ಹೊಂದುವುದೇ ಇಲ್ಲ ಆದುದರಿಂದ ಆಯಾಯ ಕರ್ಮಫಲಗಳನ್ನು ಆಸ ಪವಿಸುವುದಕ್ಕಾಗಿ ಆಗಾಗ್ಗೆ ಆಯಾಯ ಜೀವರಿಗೆ ಪರಮೇಶ್ವರನು ಭೌತಿಕಶರೀರಗಳನ್ನು ಕೊಡುತ್ತ ಬರುವನು ಜೀವನು ತಿಂದಿನ ಕರ್ಮಾನುಸಾರವಾಗಿ ಶರೀರವನ್ನು ಧರಿಸಿದಮೇಲೆ ಭೋಗಗಳಿಂದ ಕರ್ಮಗಳು ಪಕ್ವಗಳಾಗುವವು ಆನಂತರ ಜೀವನು ಪುಣ್ಯಿಗೊಳ್ಳುವನು ಆಗ ಪರಮೇಶ್ವರನು ಜ್ಞಾನವನ್ನು ಉಂಟುಮಾಡಿ ನಿತ್ಯಾನಂದರೂಪವಾದ **ಮೋಕ್ಷಸೌಖ್ಯವನ್ನು** ಪ್ರಕಾಶಗೊಳಿಸುವನು ಇದು ಪರಮೇಶ್ವರನ ನಿಯಮವಾಗಿರುತ್ತದೆ ಆದರ ಪರಮೇಶ್ವರನು ಸರ್ವಶಕ್ತರೂ ಪರಮ ಕಾರುಣಿಕರೂ ಆದಮೇಲೆ ಒಂದೊಂದು ಜೀವನು ಮಾಡಿದ ಕರ್ಮಗಳಿಗನು ಸಾರವಾಗಿ ದೇಹವನ್ನು ದೆರುವಂತ ಮಾಡಿ ಕ್ರಮವಾಗಿ ಮೋಕ್ಷಲಕ್ಷ್ಯವನ್ನು ಕೊಡುವುದೇ, ಎಳಕಾಲದಲ್ಲಿಯೇ ಎಲ್ಲ ಜೀವರುಗಳ ಕರ್ಮಗಳನ್ನು ಗಂಭಿರಸ್ಥಿತಿಗೆಳಸಿ ಮೋಕ್ಷಾನಂದವನ್ನು ಏಕೆ ಅನುಗ್ರಹಿಸಬಾರದೆಂದು ಅನೇಕರು ಆಕ್ಷೇಪಿಸುವುದುಂಟು ಆದರ ಪರಮೇಶ್ವರನಾದರೂ ಹೆಚ್ಚು ಕಡಿಮೆ ಯೆಂಬ ಮಾತೆಯಿಲ್ಲದೆ ಒಂದೇ ಕಾಲದಲ್ಲಿ ಎಲ್ಲ ಜೀವರ ಮೇಲೆ ಅನುಗ್ರಹತೆರನಾಗಿ ಹರಿಡಿದ್ದರೂ ಪರಿಪಕ್ವಗಳಾದ ಜೀವರುಗಳು ಮಾತ್ರ ಬಂಧದಿಂದ ಬಿಡುಗಡೆಯಾಗುವರು ಉಳಿದ ಜೀವರು ಕಾಲಕ್ರಮದಿಂದ ಬಿಡುಗಡೆಯಾಗುವರು ಜ್ಞೋಕದಲ್ಲಿ ಸೂರ್ಯರಶ್ಮಿಗಳು ವಿಕಸಿಸಲು ದಲ್ಲಿ ಎಲ್ಲಾ ಕವ ಲಗಳ ಮೇಲೆ ಬಿದ್ದರೂ ಆ ಕಮಲ ಗಳೆಲ್ಲವು ವಿಕಸಿಸಲಾಲದೆ ಅರಳುವುದಿಲ್ಲ ಅವುಗಳಲ್ಲಿ ಯಾವ ಕಮಲಗಳು ಪರಿಪಕ್ವಗಳಾಗಿರುತ್ತವೆಯೋ ಆವು ಗಳು ಮಾತ್ರ ಅರಳುತ್ತವೆ ಅಪಕ್ವಗಳಾದ ಕಮಲಗಳು ಕಾಲಕ್ರಮದಿಂದ ಅರಳಬೇಕಾಗುತ್ತವೆ ಈ ವಿಷಯದಲ್ಲಿ ಶ್ರೀವಾಕ್ಯಕಾರರು ಸ್ಪಷ್ಟಪಡಿಸಿ ಪ್ರಮಾಣವಾಕ್ಯಗಳನ್ನು ಪಹರಿಸಿರುತ್ತಾರ

ಅಧಿಕಾಸ ಯದಾ ಜೀವಸ್ತಪೋಭಿರುತಪಂ ಜಗತ್ ।
ವಿಪೇಕಾಸಾಭ ಪಾಪಸ್ಯ ತದೊಭಯಕಮಾಪ್ನುಯಾತ್ ॥
ಸ್ವೈಭಂ ವಿಸಾ ನಿರಾಲಂಬಾ ಧ್ಯಾಕ್ಷಂತೀ ಭೋಗಿಣೋ ಯಥಾ ।
ಏವಾ ವಿಸಾ ನಿರಾಲಂಬಾ ಧ್ಯಾಕ್ಷಂ ಹಿ ಆಗತ್ಯಥಾ ।
ಸ್ಯಾಧೀಸಾಂ ಛಿಜ್ಞಾ ಯಪ್ತಿತ್ ಪ್ರತಿಬಿಸ್ಟಾ ಸ್ವಭಾವತಃ ।
ವಿಕಸ್ಯಪಾದ್ಯಾ ಪಾಂ ಪ್ರತಾಕ್ಷಸ್ಯ ಪಕ್ಷಃ ।
ಬುಧ್ಧಾನ ವಿಶ್ವಸ್ಯೈಯಂ ಸೌಂಶಸ್ಯಾಸ್ಯಾರಂ ಜಡಿಶಃ ।
ತಣಸಾವಿಶ್ವಸ್ಯೈಯಂ ವಿಶಸ್ಯಂಯಾಪೇಕ್ಷಣ ॥

ಸೂರ್ಯನಿಲ್ಲದಿದ್ದರೆ ಜಗತ್ತೆಲ್ಲವೂ ಅಂಧಕಾರಮಯವಾಗುವಂತೆ ಕರ್ತನಾದ ಪರಮೇಶ್ವರನಿಲ್ಲದಿದ್ದಲ್ಲಿ ಜಗತ್ತು ತನೋನುಮವಾಗುತ್ತಿದ್ದಿತು ನೈರ್ಮಲ್ಯವಿಲ್ಲದೆಹೋದರೆ ರುಗಿಗೆಲ್ಲರೂ ಯಾವಾಗಲೂ ಕಷ್ಟಪಡುವಂತೆ ಪರಮೇಶ್ವರನಿಲ್ಲದಿದ್ದಲ್ಲಿ ಸಕಲ ಪ್ರಾಣಿಗಳೂ ಆನಂದವಿಲ್ಲದೆ ಯಾವಾಗಲೂ ಕ್ಲೇಶಪಡಬೇಕಾಗುವುದು ಸಕಲಶಾಸ್ತ್ರಗಳೂ ಸಹ ಪರಮೇಶ್ವರನು ಜನಸಮಗಣರೂಪನಾದ ಮಹಾರೋಗವನ್ನು ನಾಶಗೊಳಿಸುವನು ಇದು ಅವನ ಸ್ವಭಾವಸಿದ್ಧವಾದ ಗುಣವಾಗಿರುತ್ತದೆ. ಕ್ಷೇಶಕರವಾದ ಈ ಘೋರ ಸಂಸಾರವಿಷವನ್ನೆತ್ತುವ ಅವಾದಿಕಾಲದಿಂದ ಮುಂದು ಮುಂದು ಬೆಳೆದ ಹಾಗೆಲ್ಲಾ ಪರಮೇಶ್ವರನು ಅವನ್ನು ನಾಶಗೊಳಿಸುತ್ತಲೇ ಬಂದಿರುವನು ಹೀಗೆ ಪರಮ ಕಾರುಣಿಕನಾದ ಪರಮೇಶ್ವರನು ಸಕಲಜೀವಿಗಳ ಮೇಲೆ ಅಗಾಧ್ಯಹೃಷ್ಯಾಯನು ಪ್ರಸರಿಸಿದ್ದರೂ ಬಹುಕಾಲದಿಂದ ಪಾಪಪಂಕದಲ್ಲಿ ಮುಳಿಗೇಳುವುದರಿಂದ ಅನೇಕ ಆತ್ಮರು ಆಜ್ಞಾನಾವರಣದಿಂದ ಕೂಡಿ ಮರಾ ಚಾರಗಳನ್ನು, ದುಷ್ಕರ್ಮಗಳನ್ನು ಮಾಡುತ್ತ ಅಧರ್ಮಾನುಷ್ಠಾನದಲ್ಲಿ ನಿರತರಾಗಿ ಹೋಗಿರುತ್ತಾರೆ ಇದರಿಂದ ಜೀವಾತ್ಮರು ಪರಮೇಶ್ವರನ ಕಡೆಗೆ ತಿರುಗುವುದೇ ಕಷ್ಟವಾಗಿದೆ. ಹೀಗೆ ಸಂಸಾರಾಭಿಮುಖವಾದ ಜೀವಾತ್ಮನು ಕ್ರಮಕ್ರಮವಾಗಿ ಸದಾಚಾರ, ಸುಕರ್ಮ, ಶುದ್ಧ ಧರ್ಮಗಳಲ್ಲಿ ಅಸಕ್ತನಾಗಿ ಪರಮೇಶ್ವರನಲ್ಲಿ ಸಹಜಪ್ರೇಮವನ್ನು ತೋರಿಸುತ್ತ ಬಂದರೆ ಒಡಗಿರುವ ಬಂಧವು ವಿನೀಚಿನೆಯಾಗಿ ನಿಜಸ್ವಿತಿಯನ್ನು ಪಡೆಯುವನು ಅದಕ್ಕಾಗಿಯೇ ಪೂರ್ವಾಚಾರ್ಯರೂ ಧರ್ಮ, ಕರ್ಮ, ಸದಾಚಾರಗಳೆಂಬ ಸನ್ಮಾರ್ಗಗಳನ್ನು ಕಲ್ಪಿಸಿರುತ್ತಾರೆ.

ರಾಜಪುತ್ರರ ವಿವಾಹಮಹೋತ್ಸವ

ನಿನ್ನೆಯದಿವಸ (ಬಹುಧಾನ್ಯಸಂವತ್ಸರದ ವೈಶಾಖ ಬಹುಳ ಪಾಡ್ಯಮಿ ಭಾನುವಾರ ಪಬ್ಬಿತಕಾಲ) ಯದು ವಂಶಪ್ರವರ್ತಿರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರವರಿಗೂ, ಚಾರಕಾಲಸಂಸ್ಥಾನದ ಮಹಾರಾಜಾಧಿರಾಜ ತಿಘಾದಾರಿ ಖಿಲ್‌ಮುಲ್ಕ್ ಅರಿಕೆದರನಸಿಂಗ್ ಜು ದೇವ ಬಹದ್ದೂರ್‌ರವರ ಸಹೋದರಿಯವರಾದ ಸೌಭಾಗ್ಯವತಿ ಸತ್ಯಪ್ರೇಮಕುಮಾರೀ ದೇವಿಯವರಿಗೂ ಅರಮನೆಯ ಕಲ್ಯಾಣಮಂಟಪದಲ್ಲಿ ವಿವಾಹ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ವದೂವರರ ಕಲ್ಯಾಣಮಂಟಪವು ಅಸಸ್ಯಶಸಾದ ಸೌಂದರ್ಯದಿಂದ ಪ್ರೇಕ್ಷಕರ ಕಣ್ಮನಂಗಳನ್ನು ಬಹುವಾಗಿ ಆಕರ್ಷಿಸುತ್ತಿತ್ತಲ್ಲದೆ ಆರಸ ನೆಯ ಧರ್ಮಾಧಿಕಾರಿಗಳು, ಮಹಾವಿದ್ವಾಂಸರೂ, ಅಖಿಲರಾಜಬಂಧುಗಳೂ ಸರ್ವಾಧಿಕಾರಿಗಳೂ, ಮಂತ್ರಿವರ್ಯರೂ, ಉಪಮಂತ್ರಿಗಳೂ, ನ್ಯಾಯಾಧಿಪತಿಗಳೂ, ಇತರ ಸರ್ಕಾರೀ ಉದ್ಯೋಗಿಗಳೂ, ಪ್ರಜಾಪ್ರಮುಖರೂ, ಅಗಣಿತವಾಗಿ ಆಗಮಿಸಿ ನಿಯಮಿತವಾದ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತರು. ದೇಶೀಯ ವಿದೇಶೀಯ ವಾದ್ಯವೃಂದನಿಗಳು ಸಭೋಪಯುಂಡ ಲವನ್ನು ವ್ಯಾಪಿಸಿದ್ದವು ಸುಪ್ರಸಿದ್ಧರಾದ ಗವಾಯಿಗಳು ಪುಟ್ಟರ ಗಾನಾಲಾಪಗಳು ಕರ್ಣಾನಂದವನ್ನುಂಟುಮಾಡುತ್ತಿದ್ದುವು ಶ್ರೀ ರಾಜಕುಮಾರರು ಕಕ್ಷಬಿಚಿತವಾದ ಅಬಾಜರಿಯಿಂದೊಡಗೂಡಿದ ಭವ್ಯಗಜಾನನ್ನಾರೋಹಿಸಿ ಮಹೋತ್ಸವಮನೆದನೆ ಅರಮನೆಯ ಮುಂಭಾಗದ ಲ್ಲಿಳಿದು ಕಲ್ಯಾಣಮಂಟಪಕ್ಕೆ ಬಿಜಯಂಗೈಸಿದರು. ರಾಜಕುಮಾರರ ಕಡೆಯ ಪುರೋಹಿತರುಗಳು, ರಾಜಕುಮಾರಿಯ ಕಡೆಯ ಪುರೋಹಿತರು ನೂತನ ವಧೂವರರ ನೋತ್ರ ಸೂತ್ರ ಪ್ರವರಗಳನ್ನು ಹೇಳುತ್ತ ಮಂಗಲದ್ಯಾವಳಿಗಳನ್ನು ಪಠಿಸುತ್ತ ಕಾಂಚನಪೀಠಾಸನ ರೂಢ, ಪರಸ್ಪರನಿರೀಕ್ಷಣ, ಗುಡಚೀರಿಕಾವಕೀರ್ಣನ, ಕನ್ಯಾಪ್ರದಾನ, ಅಕ್ಷತಾರೋಪಣ, ಪರಸ್ಪರಸ್ವಯಂವರ ಮಾಲಿತಾಧಾರಣ, ಕಂಕಣಧಾರಣ, ಮಾಂಗಲ್ಯಧಾರಣ, ಪಾಣಿಗ್ರಹಣ, ಲಾಜಾಹೋಮ, ಅಗ್ನಿಪ್ರದಕ್ಷಿಣ, ಸಪ್ತ ಪದಿ ಮುಂತಾದ ವೈವಾಹಿಕವಿಧಾನಗಳೆಲ್ಲವನ್ನೂ ಬಹು ಸಂಭ್ರಮದಿಂದ ನೆರವೇರಿಸಿದರು. ಮಹಾಸಭ್ಯಳಿಗಳವರು ಮತ್ತು ಶ್ರೀಮಮ್ಮಯ್ಯರಾಜರು ಹಸಸ್ಯುಖಿಗಾಗಿ ಮಂಟಪದ ಉತ್ತರಶಾಖ್ಯದಲ್ಲಿ ಉನ್ನತ ಸುವರ್ಣ ಸಿಂಹಾಸನಗಳನ್ನಲಂಕರಿಸಿ ವಿವಾಹಪ್ರಭೆಯವನ್ನು ಕೊನೆಯ ವರೆಗೂ ನೋಡುತ್ತಲಿದ್ದರು ಸುಮಾರು ಹನ್ನೊಂದು ಗಂಟೆಗೆ ಈ ಕಾರ್ಯಕಲಾಪಗಳೆಲ್ಲಾ ಮುಗಿವುವು ಸಭೀ ರಿಗೆ ಆನಂದರ ಸಾರ್ವಾದಾಸಾನಂದನಾಗಿ ಪುಷ್ಪತಾಂಬೂ ಲಾದಿ ವಿನಿಯೋಗಗಳು ನಡೆದುವು ಸ್ವಜಗಳು ನೋನೆಕಪಾರ್ಥಗಳನ್ನು ತುಂಬಿರುವ ರೇಷ್ಮೆಯ ಸಣ್ಣ ಸಣ್ಣ ಚೀಲಗಳನ್ನು ಪೆಂಚಿದರು. ಸುವರ್ಣಾಲಂಕಾರಾಭಿ ಪ್ರದಿಕರಿಗೆ ಕೊಡಲ್ಪಟ್ಟವು ಪರಿಕಾಲಯ, ಶೃಂಗೇರಿ ಮಠ, ರಂಭಾಪುರಿಮಠ, ಉಜ್ಜಯಿನಿಮಠ ಮುಂತಾದ ಅನೇಕ ಮಠಾಧಿಪತಿಗಳು ಶ್ರೀಮುಖಗಳೊಂದಿಗೆ ದಿವ್ಯಾಂಬರಗಳನ್ನು ತಮ್ಮ ತಮ್ಮ ಪಂಡಿತರ ದ್ವಾರಾ ಕಳುಹಿಸಿಕೊಟ್ಟಿದ್ದರು. ಆ ವಿಶ್ವಪತ್ರಿಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ವ್ಯಾಸಾದಲ್ಲಿ ಉಚ್ಚವದಿಂದ ಬರಮಾಡಿಕೊಂಡಿದ್ದರು ಆ ಪಂಡಿತರೆಲ್ಲರೂ ಒಬ್ಬರ ಹಿಂದೊಬ್ಬರಂತೆ ಸಾಲ್ವಿಡಿದು ವಾರ್ವಾಕಾಪರಮೇಶ್ವರ ರಿಂತೆ ಮಂಟಪದಲ್ಲಿ ಶೋಭಿಸುತ್ತಿರುವ ನೂತನ ರಾಜ ವಂಪತಿಗಳಿಗೆ ಕ್ರಮದಿಂದ ವಲಸಮರ್ಪಣ ಮಂತ್ರಾಕ್ಷ ತಾರೋಪಣಗಳಿಂದ ಆಶೀರ್ವದಿಸಿ ವಿಶ್ರಾಂತ್ಯಗಳನ್ನು, ಸಮರ್ಪಣಮಾಡುವ ಮೂಲಕ ರಾಜಭಕ್ತಿಪ್ರಮೆಯನ್ನು ಪ್ರಕಾಶಗೊಳಿಸಿದರು ಬಳಿಕ ಮಹಾಪ್ರಭುಗಳವರ ಪರ ವಾಗಿ ಸರ್ವಾರಂ ರೆಪ್ಪತ್ತನ್ನೊಪ್ಪಿಸಿದರು ಬಳಿಕ ಸರ್ವಾ ರೂ ರಾಜಬಂಧುಗಳೂ ಹೊಗೀಧವನ್ನೊಪ್ಪಿಸಿದರು. ಸುವಾಸಿನಿಯರು ಆರತಿಯನ್ನು ಬೆಳಗಿದವಂತರ ವಾದ್ಯ ಗಳು ಭೋರ್ಗರೆಯುತ್ತಿರಲು ೨೧ ಕುಶಾಲತೋಪುಗಳು ಹಾರಿಸಲ್ಪಟ್ಟವು.

ಮಹಾಪ್ರಭುಗಳವರು ಬ್ರಾಹ್ಮಣಾದಿ ಸಕಲ ವರ್ಣೀಯರಿಗೆಲ್ಲಾ ಅವರವರಿಗನುಕೂಲವಾಗಿರುವಂತೆ ಮೃಷ್ಟಾನ್ನ ಭೋಜನದ ವಿರ್ಪಾಡನ್ನು ಮಾಡಿಸಿದರು. ಸಾಯಂ

ಕಾಲದವರೆಗೂ ವರಾಹಸ್ವಾಮಿ ದೇವಾಲಯದಲ್ಲೂ ತ್ರಿನಯನೇಶ್ವರಸ್ವಾಮಿಯ ದೇವಾಲಯದಲ್ಲೂ ಬ್ರಾಹ್ಮಣ ಸ್ತ್ರೀಯರುಸರಿಗೂ ಇತರರಿಗೂ ಭೂರಿಸಂಖ್ಯೆಯು ಕೊಡಲ್ಪಟ್ಟಿತು. ಬರುವ 20ನೆಯ ತಾರೀಖಿನದಿವಸ ಸಾಯಂಕಾಲ ಚತುರಂಗಬಲಸಹಿತವಾಗಿ ರಾಜವೀಧಿಗಳಲ್ಲಿ ದೆಂಪತಿಗಳ ಮೆರವಣಿಗೆಯು ನಡೆಯುವುದು. ಶ್ರೀ ಪಾರ್ವತೀಸಲ್ಲಭ ನಾದ ಪರಮೇಶ್ವರನು ಈ ನೂತನ ರಾಜದಂಪತಿಗಳಿಗೆ ದೀರ್ಘಾಯುಷ್ಯವನ್ನು, ಅಖಿಲ ಭಾಗ್ಯಸಂಪರಿಯನ್ನು, ಸತ್ಸಂತಾನವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಈ ವಿವಾಹಮಹೋತ್ಸವಕ್ಕಾಗಿ ಬಿಕನೀರ ಮುಂತಾದ ಸಂಸ್ಥಾನಗಳಿಂದ ಅನೇಕ ಮಹಾರಾಜರುಗಳು, ರೆಸಿಡೆಂಟರವರು ಕುಟುಂಬಪರಿವಾರಸಹಿತ ಆಗಮಿಸಿದ್ದಾರು.

ವರ್ತಮಾನಸಂಗ್ರಹ.

ಸಂಗಿ ನಾಳಿಯನರ ಹೊಮ್ಮಗಳ ಮದುವೆ

ಪಂಡಿತ ಮದನಮೋಹನ ಮಾಳವೀಯರವರ ಹೊಮ್ಮಗಳಾದ ಹೇಮಾವತಿದೇವಿಗೂ ಅಲಿಘರದ ಆದಿಗೌಡ ಬ್ರಾಹ್ಮಣಜಾತಿಗೆ ಸೇರಿದ ಶ್ರೀನಿವಾಸಶರ್ಮರಿಗೂ ವಿವಾಹವು ಈ ತಿಂಗಳು 7ನೆಯ ತಾರೀಖು ಅಲಹಾಬಾದಿನಲ್ಲಿ ನಡೆಯಿತು.

ನೃಹ್ಯನನ್ನು ಮದುನೆಯೂಗಲೊಪ್ಪದೆ ವಧು ನೂಯವಾದಳು

ಜೋಂಬಾಯಿಯಲ್ಲಿ 15 ವರ್ಷದ ಸುಂದರ ಕನ್ಯೆಯಬ್ಬಳನ್ನು ಹಣಬಾಸೆಯಿಂದ ಆಕೆಯ ಸಹೋದರರೂ ಮತ್ತು ಸೋದರಮಾವನೂ ಸೇರಿ 50 ವರ್ಷದ ಮುದುಕನೊಬ್ಬನಿಗೆ ವಿವಾಹಮಾಡಿಕೊಡಲು ಹವಣಿಸುತ್ತಿದ್ದರು ಇದಕ್ಕೆ ಈ ಪುಡುಗಿಯ ಚಿಕ್ಕಪ್ಪನಿಗೆ ಇಷ್ಟವಿರಲಿಲ್ಲ ಈಗ ಈ ಹುಡುಗಿಯು ಮಾಯವಾಗಿದ್ದಾಳೆ ಈಗ ಇವಳೆಲ್ಲಿರುವಳೆಂಬುವನ್ನು ಸತ್ತೆ ಹಚ್ಚಾಲು ವಾರಂಟು ಹುಟ್ಟಿಸಿ ಪೋಲೀಸರು ಹುಡುಕುತ್ತಿದ್ದಾರೆ

ಮಿಂಚಿನ ವೇಗಪರೀಕ್ಷೆ

ಆಕೆರಿಕನ ಪೃಜ್ಞಾನಿಗಳು ಮಿಂಚಿನ ವೇಗವನ್ನು ಗೊತ್ತು ಹಚ್ಚಲು ಪ್ರಯತ್ನಪಟ್ಟು ಅದು ಒಂದು ಸೆಕೆಂಡಿಗೆ 10000 ಮೈಲಿಗಳಷ್ಟು ಹೋಗುವದೆಂದು ಗೊತ್ತು ಹಚ್ಚಿದ್ದಾರೆ ಇದಕ್ಕಾಗಿ ಇವರು ಪ್ರಯೋಪವಲ್ಲೆ ಎತ್ತರ ವಾದ ಅಣೇಕ ಬಾರಿ ಏಿಡಲಿನ ಆಘಾತಕ್ಕೆ ತಿಕ್ಕೆರುವ ಸ್ಟೂಯಾರ್ಕ್ ಸಟ್ಟಣದ ಎ-ಪೈರ್ ಬಿಲ್ಡಿಂಗ್ ಕಟ್ಟಡವನ್ನು ಉಪಯೋಗಿಸಿದ್ದಾರೆ ಮತ್ತು ಇದರಂತೆ ಉನ್ನ ತವಾದ 5 ಮೈಲು ದೂರದಲ್ಲಿರುವ ಇನ್ನೊಂದು ಕಟ್ಟಡ ದಮೇಲೆ ಫೋಟೋ ಯಂತ್ರವನ್ನಿಟ್ಟು ಮೂರು ವರ್ಷ ಗಳಿಂದ ಎಲ್ಲ ಮಿಂಚಿನ ಫೋಟೊಗಳನ್ನು ತೆಗೆದಿದ್ದಾರೆ.

ಪ್ಯಾಲಸ್ಟೈನ್ ಸುತ್ತಲು ನುಳ್ಳುತಂತಿ ಬೇಲಿ

ಸಿರಿಯಾ ಪ್ರಾಂತ್ಯದಿಂದ ಪ್ಯಾಲಸ್ಟೈನಿಗೆ ಬರುತ್ತಿರುವ ಸಮಾರಪಡೆಗಳನ್ನು ತಡೆಯುವುದಕ್ಕಾಗಿ ಗಡಿಪ್ರಾಂತ್ಯ ದಲ್ಲಿ ಮುಳ್ಳುತಂತಿ ಬೇಲಿಗಳನ್ನು ಹಾಕುವ ಕೆಲಸವು ಪ್ರಾರಂಭವಾಗಿದೆ. ಪ್ರತಿನಿಧಿಸಿಯವು ಸಿರಿಯಾಪ್ರಾಂತದಿಂದ ಪ್ಯಾಲಸ್ಟೈನಿಗೆ ಗುಪ್ತವಾಗಿ ಒದಗಿಸಲ್ಪಡುತ್ತಿರುವ ಮದ್ದುಗುಂಡುಗಳನ್ನು ಇದು ತಡೆಯಬಲ್ಲುದೆಂದು ಯೋಚಿಸಲಾಗಿದೆ. ಈ ಬೇಲಿಯನ್ನು ಹಾಕಲು 2 ಸಾವಿರ ಪೌಂಡುಗಳು ಖರ್ಚಾಗುವವೆಂದು ಯೋಚಿಸಲಾಗಿದೆ.

ಭೂತಚೇಷ್ಟೆ

ಕಾರ್ಗಂಜ್ ಎಂಬಲ್ಲಿ ಒಬ್ಬ ವೇಶಿಲರ ಮನೆಯಲ್ಲಿ ರಾತ್ರಿ ಕಾಲದಲ್ಲಿ ಕಲ್ಲುಮಣ್ಣು ಮೊದಲಾದವುಗಳು ಎಲ್ಲಿಂದಲೋ ಬಂದು ಬೀಳುತ್ತಿದ್ದುದನ್ನು ಯಾರೋ ದುಷ್ಟರು ಹೀಗೆಮಾಡುತ್ತಿರಬಹುದೆಂದು ಯೋಚಿಸಿ ಸುತ್ತಲೂ ಪೋಲೀಸು ಕಾವಲು ಇಟ್ಟುಗ್ಗಾಣ ಇದು ಬೀಳುವುದು ತಪ್ಪಲಿಲ್ಲ. ಆಲ್ಲದೆ ಎಲ್ಲಿಂದ ಬಂದು ಬೀಳುತ್ತಿದೆಂಬುದೂ ತಿಳಿಯಲಿಲ್ಲವಾಗಿ ಇದು ಭೂತಚೇಷ್ಟೆಯೆಂದು ನಂಬಲಾಗಿದೆ.

ಸೈನಿನಲ್ಲಿ ಇಟಲಿಯವರ ನುರಣ

ಕಳೆದ ಎರಡು ತಿಂಗಳುಗಳಲ್ಲಿ ಸ್ಪೇನಿನಲ್ಲಿ ಯುದ್ಧ ನಡಾಯುತ್ತಿರುವ ಇಟಲಿ ಯೋಧರಲ್ಲಿ ಮೂರು ಸಾವಿರ ಜನರು ಗಾಯಗೊಂಡರು. ಇವರಲ್ಲಿ 631 ಮಂದಿ ಮರಣಹೊಂದಿದರೆಂದು ತಿಳಿದುಬಂದಿದೆ

ಜರ್ಮನಿಯ ಹೊಸ ಮಿಷ ಬಂದೂಕ

ಜರ್ಮನಿಯು ಪದಾತಿಸೈನ್ಯವ ಉಪಯೋಗಕ್ಕಾಗಿ ಹೊಸಬಂದೂಕವನ್ನು ತಯಾರಿಸಿದೆ ಇದನ್ನು ಕೈಯಿಂದ ಹಿಡಿಗಾಗಲಿ ಅಥವಾ ತ್ರಿಪಾಂಡಿನ ಮೇಲೆ ಇಟ್ಟಾಗಲಿ ಎರಡು ವಿಧವಾಗಿಯೂ ಉಪಯೋಗಿಸಬಹುದು ಇದು ಪೂರ್ವದ ಬಂದೂಕಗಳಿಗಿಂತ ಹೆಗುರವಾಗಿರುವುದಲ್ಲದೆ ಅವುಗಳಿಗಿಂತ ಎರಪಿರವು ಜಾಗ್ರತೆ ಅಂದರೆ ನಿಮಿಷಕ್ಕೆ 900 ಗುಂಡುಗಳನ್ನು ಹಾರಿಸಬಲ್ಲದು.

ತೀರಿನಲ್ಲಿ ಉಸಿರಾಡುವ ಕಾ೨ಸಕೋಶ

ನೀರಿನ ಒಳಗೆ ಚಲಿಸುವ ಜಲಂತರ್ಗತ ನೌಕೆಗಳು ಕೆಲವು ಸಂದರ್ಭಗಳಲ್ಲಿ ಕೆಟ್ಟು ಆಥವಾ ಮುಳುಗಿಬಿಟ್ಟು ಅದರಲ್ಲಿ ಏಿಕ್ಕಿ ಸಾಯುವ ಜಾಲಕರ ಸಹಾಯಕ್ಕಾಗಿ ನೀರಿನಲ್ಲಿ ಉಸಿರಾಡಲು ಅನುಕೂಲಿಸುವಂಥ ಕೃತ್ರಿಮ ಶ್ವಾಸಕೋಶವನ್ನು ಆಮೆರಿಕದ ನೌಕಾ ಪಡೆಯವರು ಕಂಡುಹಿಡಿದಿರುತ್ತಾರೆ ಈ ಸ್ವಾಶಕೋಶವನ್ನು ಎದೆಯ ಬಳಿ ಇಟ್ಟು ದೇಹಕ್ಕೆ ನೀರಿನ ಬಿಗುವಾಗಿ ಕಟ್ಟಿ ಅದೊಂದ ಒಂದೆ ರಬ್ಬರ್ ಕೊಳವೆಯನ್ನು ಬಾಯಲ್ಲಿ ಇಟ್ಟು ಕೊಂಡು ಸುಖವಾಗಿ ಉಸಿರಾಡಬುಬುದೆಂದು ಹೇಳುತ್ತಾರೆ

ಸಿನಿಮಾ ನಟನು ಸನ್ಯಾಸಿಯಾದನು

ಸಾಮಾರಾಗು ಯುವತಿಯರಿಂದ ಸುತ್ತು ನಿಯಲ್ಪಟ್ಟಿನ್ನು ಅಮೆರಿಕದ ಸುಪ್ರಸಿದ್ಧ ಸಿನಿಮಾ ನಟನಾದ ರೂಡಾ ನವಾಲೊ ಎಂಬುನನು 14ನೆ ನೆಯ ಇಸವಿಯಿಂದ ತನ್ನ ಆಜೀವನವನ್ನು ಬಿಟ್ಟು ವಿರಕ್ತಿಯನ್ನು ಹೊಂದಿ ಪ್ರಪಂಚದ ಜೀನಿಗಳಲ್ಲನ್ನ ಉತ್ತಮುಸ್ಥಿತಿಗೆ ತರಲು ವಿಸಾದರೂ ಮಾಡ ಬೇಕೆಂದಿರ ವುದಾಗಿ ಹೇಳುತ್ತಿದ್ದಾನೆ. ತಪನ ಈ ಬದ ಲಾವಣೆಗೆ ಹಿಂದೂ ಧರ್ಮದ ಟೋಧೆಯೇ ಕಾರಣವೆಂ ದೂ ತಾನು ಯೋಗಾಭ್ಯಾಸಮಾಡಿ ಸದಾನಂದಸ್ಥಿತಿಗೆ ಬರಬೇಕೆಂಬುದೇ ತನ್ನ ಧ್ಯೇಯವೆಂದೂ ಹೇಳುತ್ತಾನೆ ಈಗ ಅವನು ತನ್ನ ಎಲ್ಲ ದಂಭಾದಿಗಳಲ್ಲೂತ್ಯಜಿಸಿ ತನ್ನ ತಾಯಿ ಮತ್ತು ಸಹೋದರಿಯೊಡನೆ ಸಾಮಾನ್ಯಜೀವನ ವನ್ನು ನಡೆಸುತ್ತಿದ್ದಾನೆ.

ಪತಿಯಶಿಕ್ಷೆ ಪತ್ನಿಯ ನುರಣದಲ್ಲಿ ಕೊನೆಗಂಡಿತು

ಬಲ್ಗೇರಿಯದ ಸೂಮಾಲಿಯನ್ನು ಎಂಬಲ್ಲಿ ಗಂಡ ಹೆಂಡತಿಯರಿಗೆ ಕಾದಾಟವಾಯಿತು. ಗಂಡನು ಹೆಂಡ ತಿಯ ಮೇಲೆ ಕೋಪಗೊಂಡು ಆಕೆಯನ್ನು ಬಲಾತ್ಕಾರ ವಾಗಿ ಒಯ್ದು ಬಯಲಿನಲ್ಲಿ ಒಂದು ಮರಕ್ಕೆ ಕಟ್ಟಿಹಾಕಿ ದ್ದನು ಬಿಬುಮಳೆ, ಬಿರುಮಳೆ, ಚಳಿಗಳು ಭಯಂಕರವಾಗಿ ದ್ದುದರಿಂದ ಆಕೆ ಕೂಗುತಿದ್ದುದು, ಯಾರಿಗೂ ಕೇಳಿಸ ಲಿಲ್ಲ ಚಳಿಗಾಳಿಗೆ ಹೊದೆತದಿಂದ ಆಕೆಯು ಆ ರಾತ್ರಿ ಬಯಲಿನಲ್ಲೇ ಜೀವಚ್ಯುತವಾದಳು. ಬೆಳಿಗ್ಗೆ ನೆರೆಹೊರೆ ಯವರು ಆಕೆಯನ್ನು ಆಸ್ಪತ್ರೆಗೆ ಸಾಗಿಸಿದರು. ಆಲ್ಲಿ ಆಕೆ ತೀರಿಕೊಂಡಳು. ಗಂಡನೀಗ ತಾನೇ ಪೋಲೀಸರ ವಶ ವಾಗಿದ್ದಾನೆ ಹೆಂಡತಿಯು ತನ್ನ ಮಾತನ್ನು ಕೇಳಿದಿದ್ದು ದರಿಂದ ಹೀಗೆ ಮಾಡಿದೆನೆಂದು ಆತನ ಉತ್ತರ!

ಹಿಟ್ಲರ್-ಮುಸೋಲಿನಿಗಳ ಪರಸ್ಪರ ಸ್ನೇಹವಾಗ್ದಾನ

ಜರ್ಮನಿಯ ಸರ್ವಾಧಿಕಾರಿ ಹೆರ್ ಹಿಟ್ಲರನು ಇಟಲಿ ಯನ್ನು ಪ್ರವೇಶಿಸಿದ ಕೂಡಲೇ ಅತ್ಯಂತ ವೈಭವದಿಂದ ಎದುರುಗೊಂಡು ಸುಸ್ವಾಗತವನ್ನು ಬಯಸಿದ್ದಲ್ಲದೆ ಮುಸೋಲಿನಿಯು "ಇಂದು ನಿಮ್ಮ ಆಗಮನದಿಂದ ನಾವು ಕೈಕಾರ್ಯರಾದೆವು, ರೋಂ-ಬರ್ಲಿನ್ ಸಂಬಂಧವು ಇಂದು ಪೂರ್ಣವಾಯಿತು ಎಂದನು ಹೆರ್ ಹಿಟ್ಲರನು ಪ್ರತ್ಯುತ್ತರವನ್ನು ಕೊಡುತ್ತಾ, ಇಟಲಿ-ಜರ್ಮನಿಯು ಇಂದು ಒಂದು ರಾಜ್ಯವಾಯಿತು. ಈ ಒಂದು ರಾಜ್ಯದ 12 ಕೋಟಿ ಪ್ರಜೆಗಳ ಹಿತವು ನಮ್ಮಿಬ್ಬರಿಗೂ ಸೇರಿದ್ದು. 2 ಸಾವಿರ ವರ್ಷಗಳಿಂದ ಜಗಳವಾದ ಕ್ರಿಪ್ತ ಎರಡು ರಾಜ್ಯಗಳು ಇಂದು ಒಗ್ಗಟ್ಟಾಯಿತು ಅಲ್ಪಾಸ್ಸು ಬೆಟ್ಟದ ಸರಹದ್ದಿನಲ್ಲಿ ಇಟಲಿಗೆ ವಿರೋಧವಾಗಿ ಜರ್ಮನಿ ಸ್ಥಾಪಿಸಿ ನನ್ನು ಎಂದಿಗೂ ತೆರಿಸುವುದಿಲ್ಲ ಎಂಬ ಪ್ರಮಾಣ ಮಾಡುತ್ತೇನೆ. ಜಲ್ಲಪೆ ಇಟಲಿ ರಾಜ್ಯದ ಮೇಲೆ ಯಾರಾ ದರೂ ಶತ್ರುಗಳು ಬಿದ್ದರೆ ತಪರಿನ್ನು ನಾನು ಒಡಿದು ಹಾಕುತ್ತೇನೆ' ಎಂದು ಹೇಳಿದನು

ರಕ್ಷದ ವೈಮಾನಿಕರು ಉತ್ತರಕಾಗರದ ಮಂಜಿನಲ್ಲಿ ಸಿಕ್ಕಿದ್ದ 184 ನುಂದಿಯನ್ನು ಕಾಪಾಡಿದರು

ಕಳೆದ ತಕ್ಟೋಬರ್ ತಿಂಗಳಿನಿಂದ ಮಂಜಿನ ಗೆಡ್ಡೆಯ ಮೆಳ್ಳೆ ಸಿಕ್ಕಿಬಿದ್ದು ತಮ್ಮ ಹಡಗುಗಳಿಂದ ತಪ್ಪಿಸಿಕೊಂ ಡು ಬರಲು ದಾರಿಕಾಣದೆ ಆಕಾರಾಮಾಗ್ರಿಗಳೂ ಮುಗಿ ದು ಬಹಳ ಕೋಚನೀಯ ಸ್ಥಿತಿಗೆ ಬಂದಿದ್ದ ಹೆಂಗಸರು ಮಕ್ಕಳೆಂತೊಡಗೂಡಿದ 184 ನುಂದಿಯನ್ನು ರಕ್ಷದ ಉತ್ತರ ಧ್ರುವ ನೈಮಾನಿಕರು ಕಂಡು ಎಲ್ಲರನ್ನೂ ಹೊರಕ್ಕೆ ಸಾಗಿಸಿ ಕಾಪಾಡಿದರು ಸುಂದರ ಮುಖ್ಯ ಸಿಕ್ಕಿರುವ ಈ ಹಡಗುಗಳು ಉತ್ತರಧ್ರುವದ ಕಡೆಗೆ ಸಿದ್ಧಾಸವಾಗಿ ಹೊಡೆ ದುಕೊಂಡು ಹೋಗುತ್ತಿವೆ.

ಮಹಾತ್ಮರಲ್ಲಿ ಪಕ್ಷಾಪಾರ ಪ್ರಾರ್ಥನೆ

ಸರಹದ್ದಿನ ಪ್ರಾಂತ್ಯದಲ್ಲಿ ಪ್ರವಾಸಮಾಡುತ್ತಿರುವ ಮಹಾತ್ಮ ಗಾಂಧಿಯವರನ್ನು ಎಲ್ಲಿನ ಪರಾನ ಜನರು ಬಹುಮಾನ ಸುಧ್ಯಾದಿಸುವ ವದಲ್ಲಿ ತಮ್ಮಲ್ಲೇ ಆವರು ಅಜ್ಜುಲ್ ಗಫಾರ್ಖಾನರು ಜಾರತನಲ್ಲಿ ಆಧಾವರ್ಷ ಕಾಲಶಿದ್ಧಾಂತೆ, ಒರ ವರ್ಷಕಾಲ ಇಷ್ಟುಬಿಡಬೇಕೆಂದು ಪ್ರಾರ್ಥಿಸಿಕೊಂಡರು, ಎದಕ್ಕೆ ಮಹಾತ್ಮರು ಪಾನರು ಬರಕಮಂಡಪಲ್ಲಿದ್ದ ಆರುವರುಷಗಳಲ್ಲಿ ಬಹುಕಾಲ ವೈಲ ನಲ್ಲೆ ಕಳೆದರು. ತವರಂತೆ ನೀವೂ ನನ್ನನ್ನ ಇರಿ ಎಂದು ಅವೇಕ್ಷಿಸಬೇಕಾಗುವುದಂದು ಹಾಸ್ಯವಾಗಿ ನುಡಿದು, 'ನಾನು ಎಲ್ಲಿದ್ದರೇನು ನನ್ನ ಜೀವನಾತ್ಮವನ್ನು ಅನುಸರಿಸಿ, ಅದು ಕಾವಭೇಸ ವಿನಂತೆ ನಿವ್ಮ ಇಷ್ಟಾ ನ್ಥನವನ್ನು ಸಲ್ಲಿಸ ಬುದು ಎಂದು ನೀವು ಯೋಧಿಸಿರಿ.

ಫ್ಯಾಕ್ಟರಿಯ ನೂಲೀಕರು ಸರಿಯಾದ ಕೂಡಬೇಕಾಯಿತು

ಪಶ್ಚಿಲ್ಲಿನ ಕಟ್ಟಿರಿ ಕಾರ್ಖಾನೆಯಲ್ಲಿ ಕೆಲಸಕ್ಕಿದ್ದ ಮಿಸ್ ಕಿಟ್ಟಿ ಜಾರ್ಜೈ ಎಂಬ ಯುವತಿಯು, ಯಂತ್ರಗ ಳನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುದಕ್ಕಾಗಿ ಕಾರ್ಖಾ ನೆಯ ಒಂದು ಕೆಲ್ಸಾ ಹೋಯಿತೆಂದೂ ಇದರಿಂದ ನೂಲೀಕ ರು ತಮಗೆ ಒಂದು ಸಾವಿರ ಪೌಂಡುಗಳ ಪರಿಹಾರ ಕೊಡ ಬೇಕೆಂದೂ ಹೂಡಿದ್ದ ವ್ಯಾಜ್ಯವು ಅವಲಂಬಿ ತೀರ್ಮಾನ ವಾಯಿತು

ನುರಗಳು ಕಲ್ಲಾಗಿ ಮಾರ್ಪಟ್ಟಿನ!

ದಕ್ಷಿಣಅಫ್ರಿಕದ ಉತ್ತರಕೇಪ್ಡಿವಿಯ ಭಾಗದಲ್ಲಿ ಭೂಗರ್ಭಶೋಧಕರಿಂದ ಎಕ್ಸ್. ಬಿ ಮೈಕ್ರೆ ಮತ್ತು ಗಾರ್ಡ್ ಎಂಬಿಬ್ಬರು ಶಾಸ್ತ್ರಜ್ಞರು, ನುರಗಳೆಲ್ಲವೂ ಕಲ್ಲಾಗಿ ಮಾರ್ಪಟ್ಟಿರುವ ಒಂದು ಮೊಡ್ಡ ಕಾಡನ್ನೇ ಪತ್ತೆಹಚ್ಚಿದ್ದಾರೆ ಸುಮ್ಮ ತುತ್ತು ಇತರ ಲೋಹಮಿಶ್ರಿತ ಸೀರಿನ ಸಂಬಂಧದಿಂದ ಈ ರೀತಿ ಮರಗಳೆಲ್ಲವೂ ಕಲ್ಲಾಗಿ ಮಾರ್ಪಟ್ಟಿರಬೇಕೆಂದು ಯೋ ಚಿಸಲಾಗಿದೆ.

ಸಾನ್ಸಾ ಸತ್ಯಾಗ್ರಹ

ಮಾನ್ಸಾ ಸತ್ಯಾಗ್ರಹ ಸಮಿತಿಯ ಪ್ರಥಮ ಸರ್ವಾಧಿ ಕಾರಿಗಳಾದ ಮಿಗಿ ಗೋಪಾಲದಾಸರು ಸರ್ಕಾರಕ್ಕೆ ವರೋ ಧಪ್ರದರ್ಶನ ಮತ್ತು ಸಭೆಗಳಲ್ಲಿ ಭಾಗವಹಿಸಿದುದಕ್ಕಾಗಿ ಶಿಕ್ಷಿಸಲ್ಪಟ್ಟಿರಲ್ಲದೆ, ಅವರ ಆಸ್ತಿಯನ್ನೆಲ್ಲಾ ಸರ್ಕಾರದ ವರು ವಶಪಡಿಸಿಕೊಂಡು ಅವುಗಳನ್ನು ಹರಾಜು ಹಾಳು ವುದಾಗಿ ಪ್ರಕಟಿಸಿರುತ್ತಾರೆ. ದೈತೀಯ ಸರ್ವಾಧಿಕಾರಿ ಆದ ಮಿಗಿ ಪಟೇಲ್ ಕಂದಾಸ್‌ರವರು ಆಲ್ಲಿನ ರೈತರಿಗೂ ಇತರರಿಗೂ ಅವುಗಳನ್ನು ಹರಾಜಿನಲ್ಲಿ ಯಾರೂ ಖರೀ ಯಕೂಡದೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

ಶ್ರೀಜಗದ್ಗುರು ಪಿಕೋರೂನುರಾಧ್ಯರ ಹಾಗೂ ದಾರುಕಾಚಾರ್ಯರ ಜಯಂತೀನಮಹೋತ್ಸವ

ತರಿಕೇರಿ ತಾಲೋಕು ವಿವರ

ಈಕಡೆ ವೈಕಾಖ ಶುದ್ಧ ತದಿಗೆ ಸೋಮವಾರ ಮತ್ತು ಪಂಚಮಿ ಬುಧವಾರ ಈ ಎರಡು ದಿವಸಗಳಲ್ಲಿ ಶ್ರೀಜಗದ್ಗುರು ಏಕೋರಾ ವರಾಧ್ಯರ ಮತ್ತು ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವಗಳನ್ನು ಇಲ್ಲಿಯ ಭಕ್ತ ವಾಸೌತ್ಸಾಹದಿಂದ ಯಂ ಎನ್ ಮರುಳಸಿದ್ಧಯ್ಯನವರು ತನ್ನವ ಸಯಲ್ಲಿ ತತ್ಪಂತನ್ನ ಭವದಿಂದ ಆಚರಿಸಿದರು ಆಯಾಯ ದಿವಸ ಕ್ರಮವಾಗಿ ಉಭಯಾಚಾರ್ಯಮೂರ್ತಿಗಳಿಗೆ ರುದ್ರಾಭಿಷೇಕ ಪಂಚಾಮೃತ ಭಿಷೇಕಾದಿಗಳು ನಡೆದು ಆಚಾರುರ ಆಷ್ಟೋತ್ತರನ ಮಾವಳಿಯ ಪಠಣವಾಯಿತು ಸಿದ್ಧಾಂತಶಿಖಾಮಣಿಯ ಶ್ರವಣವು ಏದೆಯ ತ್ತಿತ್ತು. ಕೊನೆಯ ದಿವಸ ಮಾಹೇಶ್ವರರಿಗೆ ಅನ್ನಸಂತರ್ಪಣೆಯು ಇನ್ನಿತರ ಫಲಾಹಾರಾದಿಗಳುವಿದೆವು ಈ ಸ್ಥಳದ ಬ್ರಾಹ್ಮಣಾದಿ ಸಕಲ ವರ್ಣೀಯರೂ ಜಯಂತ್ಯುತ್ಸವಕ್ಕೆ ಆಗಮಿಸಿ ಶ್ರೀಜಗದ್ಗುರು ರೇಣುಕಾಚಾರ್ಯ ಮಹಾ ಪುಸಿದಾರಾಧನೆಯನ್ನು ಕೇಳಿ ಸಂತೋಷಪಟ್ಟರು ಶ್ರೀಜಗದ್ಗುರು ಪಂಚಾಚಾರ್ಯರ ಜಯಸೂಚಪತ್ರಿಕೆಯ ಜಯಂತಿಕಾರ್ಯವು ಸಮಾಪ್ತಿಯನ್ನು ಹೊಂದಿತು

ಏವಂ-ಪ್ರತ್ಯಕ್ಷದವಿ

ಪ್ರಶ್ನೋತ್ತರ ರತ್ನಮಾಲಿಕಾ

ಲೇಖಕರು—ವಿದ್ವಾನ್ ಪ್ರ ರಾಘವೇಂದ್ರರು
ಮಳವಳ್ಳಿ ಪಾಠಶಾಲೆ ಪಂಡಿತರು

ಪ್ರ—ಒದ್ದಿವರ್ತಕನಂದು?

ಉ ಈ ಪಂಸ ರದಲ್ಲಿ ಪ್ರತಿಶಿಷ್ಯನೂ ಮಾಡಿದ ಕೆಲಸಗಳನ್ನೇ ಮಾಡಿ ಮಾತ್ರ ಹೊಸದಾವುದನ್ನು ಕಾಣದೆ ಬೇಜಾರಿಗಿ ಜಗನ್ಮಿಗೆಂಥು ವಿರಮಿಸಿನ್ನ ಹೊಂದತಕ್ಕನನ

ಪ್ರ ದೊಡ್ಡವಸ್ತುವ ವ ?

ಉ ಆಸಯು ಜಗತ್ತಿನಲ್ಲಿ ಸನ ತವು ದೊಡ್ಡಗು ಅದಕ್ಕಿಂತಲೂ ಸಮುದ್ರವು ಆಕಾಶಕ್ಕಿಂತಲೂ ಆಕ ಶವು ಅದಕ್ಕಿಂತಲೂ ಬ್ರಹ್ಮವು ಮೊದ್ದು ಇದಕ್ಕಿಂತಲಿ ಆಸಯು ಮೊದ್ದು ಇಂತಹ ಆಸೆಗೆ ದಾಸನ ದವನು ಕೈಲಾಸದ ಚಿ ಇರನೆಂದು ಜ್ಞಾನಿಗಳ ಅಭಿಪ್ರಾಯವು

ಪ್ರ ಎಲ್ಲ ಜನ್ಮಗಳಲ್ಲಿ ವ ನುಷ್ಯಜನ್ಮವು ಹೆಚ್ಚಿನದಕ್ಕೆ ಫಲು ಕಾರಣವೆನ್ನ?

ಉ ಆತ್ಮಾರ್ಜಾಪರ್ಯಾಪ್ತವು ಇ ಥಲ್ಲದೆ ಇಂಥಲಿಲ್ಲ ವೆಂತಿಲ್ಲ ಅದು ಕಲ್ಲು ಮರ, ಪಶು ಪಕ್ಷಿ, ನುನುಷ್ಯ ಹೀಗೆ ಸನತ್ವ ವ್ಯಸಿರುವುದು ಆದರೆ ಒಂದು ವೀಪವನ್ನು ಮೂರದೆ ನೆಟ್ಟಗೆಯಲ್ಲಿ ಇಲ್ಲದೆ ಸ್ವಚ್ಛವಾದ ಗಾಜಿನ ಪೆಟ್ಟಗೆಯಲ್ಲಿಟ್ಟರೆ ದೀಪದ ಪ್ರಕಾಶದ ವ್ಯಾಪಕ ಶಕ್ತಿಯಲ್ಲಿ ಮಾತ್ರ ಭೇದವುಂಟಾಗುವಂತೆ ಆತ್ಮತತ್ವವು ಸರ್ವತ್ರ ಒಂದೆಯಾಗಿದ್ದರೂ ಆದರನೋಲಣ ಕೋಶಗಳ ಆದರೆ ನಾನುರೂಪಾತ್ಮಕ ಹೊದಿಕೆಗಳ ತಾರತಮ್ಯ ಭೇದದಿಂದ ಆದರಲ್ಲಿ ಅಚಿತನ ಸಚಿತನವೆಂಬ ಭೇದಗಳಾಗುತ್ತವೆ ಆತ್ಮೆಕೆ? ಸಚಿತನಗಳಲ್ಲಿ ಸಹ ಮನುಷ್ಯನಲ್ಲಿಯೂ ಪಶುಪಕ್ಷಿಗಳಲ್ಲಿಯೂ ಜ್ಞಾನಸಂಪಾದನೆಯಾಡಿಕೊಳ್ಳುವ ಸಾಮರ್ಥ್ಯವು ಸಮನಾಗಿಲ್ಲದಿರುವುದಕ್ಕೂ ಇದೆ ಕಾರಣವು ಆತ್ಮನು ಒಬ್ಬನೇ ಕರ್ತೃತ್ವ ಇರುವದೆನೋ ಖಂಡಿತವು, ಅದರೂ ಅವನು ಮೂಲತಃ ನಿರ್ಗುಣನೂ ಉದಾಸೀನನೂ, ಆತನು ಕರ್ಮಬದ್ಧನೂ ಆಗಿರುವುದರಿಂದ ಮನಬುದ್ಧಿ ಮೊದಲಾದ ನಾಮರೂಪಾತ್ಮಕ ಸಾಧನಗಳಲ್ಲದೆ ಆಸಯು ಕಾರಣಗಿಯೇ ವಿಷಯನ್ನೂ ನೋಡಲಾರನು ಈ ಸಾಧನಗಳು ಮನುಷ್ಯಯೋನಿಯಲ್ಲಲ್ಲದೆ ಮಿಕ್ಕಿತೆಯಲ್ಲಿ ಪೂರ್ಣವಾಗಿ ಪ್ರಾಪ್ತವಿರುವದಿಲ್ಲವಾದ ಪ್ರಯುಕ್ತ ಮನುಷ್ಯಜನ್ಮವೇ ಶ್ರೇಷ್ಠವು

ಪ್ರ—ಒಬ್ಬ ಆತ್ಮನೇ ನಾನಾ ಯೋನಿಗಳಲ್ಲಿ ಅವತರಿಸಲು ಕಾರಣವೇನು?

ಉ—ಕರ್ಮವಿಸಾಕದ ಇಚ್ಛೆವೆ ಕರ್ಮದ ಫಲಗಳ ಪರಿಣಾಮವು

ಪ್ರ ಕರ್ಮವೆಂದರೇನು?

ಉ ಒಂದು ತರಹೆಯ ನಾಮರೂಪಸವನ್ನು ಮಾರ್ಪಡಿಸಿ ಅದನ್ನೇ ಬೇರೆ ವಿಧವಾಗಿ ಸರಿಣಮಿಸುವುದೇ ಕರ್ಮವೆನಿಸುವುದು (ವ್ಯಾಪಾರ ಅಥವಾ ಕ್ರಿಯೆ) ಏಕೆಂದರೆ ಈ ನಾಮರೂಪಗಳಿಂದ ಮುಚ್ಚಲ್ಪಟ್ಟಿರುವ ಪರಮಲಪಪ್ರಭುವು ಎಂದೂ ಬದಲಾವಣೆಯನ್ನು ಹೊಂದದೆ ಯಾವಾಗಲೂ ಹಾಗೆಯೇ ಇರುತ್ತಿದೆ ಉದಾ—ನೂಲುವ ಕ್ರಿಯೆಯಿಂದ 'ಅರಿಳಿ' ಎಂಬ ಹೆಸರು ಹೋಗಿ 'ನೂಲು ಎಂತಲೂ ನೆಯ್ಯುವ ಕ್ರಿಯೆಯಿಂದ ನೂಲು' ಎಂಬ ಹೆಸರು ಹೋಗಿ 'ವಸ್ತ್ರ' ವೆಂತಲೂ, ಬುಂಬಾರನ ವ್ಯಾಪಾರದಿಂದ 'ಮುಣ್ಣು' ಎಂಬ ಹೆಸರು ಹೋಗಿ 'ಳಿಟ್ಟೆ' ಎಂಬ ಹೆಸರು ಬರುತ್ತದೆ ಅಂತೂ ಕರ್ಮವೆಂದರೆ ದೃಶ್ಯಸೃಷ್ಟಿಯು ನಿಮಿಷಲ್ಪಡುವ ಕಾಲಕ್ಕೆ ಮೂಲ ನಿರ್ಗುಣ ಬ್ರಹ್ಮದಲ್ಲಿ ಕಂಡುಬರುವ ವ್ಯಾಪಾರವೆಂದು ವೈಕ್ತವಾಗುವದು

ಪ್ರ—ಪರಮಾತ್ಮನ ಇಚ್ಛೆಯಿಂದ ಜಗತ್ತಿನೊಳಗಿನ ಕಮ ಕ್ಕೆ ಯಾವಾಗ ಆರಂಭವಾಗಿ ತದಂಗಭೂತವಾದ ಮಾನವನು ಕರ್ಮದ ತಿರುಗಣೆಯಲ್ಲಿ ಸಿಕ್ಕನು?

ಉ—ಜಗದಾರಂಭದಿಂದಲೇ ಪ್ರತಿಯೊಂದು ಸ್ಯಾಣಿಯೂ ನಾಮರೂಪಾತ್ಮಕವೂ ಆಕಾರವಿಯೂ ಆದ ಕರ್ಮದಾರಿಮನೆಯಲ್ಲಿ ಸಿಕ್ಕಿರುವನು ಇಂತಹ ಜನ್ಮಾಂತರ ಕರ್ಮಪ್ರಭುವು ಪುರುಷನು ಗಿರಿದುಗರದಲ್ಲಿದ್ದಾಗ್ಯೂ ಮಾ, ವಜ್ರವ ಯವ ದ ಗೃಹದಲ್ಲಿದ್ದಾಗ್ಯೂ ಅವನಿಗೆ ಪ್ರಾಪ್ತವಾಗತಕ್ಕ ಸಂಪದ್ಭಿಪತ್ತುಗಳು ಅಲ್ಲಲ್ಲಿಯೇ ಸಿದ್ಧವಾಗುವುವು

ಪ್ರ—ಯಾವಾಗಲೂ ನಶ್ವವಾಗದಿರತಕ್ಕದ್ದಾವದು?

ಉ—ಕರ್ಮಶಕ್ತಿಯು ಸೃಷ್ಟಿಯ ಸಂಹಾರವಾದರೂ ಸಹ ಈ ಕವ ಶಕ್ತಿಯು ಬೀಜರೂಪದಿಂದ ಶಿಲ್ಪು ಉಳದು ಪುನಃ ಸೃಷ್ಟಿಗೆ ಅರಂಭವಾಗಲು ಅದೇ ಕರ್ಮ ಬೀಜದಿಂದ ಪುನಃ ಮೊದಲಿನಂತೆ ಂಕುರಗಳು ಒಡೆಯುತ್ತವೆ ಈ ಕರ್ಮದ ಗತಿಯು ಅತಿ ಕಠಿಣವಾಗಿರುವುದು ಇಷ್ಟೇ ಅಲ್ಲ ಆದು ಒಂದುಸಾರೆ ಅಂಟಿಕೊಂಡಿತೆಂದರೆ ಬಿಡುವುದೇ ಇಲ್ಲ ಇದು ಯಾರಿಗೂ ಬಿಟ್ಟಿದ್ದಲ್ಲ ಕರ್ಮದಿಂದಲೇ ಲೀಯು ಚಲಿಸುವದು. ಸೂರ್ಯಚಂದ್ರಾದಿಗಳು ಕರ್ಮದಿಂದಲೇ ಸಂಚರಿಸ ವರು ಪ್ರತಿಯೊಂದು ಪ್ರಾಣಿಯೂ ಇಂದುಮಾಡಿದ್ದನ್ನು ನಾಳೆ ನಾಳಮಾಡಿದ್ದನ್ನು ನಾಡದು ಭೋಗಿಸಬೇಕು ಇಚ್ಛೆ ಇಲ್ಲ ಈ ಜನ್ಮದಲ್ಲಿ ಮಾಡಿದ ದನ್ನು ಮುಂದಿನ ಜನ್ಮದಲ್ಲಿ ಭೋಗಿಸಬೇಕಾಗುವದು ಹೀಗೆ ಈ ಭವಚಕ್ರವು ಸದಾ ಸುತ್ತುತ್ತಿರುತ್ತದೆ ವಾಚಕರೇ! ನಾವು ಮಾತ್ರ ಹೀಗೆ ಅನುಭವಿಸಬೇಕಾಗುತ್ತದೆಂಬಲ್ಲಿ ಒಮ್ಮೊಮ್ಮೆ ಈ ನಮ್ಮ ನಾಮರೂಪಾತ್ಮಕ ದೇಹದಿಂದ ಮಾಡಿದ ಕರ್ಮಫಲಗಳನ್ನು ನಮ್ಮ ದೇಹದಿಂದ ಹುಟ್ಟಿದಮಕ್ಕಳು ಮೊಮ್ಮಕ್ಕಳು ಮರಿಮಕ್ಕಳೂ ಸಹ ಅನುಭವಿಸಬೇಕಾಗುತ್ತದೆಂದು ಮನುಸ್ಮೃತಿಯು ಸಾರುತ್ತಿರುವದು ಕೆಲವು ಮಧ್ಯರ ಕೋಗಳು ವಂಶಪಾರಂಪರ್ಯವಾಗಿ ಜಗತ್ತಿನಲ್ಲಿ ಜನರಿಗೆ ಪ್ರಾಪ್ತವಾಗುತ್ತಿರುವುದೇ ಬಲವಾದ ನಿದರ್ಶನವಾಗಿರುವದು ಆದರೆ ಶಕ್ತಿಯಿಂ ಶಕ್ತಿಯು, ವಿಷದಿಂ ವಿಷವು, ಶತ್ರುವಿನಿಂ ಶತ್ರುವು, ವಲದಿಂ ಮೆಲವು, ವಜ್ರದಿಂ ವಜ್ರವು ಭೇದಿಸಲ್ಪಡುವಂತೆ ಕರ್ಮದಿಂದಲೇ (ನಿಷ್ಕಾಮಕರ್ಮ) ಈ ಕರ್ಮವು ಭೇದಿಸಲ್ಪಡುವದು

ಪ್ರ—ಮನುಷ್ಯನು ಸುಖದುಃಖಗಳಿಗೆ ಏಕೆ ಹೊಣೆಗಾರನಾಗುತ್ತಾನೆ?

ಉ—ತನಗೆ ತಾನೇ ಇಲ್ಲದ ಗೌರವವನ್ನೂ ಕಲ್ಪಿಸಿಕೊಂಡು ಪ್ರಕೃತಿಮಾತೆಯು ಮಾಡುವ ವ್ಯವಹಾರವನ್ನು ತನ್ನಮೇಲೆ ಹಾತಿಕೊಳ್ಳುವುದರಿಂದ, ಆದರೆ ಈ ಅಶಕ್ತಬುದ್ಧಿಯನ್ನು ಬಿಟ್ಟು ಪ್ರಕೃತಿಯ ಗುಣಧರ್ಮಗಳಿಗನುಗುಣವಾಗಿ ಸಮಸ್ತ ವ್ಯಾಪಾರಗಳೂ ನಡೆಯುತ್ತಿರುವೆ ಎಂಬ ಭಾವನೆಯಿಂದ ವ್ಯವಹಾರವನ್ನು ಸಾಗಿಸುತ್ತಿದ್ದರೆ ಮಾತ್ರ ಯಾವ ಬೇಡವೂ ಉಂಟಾಗುವದಿಲ್ಲ ಆದರೆ ಪ್ರಿಯಾಪ್ರಿಯ ಹೀಗೆ ಯಾವುದೇ ಯಿರಲಿ ಯಾವದು ಯಾವಕಾಲಕ್ಕೆ ಎಲ್ಲಿ ಎಷ್ಟರಮಟ್ಟಿಗೆ ಪ್ರಾಪ್ತವಾಗುತ್ತದೆಯೋ ಅದನ್ನೇ ಮಹಾ ಪ್ರಸಾದವೆಂದು ಆ ಕಾಲಕ್ಕೆ ಹಾಗೆಯೇ ಮನಸ್ಸಿನ ವಿರಲಿತ ಗಳಿಗೆ ಅವಕಾಶಕೊಡದೆ ಅನುಭವಿಸುತ್ತ ಹೋಗುವದೇ ವಿವೇಕಿಗಳ ಲಕ್ಷಣವು

ಪ್ರ—ಆಕ್ಸ್ಮಿಕವಾದ ಅಪರಾಧವಾವುದು?

ಉ—ಜನಗಳ ದಾರಿತಪ್ಪಿ (ಅಧರ್ಮದಿಂದ) ಹೋಗುತ್ತಿರುವಂಗ ಆ ದಾರಿಯು ನಮಗೆ ಗೊತ್ತಿದ್ದರೂ ಅದನ್ನು ಅವರಿಗೆ ಸೂಚಿಸದಿರುವದು ವಾಚಕರೇ! ನಾವು ನಮ್ಮ ಕರ್ತವ್ಯವಂತೆ ಹೇಳಬೇಕು ಅದರ ಮೇಲೆ ಅವಿಶ್ಯ!

ಪ್ರ—ಸ್ವರ್ಗ ನರಕಗಳಿಗೆ ಮಾರ್ಗಗಳೆಷ್ಟು?

ಉ—ನಾಕ (ಸ್ವರ್ಗ) ಕ್ಕೆ ಒಂದೆ ಮಾರ್ಗ, ನರಕಕ್ಕೆ ನಾನಾ ಮಾರ್ಗಗಳುಂಟು

ಪ್ರ—ಈ ಜಗತ್ಸಂಬಂಧವಾದ ಸಮಸ್ತ ವಿಶಿಷ್ಟ ವಸ್ತುಗಳ ನಾಮರೂಪಗಳು ಹೇಗಿರುವುವು?

ಉ—ಮಿಂಚಿನಂತೆ ಕ್ಷಣಭಂಗುರವಾಗಿಯೂ ಧೃವಜಲದಂತೆ ಭ್ರಮಾಯ ಕ್ಷವಾಗಿಯೂ ಇರುವುವು ಇಂತಹ ಧ್ರಮಾವಿಶಿಷ್ಟವಾದ ನಾಮರೂಪುಗಳಿಗೆ ವೃಥಾ ಅತಿ ಮಹತ್ವವಂ ಕೂಟ್ಟು ಸತ್ಯವನ್ನು ತಿಳಿಯುವದು ಮನುಷ್ಯತ್ವದ ಲಕ್ಷಣವಲ್ಲವು ಮತ್ತು ಅಖಂಡವಾದ ಬ್ರಹ್ಮಜ್ಞೆಶಕ್ತಿಯಂದೇ ಸರ್ವರೂಪವಾಗಿ ಪ್ರಕಾಶಿಸುತ್ತಿರುವಲ್ಲಿ ಆ ಜ್ಞಾನವಿಲ್ಲದೆ ನಾಮರೂಪಕ್ಕೆ ಮರುಳಾಗಿ ದೀಪಾಭಿಮಾನದಿಂ ಮನುಷ್ಯಾದಿ ನಾಮಗಳನ್ನು ಹೆಳಿಕೊಳ್ಳುವ ಜನರು ತಾವು ಚಿನ್ನವೆಂದು ಹೇಳಿಕೊಳ್ಳುವ ಉಂಗುರಗಳಂತೆ ಹಾಸ್ಯಾಸ್ಪದರಾಗುವರು ಇದನ್ನರಿತು ಬಂದು ಹೋಗ ವದೆಂಬ ನಾಣ್ಣೆಯು ಸಮಂಜಸವಾಗುವದಲ್ಲದೆ ಇಲ್ಲದವನಿಗೆಂದಿಗೂ ಸಮಂಜಸವಾಗದು

ಪ್ರ—ಬಂಧುಗಳನ್ನಾಗಲೀ ಮಿತ್ರರನ್ನಾಗಲೀ ಇತರ ಜನರನ್ನಾಗಲೀ ಬಹಳ ಹತ್ತಿರ ಬರಮಾಡಿಕೊಳ್ಳುವದರಿಂದಲೂ ಮಿತವಾಗಿ ದೂರದಲ್ಲಿರುವುದರಿಂದಲೂ ವಿಶಾಗುವದು?

ಉ—ಮಿತಿಮೀರಿ ಹತ್ತಿರ ಬರುವುದರಿಂದ ಪ್ರಸಂಗ ವಶಾತ್ ಅವರಲ್ಲಿ ಅವಿಶ್ವಾಸ, ಸಂತಯ ಮತ್ತು ಗೃಹಚ್ಛಿದ್ರಕ್ಕೆ ಕಾರಣಗಳೂ ಉಂಟಾಗುತ್ತವೆ ಮಿತವಾಗಿ ದೂರದಲ್ಲಿರುವುದರಿಂದ ಪರಸ್ಪರ ಪ್ರೇಮ ವಿಶ್ವಾಸ ಏಕಮತ್ಯಗಳು ಉಂಟಾಗುತ್ತವೆ ಯಾವುದಾವದೂ ಅತಿಯಾಗಿರುವುದಕ್ಕಿಂತಲೂ ಮಿತವಾಗಿರುವದು ಶ್ರೇಯಸ್ಕರವು

ಪ್ರ—ಜ್ಞಾನರಹಿತವಾಗಿ ಕರ್ಮಗಳನ್ನಾಚರಿಸಿದರೇ ನಾಗುವದು?

ಉ—ಕತ್ತಲೆಯ ಮನೆಯಲ್ಲಿ ಓಡಾಡುವವನು ಗೋಡೆ ಕಂಬಗಳಿಗೆ ತಲೆಯನ್ನು ಬಡಿಸಿಕೊಂಡೂ, ಎತ್ತು ಮೇಗಾದಿಂ ಹೋಗುತ್ತಿರುವ ಕುದುರೆಯನ್ನು ಹಿಡಿಯಲು ಉದ್ದೆ ಕದಿಂದ ಅದರ ಬಾಲವನ್ನು ಹಿಡಿದೆಳೆದು ಒದೆಯಿಸಿಕೊಂಡೂ ಮುಖವಂ ಸಡುವಂತೆ ಜ್ಞಾನಸಂಪನ್ನವಾದ ಕರ್ಮದಿಂ ಕಷ್ಟಗಳು ಸಂಭವಿಸುವದೇ ಲಭವಾಗುವದು

ವಿದ್ಯಾರ್ಥಿಗಳಿಗೆ ಸೂಚನೆ

ಕ್ಯಾತ್ಸಂಹಳ್ಳಿ ಸಾಹುಕಾರ್ ಸಿದ್ದಲಿಂಗಯ್ಯನವರ ವೀರಶೈವ ಸಂಸ್ಕೃತ ಪಾಠಶಾಲಾ ಮತ್ತೂ ಸ್ಟೀಮ್ ಪ್ರೋರ್ಡಿಂಗ್ ಹೋಂ, ಮಾಣಿಲಿಂಬಸೆರೋಡ್ ಮೈಸೂರು

ಮೇಲ್ಕಂಡ ಶಾಲೆಯಲ್ಲಿ ವಿದ್ಯಾಭ್ಯಾಸಮಾಡಲು ಇಚ್ಛವುಳ್ಳ ವೀರಶೈವ ವಿದ್ಯಾರ್ಥಿಗಳು ೧೯೩೮ ನೆ ಮೇ ಮಾಹೆ ಅಷ್ಟರಿಸೊಳಗಾಗಿ ತಮ್ಮ ಪೂರ್ಣವಿವರ ಮತ್ತು ವಿಳಾಸಗಳನ್ನು ನಮಗಂದಿಸಿ ನಮ್ಮ ಆಫೀಸಿಗೆ ಖುದ್ದೇ ಹಾಜರಿಕೊಳ್ಳುವುದು

11-5-1938 ಕೆ ನಂಜಪ್ಪ.
ಆನರರಿ ಸೆಕ್ರೆಟರಿ

ಶಿವ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಬಂಧನಪಲ್ಲಿರುವ ಪತ್ರಿಯೊಂದು ಗುರುವರ್ಗದ ಮನೆಕ್ಕೆ ಸಾಮಿಯು ಶಿಷ್ಯರ ಮನೆಗಳರುತ್ತಿದ್ದು, ಆ ಮಹಾಧಿಕಾರಿಗಳು ಪಮಸಹಕ್ಕೆಯ ಸತ್ತು ಪ್ರಸಕ್ಕೆಲ ಒಂದುಸಾರಿ ಹೋಗಿ ಶಿಷ್ಯರಿಂದ ಆಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರಿ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಷತ್ತು ವಿಷಯ ಗಳನ್ನು ಬರಿಮಕ್ಕೊಂದರ ಆಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬರುವರು ಈ ಅವ್ಯವಸ್ಥೆಯಿಂದ ಅನೇಕ ಮಠಪವರಿಗೆ ತಮ್ಮ ಶಿಷ್ಯರ ಮನೆಗಳ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚಿತ್ರಾಗಿ ತೋರುವಂತಲ್ಲಿ ಅದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಯರವರೂ ತರಿಸಿಕೊಂಡು ಆದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಸಂಕಷಾರಬದ್ಧರಾಗಿ ಬಾಂ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಖಯೋಗಿಸಿದುವದಲ್ಲದೆ ಸುಂದರವಾದ ಮತ್ತು ಧರ್ಮಬದ್ಧ ವೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭ್ಯಾಯದಲ್ಲಿ ದೊರೆಯುವವು

ಔಷಧಿ ಹೆಸರು	ತೂಕ	ಮತಿಲ್ಲ
ಸ್ವರ್ಣಮೌಕರದ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
ತ್ರಿ ನೇ ನಂಬರ್	೧	೮—೦—೦
ಪ್ರವಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ತಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿನವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೩—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳೆಭಸ್ಮ	೧	೦—೮—೦
ತಂಜೀಬುಭಸ್ಮ	೧	೦—೮—೦
ಜಸ್ತದಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೩—೦
ಅಭ್ರಕಭಸ್ಮ	೧	೩—೦—೦
ಮೌಕ್ತಿಕಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪುಚಿಪ್ಪಿನ ಭಸ್ಮ	೧	೦—೪—೦
ಸಾರಂಗದ ಕೊಡಿನ ಭಸ್ಮ	೧	೦—೪—೦
ಗೋದಂತಿಹರಿತಾಲಭಸ್ಮ	೧	೦—೪—೦
ಕರ್ಪೂರಿ (೧ನೇ ನಂಬರ್)	೧	೪೦—೦—೦
ತಿಲಾಜಿತ ಸೂರ್ಯಪುಟಿ	೧	೧—೦—೦
ತಿಲಾಜಿತ ಅಗ್ನಿಪುಟಿ	೧	೦—೪—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ ಗುಟಿಕಾ ತೈಲ, ಘೃತ, ಗುಗ್ಗುಲ ಇತ್ಯಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಮಿಮಟ, ಜಿಲ್ಲಾ ಗಢವಾಲ್ ಯು. ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೆಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಷ್ಟಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಕಾಲ್ಪನಾಗಿ ಬಿದ್ದಿವೆ ಅನೇಕರು ಆ ಕಾರಣದಿಂದಲೇ ಪರಿಶುದ್ಧವಾದ ಶಿವಪೂಜಾವಿಧಿಯನ್ನು ಕಾಣದೆ ಅಸಮಾಧಾನಪಡುತ್ತಿರುವರು ಇದು ಆಕ್ಷಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕೆಂದೂ ಸ್ವರೋಚ್ಚಾರವಾಗಿ ಉಚ್ಚರಿಸಬಾರದೆಂದೂ ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳ ಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ-ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರ ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವಿಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ವೀಕೃತವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೫ ಆಣೆ** ವಿ ಪಿ ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಸಮಕಗ್ರಂಥಗಳೆಲ್ಲೆಲ್ಲ ಶಿಖಾಪಾಷ್ಟಕದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಯಪೀರಂಭೆಕದ ಸ್ವಪ್ನಭಾನಂದ ಶಿವಾಚಾರ್ಯರಂಬ ಪಾ ಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಶೃದ್ಧಾಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕುತೂಹಲದಿಂದ ಕೂಡಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾತೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಸಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಷ್ಟಾಗಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥವನ್ನು ದ್ರವ್ಯಕ್ಕಾಗಿ ಪಂಡಿತರು ನಿರೀಕ್ಷ ದ್ರವ್ಯವನ್ನು ಪ್ರಯಮಾಡಿದ್ದಾರೆ ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಹಿಡಿತೇಚ್ಛೆಯನ್ನಿಗೆ ಅಪ್ಪಣೆಯನ್ನು ಕೊಟ್ಟಿರುವರಲ್ಲದೆ, ಈ ಗ್ರಂಥಪಲ್ಲಿ ನಿಯೋಜಿಸಿರುವುದಕ್ಕೋಸ್ಕರ ತಮ್ಮ ಧನ್ಯವಾದ ಭಾವನಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಆದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೪ ರೂಪಾಯಿ ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ಮಟಾ ಹೋಗಲಾಗಿ ೩ ರೂ. ಗೆ ದೊರೆಯುವುದು ವಿ ಪಿ ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಟಿಕಾಲಿನಲ್ಲಿ ಆಸ್ಥಾನದಲ್ಲಿರುವ ಫೋಟೋ ಸೈಜು ೨೦×೧೪ ಬೆಲೆ ೧೫ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಾರ್ಥ ಅಗಸ್ತ್ಯ, ವಸಿಷ್ಠ, ವ್ಯಾಸ, ಸಾನಂದ, ದುರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸಿದ ಫೋಟೋ ಸೈಜು ೧೦×೧೪ ಬೆಲೆ ೦—೧೨—೬

ಸಪ್ತ ವೀರಾರಿರಾಜಮಾರಿರತ್ನ ಐನರು ಆಚಾರ್ಯರು ಒಂದರಲ್ಲಿರುವ ಫೋಟೋ ಸೈಜು ೧೪×೧೦ ಬೆಲೆ ೦—೧೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೫ ಕ್ಕೆ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆಸನರಿಸಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ಏಕೋದ್ದೇಶ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೪ ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಶಾಕ್ಷೇತ್ರಶಿವಾಚಾರ್ಯಮಹಾಸನ ಶ್ರೀ ಜಗದ್ಗುರು ವಿದ್ಯಾಧಿಪತಿ ಮಹಾಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರಫೋಟೋ ೦—೦—೯

ಶ್ರೀಮಜ್ಜಗದ್ಗುರು ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀಸಾಧಕಬ್ರಹ್ಮಚಾರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಚಪೀಠ ಶ್ರೀ ಕಾಶೀಸಾಧಕಬ್ರಹ್ಮಚಾರಿಗಳವರ ಫೋಟೋ ಬೆಲೆ ೧೫ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಆತ್ಯಂತ ಸುಂದರವಾದ ಫೋಟೋ ೧೫ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಆತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೫ ಕ್ಕೆ ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಆತ್ಯಂತ ಸೊಬಗಿನ ಫೋಟೋ ೦—೦—೯

ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಪರ್ಯಂತರಿರುವ ಸುಂದರ ಫೋಟೋ ೦—೦—೯

ಹಿಮಮಂಡಿತ ಪರ್ವತ ಸಾನ್ನಿಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಗುಡಿಯ ಸುಂದರ ಫೋಟೋ ೦—೦—೯

ಸೊಲ್ಲಾಪುರದಲ್ಲಿ ನೆರೆಸೇರಿದ ಉತ್ಸವನಿಮಿತ್ತ ಜಗದ್ಗುರುಗಳವರ ಆಡ್ಡಪಲ್ಲಕ್ಕಿಯ ಹೊತ್ತವರ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವವಕಾಶವಿಲ್ಲ. ೫ ರೂಪಾಯಿಗಳ ಮೇಲೆ ಕಂಡಿಳಿಸುವ್ಯವಗೂ, ಫೋಟೋ ವ್ಯಾಪಾರಿಗಳಿಗೂ ೧೦ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ



(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯಪ್ಪಾಡಿಯು ಕಂಡುಹಿಡಿಯಲ್ಪಟ್ಟಿತ್ತು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ —ಸೀನಸಿ, ಒಂಟೆ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೂಜೆಯಾಗಿ ಉಪಯೋಗಿಸುತ್ತಿರೆ ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗಿತ್ತು. ಬುದ್ಧಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ ೦-೪-೦. ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ ಪಿ. ೮ ಆಣೆ.

ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[4] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	..	೨ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	...	೧ ಆಣೆ
ಪುರುಲಸಿದ್ಧೇಶ್ವರಸ್ತೋತ್ರ		೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	...	೧ ಆಣೆ
ಪಂಚಮಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	.	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	..	೧ ಆಣೆ
ಬಸವಾದಿನಿಜಶತ್ತ್ವಪರಿಪಣ (೪ನೆಯ ಆವೃತ್ತಿ)	....	೨ ಆಣೆ
ಶ್ರೀವೀರಣುಕಾಚಾರ್ಯಶತಕ(೩ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯಪ್ರಭಾಕರ	....	೨ ಆಣೆ
ಶ್ರೀಗುರುತತ್ತ್ವಪದಗಳು		೨ ಆಣೆ
ಶ್ರೀಗುರುಮುಖಶಿವಾಚಾರ್ಯಶತಕ	....	೨ ಆಣೆ
ವೀರಶೈವಮತಮಾಮಾಂಸಾ	...	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	.	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಫೋರೀಕರಣ (೩ನೆಯ ಆವೃತ್ತಿ)	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	....	೬ ಆಣೆ
ವೀರಶೈವಮಹಾತ್ಮರು	....	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		**೮ ಆಣೆ**
Speeches by Pandit Shri Kashinatha Shastri (*English*)		**12 As.**
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	...	೧೨ ಆಣೆ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೫೩ ಪುಟ)	....	೮ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	...	೩ ರೂ.
ವೀರಶೈವಸಿದ್ಧಾಂತಸುಧಾಕರ	....	೩ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	...	೧ ರೂ.
ಸಿದ್ಧಾಂತವಿವೇಕ (ಕನ್ನಡ ಟೀಕಾಸಹಿತ)	....	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ.
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)		೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	...	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	೧೨ ಆಣೆ
ವೀರಶೈವರತ್ನ (ಸರಣಿ) .	...	೧ ರೂ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	...	೨ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	...	೧ ರೂ.
ವೀರಶೈವೇತಿಹಾಸ (ಸಂಸ್ಕೃತ)	...	೧ ರೂ.
ಸಂಧಿಕೌಶ್ವರಕಾರಿಕಾ (ಸಂಸ್ಕೃತ)	...	೨ ಆಣೆ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ)	...	೨ ಆಣೆ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಂಸ್ಥಾನದಲ್ಲಿ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಪಂಚಾಚಾರ್ಯ ವೇದ ತಿರಪಿ ಗುರುಪಾದಂಜಾತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾನ್ವಾನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಕರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾನಿದ್ವಾನ್ ವೆಙ್ಕಟ ತಿರಸಿ ಗುರುಕಾಂತಶಾಸ್ತ್ರಿಗಳು

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೫ ಕ್ಕೆ ೨ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ ನೇ ಮೇ ೧೯೩೮ [ಸಂಚಿಕೆ ೩

ಒಳದೇಶದ ವೃತ್ತಾಂತಗಳು.

ವಿದುರಾಶ್ವತ್ಥದ ವಿಷಾದಘಟನೆಯು ವಿಚಾರಣಾ ಸಮಿತಿಯು ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜಿನ ಗಣಿತಶಾಸ್ತ್ರಭವನದಲ್ಲಿ ಪ್ರತಿದಿನವೂ 12ಂದ 2 30 ಮತ್ತು 3ರಿಂದ 5ಘಂಟೆವರೆಗೂ ವಿಚಾರಣೆ ನಡೆಸುವದು.

ಶ್ರೀ ರಾಜಕುಮಾರ ಜಯಚಾಮರಾಜೇಂದ್ರ ಒಡೆಯರ ವಿವಾಹಕಾಲದ ಸಂತೋಷಕ್ಕಾಗಿ ಜೈಲಿನಲ್ಲಿ ಬಹಳ ದಿರ್ಘಕಾಲದಿಂದ ಕಠಿನ ಶಿಕ್ಷೆಯನ್ನು ಅನುಭವಿಸುತ್ತಿದ್ದ ಸುಮಾರು 70 ಮಂದಿ ಖೈದಿಗಳನ್ನು ಬಿಡುಗಡೆ ಮಾಡಿರುತ್ತಾರೆ.

ಮುಂದೆ ನಡೆಯಲಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಾರ್ಟಿಯ ಸದಸ್ಯರೆಲ್ಲರೂ ಒಂದೇ ಪಂಗಡವಾಗಿ ಒಂದು ಕಡೆ ಕೂಡಲು ಆಸೆಬ್ಬಿಯಲ್ಲಿ ಸ್ಥಳವನ್ನು ನಿರ್ಪಡಿಸಿಕೊಡಬೇಕೆಂದು ಸಭೆಯ ಸ್ಪೆಷಲ್‌ಡ್ಯೂಟಿ ಆಫೀಸರಿಗೆ ಜಿಲ್ಲಾಕಾಂಗ್ರೆಸ್ಸಿನವರು ಪತ್ರ ಬರೆಯಿಕೊಂಡಿರುತ್ತಾರೆಂದು ತಿಳಿದುಬರುತ್ತಿದೆ.

ಶ್ರೀಶೃಂಗೇರಿಮಠದ ಸ್ವಾಮಿಗಳಾದ ಶ್ರೀಚಂದ್ರಶೇಖರಭಾರತೀಮಹಾಸ್ವಾಮಿಗಳು ಚಾತುರ್ಮಾಸ್ಯವ್ರತವನ್ನು ಕೈಗೊಳ್ಳಲಿರುವ ಬೆಂಗಳೂರಿಗೆ ದಯಮಾಡಿಸುವರೆಂದು ತಿಳಿದುಬಂದಿದೆ. ಶ್ರೀಮನ್ಮಹಾರಾಜರವರು ಆಗ್ಮೆ ಬೆಂಗಳೂರಿಗೆ ದಯಮಾಡಿಸಿ ಮಹಾಸ್ವಾಮಿಗಳವರನ್ನು ಸಂದರ್ಶಿಸುವರೆಂದು ತಿಳಿದುಬರುತ್ತದೆ.

ರಾಜಧಾನಿಯಲ್ಲಿರುವ ವೀರಶೈವಮತದ ರಿಟೈರ್ಡ್ ಪೋಲೀಸ್ ಇನ್ಸ್‌ಪೆಕ್ಟರ್ ಮಿ|| ರಾಗಿ ತಿಮ್ಮಪ್ಪಯ್ಯನವರ ತೊಮ್ಮಗಳಾದ ಶ್ರೀಮತಿ ರಾಜಮ್ಮನೆಂಬ ಬಾಲಿಕೆಯು ಈ ಸಾರೆ ನಡೆದ ಬಿ.ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಳೆಂಬ ಕೇಳಿ ಸಂತೋಷಿಸುತ್ತೇವೆ. ಈಕೆಯು ಇದುವರಿಗೂ ಒಂದು ವರ್ಷವೂ ಯಾವ ತರಗತಿಯಲ್ಲಿಯೂ ಅನುತ್ತೀರ್ಣಳಾಗದೆ ಮೇಲಕ್ಕೇರಿ ಬಂದಿರುವುದು ವಿಶೇಷವೇ ಸರಿ. ವೀರಶೈವ ಬಾಲಿಕೆಯರಲ್ಲಿ ಇಂಥ ಉತ್ಸಾಹಮತಿಯುಳ್ಳ ಸುಶೀಲೆಯರೂ,ಮೇಧಾವಿನಿಯರೂ ಅತಿ ವಿರಳವೆಂದು ಧಾರಾಳವಾಗಿ ಹೇಳಬಹುದು. ಈಕೆಗೆ ಶುಭ್ರರನು ಸಕಲ ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವೆವು.

ನೈಸೂರು ಸರ್ಕಾರದ ಚೀಫ್ ಸೆಕ್ರೆಟೆರಿಯವರು ಎಲ್ಲಾ ಡಿಸ್ಟ್ರಿಕ್ಟುಗಳ ಡೆಪ್ಯುಟೆ ಕಮಿಷನರುಗಳಿಗೂ ಕಾಂಗ್ರೆಸ್ ಬಾವುಟವನ್ನು ಸಾರ್ವಜನಿಕ ಕ್ಷೇತ್ರದಲ್ಲಾಗಲಿ, ಬೇರೆಲ್ಲಾಗಲಿ ಎತ್ತಿ ಕಟ್ಟುದಾಗ್ಲೂ ಅವುಗಳ ವಂದನೆ ಮಾಡಿದಾಗ್ಲೂ ಲಕ್ಷಿಸಬೇಕಾಗಿಲ್ಲವೆಂದೂ ಯಾರನ್ನೂ ಈ ವಿಷಯದಲ್ಲಿ ದಬ್ಬಿಗಿರಿ ಮಾಡಬೇಕಾಗಿಲ್ಲವೆಂದೂ ಅಧಿಕಾರಿಗಳೆಲ್ಲಾ ಎಚ್ಚರಿಕೆ ತೊಡಕಕ್ಕದ್ದು" ಎಂಬುದಾಗಿ ಆರ್ಡರು ಕೊಟ್ಟಿರುವುದಾಗಿ ಪ್ರಕಟವಾಗಿದೆ. ಈ ವಿಷಯದಲ್ಲಿ ಮಿ|| ಗಾಂಧಿಯವರು ಮೈಸೂರಿನ ವಿಚಾರದಲ್ಲಿ ರಾಜಭಕ್ತಿಯನ್ನು ತೋರಿಸುವುದಾಗಿಯೂ ಕಾಂಗ್ರೆಸ್ ಧ್ವಜವನ್ನು ಹಾರಿಸುವಂತಹ ಮಹಾಉಚ್ಚವಕಾಲಗಳಲ್ಲೆಲ್ಲಾ ಮೊದಲು ಮೈಸೂರ್ಧ್ವಜವನ್ನು ಹಾರಿಸುವಂತೆ ಮೈಸೂರು ಕಾಂಗ್ರೆಸ್ಸಿಗೆ ಸೂಚನೆಕೊಟ್ಟರುವರೆಂದುತಿಳುಬರುತ್ತದೆ.

ಮಹಾಧಿಪತಿಗಳಿಂದ ಬಂದ ರಾಜಬಿಲ್ಲಿತ್ತುಗಳು !

ಈ ತಿಂಗಳು ೧೫ನೆಯ ತಾರೀಖಿನ ದಿವಸ ನೆರವೇರಿದ ಶ್ರೀ ಜಯಚಾಮರಾಜ ಒಡೆಯರವರ ವಿವಾಹ ಮಹೋತ್ಸವಕಾಲದಲ್ಲಿ ಶೃಂಗೇರಿಮಠ, ರಂಭಾಪುರೀಮಠ, ತಿವಗಂಗಾಮಠ, ಶ್ರವಣಬೆಳಗುಳಮಠ, ಉತ್ತರಾದಿಮಠ, ರಾಘವೇಂದ್ರಸ್ವಾಮಿಮಠ, ಕುಂದಾಪುರ ವ್ಯಾಸರಾಯಸ್ವಾಮಿಮಠ, ಯತಿರಾಜಮಠ, ಭೀಮನ ಕಟ್ಟೆಮಠ, ಸೋಸಲೆಮಠ, ಕಂಚಿ ಕಾಮಕೋಟಿಮಠ ಮೊದಲಾದ ಮಠಾಧಿಪತಿಗಳು ರಾಜದಂಪತಿಗಳಿಗೆ ರಾಜಪಿಲ್ಲಿತ್ತುಗಳನ್ನು ಆಶೀರ್ವಾದರೂಪವಾಗಿ ದಯಪಾಲಿಸಿದ್ದರು. ಈ ಮಠಾಧಿಪತಿಗಳಲ್ಲಿ ಮೊದಲನೆಯ ೫ ಮಠದ ವರಿಗೆ ಫಸ್ಟ್‌ಕ್ಲಾಸ್ ಅವ್ಯರ್ ಲವಾಜಮಿಯೂ, ಮಿಕ್ಕ ಮಠದವರಿಗೆ ಸೆಕಂಡ್‌ಕ್ಲಾಸ್ ಲವಾಜಮಿಯೂ ಆರಮನೆಯಿಂದ ಕೊಡಲ್ಪಟ್ಟಿತು. ಈ ಮಠಾಧಿಪತಿಗಳ ಲಿಸ್ಟಿನಲ್ಲಿ ಶೃಂಗೇರಿಯ ಕರುನಾಳು ಜಾಳೆಹೊನ್ನೂರು(ರಂಭಾಪುರೀ) ಜಗದ್ಗುರುಪೀಠವು ಎರಡನೆಯದಾಗಿ ಉಲ್ಲೇಖಿಸಲ್ಪಟ್ಟಿರುವುದನ್ನು ನೋಡಿ ವೀರಶೈವಸಮಾಜವೆಲ್ಲವೂ ಸಂತೋಷಸಾಗರದಲ್ಲಿ ಲೋಲಾಡುತ್ತಿರುವುದು. ಇದಕ್ಕಾಗಿ ನಮ್ಮನ್ನಾಳುವ ಮಹಾಪ್ರಭುಗಳವರಿಗೆ ವೀರಶೈವಸಮಾಜವೇ ಚಿರಯಣಿಯಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಿಸಲಾರದು ಸನಾತನಧರ್ಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸುತ್ತಿರುವ ಯದುವಂಶವು ಧರಾತಲದಲ್ಲಿ ಆಚಂದ್ರಾರ್ಕವಾಗಿ ಬೆಳಗಲೆಂದು ಹಾರೈಸುತ್ತೇವೆ.

ಸ್ವೀಕಾರ.

ರಾಯಚೂರು ಡಿ|| ಬಿಚ್ಚಾಲಿ ಸಾವಿರನೇವರು ಮರದ ಮಹಾಂತೇಶ್ವರನ ರಥೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪತ್ರಿಕೆಯನ್ನಾಗಿ ತೆಗೆಯಿಸಿದ 1 ರೂ. ಮತ್ತು ರಾಯಚೂರು ಕಿಲ್ಲೆಮಠದಲ್ಲಿ ನೆರವೇರಿದ ಶ್ರೀ ಜಗದ್ಗುರು ವಿಶ್ವೇರಾಮಾರಾಧ್ಯರ ಜಯಂತೀಮಹೋತ್ಸವ ಸಮಯದಲ್ಲಿ ತೆಗೆಯಿಸಿದ 1 ರೂ. ಒಟ್ಟು 2 ರೂಪಾಯಿಗಳು ವೀ|| ಮಿರ್ಜಾಪುರ ಮಠದ ಬಸವ ರಾಜಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪ್ರಭಾಪತ್ರಿಕೆಯು ಚಿರಕಾಲ ಬಾಳಲಿ.

ಪಂಚಾಚಾರ್ಯ ಪ್ರಭಾಪತ್ರಿಕೆಯು ಈ ಭೂಮಂಡಲದಲ್ಲಿ ಅವತರಿಸಿ ಇಂದಿಗೆ ಏಕಾದಶಸಂವತ್ಸರಗಳು ಗತಿಸಿ ದ್ವಾದಶಸಂವತ್ಸರವು ಪ್ರಾರಂಭವಾಗಿದೆ. ಈ ಪತ್ರಿಕೆಯು ಇಂದಿನವರೆಗೂ ಯಾವತೊಂದರೆಯೂ ಇಲ್ಲದೆ ತನ್ನ ಧ್ಯೇಯವನ್ನು ಬಡದೆ ಲೋಕೋತ್ತರವಾದ ಕೀರ್ತಿಯನ್ನು ಗಳಿಸಿತು. ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಮತತತ್ತ್ವ ಪ್ರತಿಪಾದನರೀತಿಯನ್ನೂ ಅರ್ಥಗಾಂಭೀರ್ಯವನ್ನೂ ನಿಪುಣಗಳ ಜೋಡಣೆಯ ಕುಶಲತೆಯನ್ನೂ ನೋಡಿ ನೋಡಿ ನಾಚಿಕೆವ್ವಂದವು ಹಿಗ್ಗುತ್ತಿರುವುದು. ಪರಮತೀಯರಂತೂ ಈ ಪತ್ರಿಕೆಯ ಆಗಮನವನ್ನೇ ನಿರೀಕ್ಷಿಸುತ್ತ ವಿಷಯಾವೃತವನ್ನು ಸವಿದು ಸವಿದು ನಲಿಯುತ್ತಿರುವರು. ಆಹಾ! ಪಂಚಾಚಾರ್ಯಪ್ರಭೆಯೇ! ನಿನ್ನಲ್ಲಿ ಅಹಕವಾಗಿರುವ ಅನೇಕ ವಿಧವಾದ ಲೇಖಗಳನ್ನು ವರ್ಣಿಸಲು ಒಂದೇ ಒಂದು ನಾಲಿಗೆಯುಳ್ಳ ನರಪಿಗೆ ಮಾತ್ರ ಆಸಾಧ್ಯ. ಆದರೆ ಸಹಸ್ರ ನಾಲಿಗೆಗಳುಳ್ಳ ಆದಿಶೇಷನಿಗೇನಾದರೂ ಸಾಧ್ಯವೋ ಅಸಾಧ್ಯವೋ ನಾನರಿಯೆ. ಪಂಚಾಚಾರ್ಯ ಪ್ರಭೆಯೇ! ನಿನ್ನ ಧ್ಯೇಯವನ್ನು ಮಾತ್ರ ಬಿಡದೆ ವೀರಶೈವ ಮತ ತತ್ತ್ವದ ಸಿಂಹನಾದವನ್ನು ಎಡಬಿಡದೆ ಮಾಡುತ್ತ ಭರತ ಭೂಮಿಯಲ್ಲಿ ಚಿರಕಾಲ ಬಾಳುವಂತೆ ಜಗದೀಶನು ನಿನಗೆ ಆಯುಸ್ಸುಕೊಡಲಿ

ವೀರಶೈವಮತ ಭಾಂಧವರೇ! ಇತ್ತ ಸ್ವಲ್ಪ ಲಕ್ಷ ಕೊಡಿರಿ. ವೀರಶೈವರೆಂದರೆ ಅರ್ಥವೇನು? ವೀರ ಎಂದರೆ ಪರಾಕ್ರಮಿ, ಕಡುಗಲಿ ಎಂದರ್ಥ. ಓಹೋ! ಈ ವೀರಶೈವರು ನಮಗಿದ್ದು ಸಂಡರಸಂತೆ ಸುಮ್ಮನೆ ಕುಳಿತಿರುವೆವಲ್ಲವೆ? ಛೇ! ಛೇ!! ವೀರಶೈವ ಮತ ಬಾಂಧವರೇ ವೀರಿ! ಇಂದೇ ಆ ಪಟ್ಟಾಕ್ಕೆ ತಿಲಾಂಜಲಿಯನ್ನಿರಿಚಿ, ಪವಿತ್ರವಾದ ಹಾಗೂ ಆನಂದಿಕಾಲದಿಂದ ಬಂದ ವೀರಶೈವ ಮತದ ಜಯಭೇರಿಯನ್ನು ಹೊಡೆಯುವ ಪಂಚಾಚಾರ್ಯ ಪ್ರಭಾಪತ್ರಿಕೆಯು ಎಲ್ಲೆಡೆಯಲ್ಲಿಯೂ ಕಂಗೊಳಿಸುವಂತೆ ಮಾಡಲು ವೀರಕಂಕಣಬದ್ಧರಾಗಿರಿ. ನಮ್ಮ ಕೀರ್ತಿಯನ್ನು ಪ್ರಕಟಿಸುವ ಮಮತೆಯ ಮಾತೆಯನ್ನು ಯಾರಾದರೂ ಹೀಯ್ಯಾಳಿಸಿ ಬೆನಿರಿಸಿದರೆ ನಾವು ಸುಮ್ಮನಿರುವೆವೇ? ಇಲ್ಲ. ಅವರಲ್ಲಿಗೆ ಹೋಗಿ ತಕ್ಕ ಬುದ್ಧಿಯನ್ನು ಹೇಳುವೆವು. ಆದರಂತೆಯೇ ನಿಗಮಾಗಮ ಒಡ್ಡವಾದ ವೀರಶೈವ ಮತ ಸ್ವರೂಪವನ್ನೂ ಆ ಮತದ ಮೂಲ ಗುರುಗಳ ಲೀಲಾವಳಿಗಳನ್ನೂ ಸಾರುತ್ತ ಮುಂದುವರಿಯುತ್ತಿರುವ ಈ ನಮ್ಮ ಮಮತೆಯ ಮಾತೆಯಾದ ಪಂಚಾಚಾರ್ಯ ಪ್ರಭಾ ಪತ್ರಿಕೆಯನ್ನು ತನ್ನುಳಿದ ಯಾವಪತ್ರಿಕೆಗಳಾದರೂ ಹೀಯ್ಯಾಳಿಸಿದರೆ ಅವುಗಳನ್ನು ತುಚ್ಛೀಕರಿಸಿ ವೀರಶೈವ ಮತದ ವಿಜಯಧ್ವಜವನ್ನು ಮೆರೆಯಿಸುವ "ಪಂಚಾಚಾರ್ಯಪ್ರಭಾ" ಮಾತೆಯನ್ನು ಮರೆಯಬೇಡಿರಿ. ವೀರಶೈವ ವೃಂದಕ್ಕೆ ಈ ವಿಧವಾದ ಸದ್ಬುದ್ಧಿಯನ್ನು ಅನುಗ್ರಹಿಸಲೆಂದು ಭಗವತ್ಪಾದರಲ್ಲಿ ಈ ಲೇಖಕನು ಕಿಂಕರಭಾವದಿಂದ ಸದಾ ಪ್ರಾರ್ಥಿಸುತ್ತಾನೆ.

ಗುರುಕಿಂಕರ,
ಸೊಪ್ಪಿನ ಗುರುಲಿಂಗಪ್ಪ, ಹೂವಿನ ಹಡಗಲಿ.

ಶ್ರೀ ರೇಣುಕಗೀತೆ ಅರ್ಥಾತ್, ಸಿದ್ಧಾಂತಶಿಖಾಮಣಿ

ಲೇಖಕರು ಕಾವ್ಯತೀರ್ಥ, ಸಾಹಿತ್ಯ ವೇದಾಂತಾಚಾರ್ಯ
ಶ್ರೀ ವಾಗೀಶವಿದ್ಯಾಚಾರ್ಯರು, ಬ್ರಹ್ಮಸೂತ್ರ ಮುದೇನೂರು

(ಲೇಖಾಂಕ ೧೧)

ಇನ್ನು ರೇಣುಕ ಶಂಕರರಾದಿ ಪೂರ್ವಾಚಾರ್ಯರಿಂದೀ ಜೆಗಾದರೂ ದೈವ್ಯಾಂದೈವ್ಯಕ್ಕೆ ಎಷ್ಟ ಮನ್ನಿಸಿಯದ್ದಿ ತೆಂಬುದನ್ನಷ್ಟು ವಿಚಾರಿಸಿ ರೇಣುಕಗೀತೆಯ ವಿಷಯವ ನ್ನೆತ್ತಿಕೊಳ್ಳೋಣ! ಮಧ್ಯಕಾಲದ ವೇದಾಂತಾಚಾರ್ಯರ ನಾಮಾವಲಿಯಲ್ಲಿ ಭಟ್ಟಭಾಸ್ಕರ ಜಾಗೂ ಯಾದವ ಪ್ರಕಾಶರ ನಾಮಗಳು ಸುಪ್ರಸಿದ್ಧವಾದವುಗಳೇಂಬುದು ಎಲ್ಲರಿಗೂ ತಿಳಿದ ವಿಷಯ ಭಟ್ಟಭಾಸ್ಕರರು ಪ್ರಕಂಡ ಮತನನ್ನು ಅನುಸರಿಸಿ ವೇದಾಂತ ಸೂತ್ರಗಳಮೇಲೆ ಭಾಷ್ಯವನ್ನು ರಚಿಸಿದರೆಂಬುದು ಗೊತ್ತಾಗುವುದು ಇವರ ವಿಚಾರವು ಶ್ರೀಕರಭಾಷ್ಯದಲ್ಲಿಯೂ ಬಂದಿದೆ ಈ ಭಟ್ಟಭಾಸ್ಕರರ ಕಾಲನಿರ್ಣಯ ವಿಷಯದಲ್ಲಿ ಸಂ ದೇಹವಿರುವುದಾದರೂ ೯ನೆಯ ಶತಮಾನದಲ್ಲಿ ಇವರು ಇದ್ದರೆಂದು ಮಾತ್ರ ಧಾರಾಳವಾಗಿ ಹೇಳಬಹುದು ಕೆಲ ವರು ಇವರು ಹತ್ತನೆಯ ಶತಮಾನದಲ್ಲಿದ್ದರೆಂತಲೂ ಹೇಳ್ವರು (ವೇದಾಂತ ತರ್ಕ-ಸಂಗ್ರಹ (ಭೂವಿ ಭಾ) ಆನಂದಜ್ಞಾನಕೃತ, ಪ್ರಸಂ ೧೬೬) ಉದಯನಾಚಾ ರ್ಯರು "ಕುಸುಮಾಂಜಲಿ" ಯ ದ್ವಿತೀಯ ಸ್ತಬಕ ದಲ್ಲಿ "ಬ್ರಹ್ಮಸರಿಣಿಕೌರಿತಿ ಭಾಸ್ಕರಗೋತ್ರೇಯಾಜ್ಯತೆ" ಎಂಬವಾಗಿ ಸದರಿಯವರ ಹೆಸರನ್ನಷ್ಟಿಕೊಂಡು ಬ್ರಹ್ಮ ಪರಿಣಾಮವಾದವನ್ನುಲ್ಲೇಖಿಸಿರುವರು ಉದಯನಾ ಚಾರ್ಯರು ಸುಮಾರು ಕ್ರಿ ಶ ೯೮೪ ರಲ್ಲಿ 'ಲಕ್ಷಣಾವಲಿ' ಯೆನ್ನು ರಚಿಸಿದರೆಂದು ಗೊತ್ತಾಗುವುದರಿಂದ ಈ ಉದಯನಾಚಾರ್ಯರು ೧೦ ನೆಯ ಶತಮಾನಕ್ಕೆ ಪೂರ್ವ ಶಂಕರಾಚಾರ್ಯರಿಂದೀಚೆಗೆ ಅವತರಿಸಿದ್ದರೆಂದು ನಿಶ್ಚ ಯವಾಗುವುದಾದುದರಿಂದ ಈ ಉದಯನಾಚಾರ್ಯರಿ ಗಿಂತಲೂ ಭಟ್ಟಭಾಸ್ಕರರು ಪೂರ್ವದವರೆಂಬ ವಿಷಯವು ನಿರ್ವಾದಾಸ್ಪದವಾದುದು ಆದರೆ ಇನ್ನು ಕೆಲ ಇತಿ ಹಾಸಜ್ಞರು ಈ ಭಾಸ್ಕರರು ಶಂಕರಾಚಾರ್ಯರ ಸಮ ಕಾಲದಲ್ಲಿಯೇ ಇದ್ದರೆಂದೂ ಹೇಳುವರು, ಆಲ್ಲದೆ ಆ ಕಾಲದಲ್ಲಿಯೇ ಇದ್ದುದರಿಂದ ಶಂಕರಾಚಾರ್ಯರು ಭಟ್ಟ ಭಾಸ್ಕರರ ಜ್ಞಾನೈಶ್ವರ್ಯಸಮುಚ್ಚಯವಾದವನ್ನೂ ಭಟ್ಟ ಭಾಸ್ಕರರು ಶಂಕರಾಚಾರ್ಯರ ಮಾಯಾವಾದವನ್ನೂ ಖಂಡಿಸಿರುವರೆಂಕಲು ಬರೆಯುವರು ಶಂಕರಾಚಾರ್ಯರು ಗೀತಾಭಾಷ್ಯದ ೨ ನೆಯ ಅಧ್ಯಾಯದ ಆರಂಭದಲ್ಲಿ ಜ್ಞಾನಕರ್ಮಸಮುಚ್ಚಯವಾದವನ್ನು ಖಂಡಿಸಿರುವರಷ್ಟೆ! ಆ ಖಂಡನೆಯು ಈ ಭಟ್ಟಭಾಸ್ಕರರಮೇಲಿನದೆಂದು ಇನ್ನು ಕೆಲವರು ಹೇಳುವರು. ಬ್ರಹ್ಮಸೂತ್ರಭಾಷ್ಯ (೩-೪-೨೯) ದಲ್ಲಿ ಈ ಭಾಸ್ಕರರ ಒಂದು ಉಕ್ತಿಯು ವಿವರಿಸಲ್ಪಟ್ಟಿದೆ. "ಯದಿ ಪುಣ್ಯಮಪಿ ನಿರ್ವರ್ತಕ ತೇ ಕಿಮುರ್ಧಾ ತರ್ಹಿ ಜಾತಿಃ? ಇತ್ಯಾತ್ಮಕಂಕೃ ಉಚ್ಯತೇ! ವಾಜಸ್ಪತಿ ಮಿಶ್ರರೂ ಕೂಡ ಭಾಮತಿಯಲ್ಲಿ ಈ ಉಕ್ತಿ ಯನ್ನು ಉದ್ಧರಿಸಿರುವರು 'ಯೇತು ಪುಣ್ಯಮಪಿನಿರ ತರ್ತೇ ಕಿಮುರ್ಧಾ ತರ್ಹಿ ಜಾತಿಃ, ಇತ್ಯಾದಿಂಕೃ ಸೂತ್ರ ಮವತಾರಯಂತಿ' ಇತ್ಯಾದಿ! ಇಲ್ಲಿ 'ಯೇ' ಎಂಬ ಪದದಿಂದ ಭಟ್ಟಭಾಸ್ಕರರನ್ನೇ ತಿಳಿದುಕೊಳ್ಳಬೇಕಾಗು ವುದು, ಏಕೆಂದರೆ 'ಯದಿ ಪುಣ್ಯಮಪಿ' ಮುಂತಾದ ವಾಕ್ಯವು ಭಾಸ್ಕರ ಭಾಷ್ಯದಲ್ಲಿಯೂ ಕಂಡುಬರುತ್ತದೆ ವಾಚಸ್ಪತಿ ಮಿಶ್ರರೂ ಕ್ರಿ ಶ ಏಳಾ ರಲ್ಲಿದ್ದರೆಂಬುದು ಸುಪ್ರಸಿದ್ಧವಾದ ವಿಷಯವೆಂದಮೇಲೆ ಭಟ್ಟಭಾಸ್ಕರರು ಇವರಿಗಿಂತಲೂ ಪೂರ್ವದಲ್ಲಿದ್ದರೆಂಬುದು ಸ್ವತಸ್ಸಿದ್ಧವೇ ಸರಿ ಸದರಿಯವರು ರೇಣುಗೀತೆಯಮೇಲೂ ಭಾಷ್ಯ ವನ್ನು ಬರೆದಿರುವರಾಗಿ ಗೊತ್ತಾಗುವುದು ಈ ಭಟ್ಟ ಭಾಸ್ಕರರಲ್ಲದೆ ಇನ್ನಿಬ್ಬರೂ ಇದೇ ಹೆಸರಿನಿಂದ ಪ್ರಸಿ ದ್ಧರಾಗಿರುವ ಸಂಗತಿಯೂ ಗೊತ್ತಾಗುವುದು ಈ ಭಾಸ್ಕರರು ದಿವಾಕರಭಟ್ಟರ ಮಕ್ಕಳು, ಶ್ರೀಕಂಠಶಿವಾ ಚಾರ್ಯರಿಶಿಷ್ಯರೂ ಆಗಿದ್ದರು. ಈ ಭಟ್ಟಭಾಸ್ಕರರು ಶಿವಸೂತ್ರಗಳಮೇಲೆ ಒಂದು ವಾರ್ತಿಕವನ್ನು ಬರೆದಿರು ವರೆಂದೂ ತಿಳಿದುಬಂದಿದೆ ಇವರು ಕಾಶ್ಮೀರಕ್ಕೆ ತೀರ್ಥ ಯೈವಸಂಪ್ರದಾಯೋದ್ಭವರೆಂಬುದಾಗಿಯೂ ಇವರ ಕಾಲ ಮಾನವು ಅಭಿನವ ಗುಪ್ತಾಚಾರ್ಯರಿಗಿಂತ ಪೂರ್ವಕಾ ಲದ್ದೆಂತಲೂ, ಇನ್ನೂ ಕೂಡ ಕೃಷ್ಣಗೀತೆಯ ಮೇಲೆ ಭಾಷ್ಯವನ್ನು ಬರೆದಿರುವರೆಂತಲೂ, ವಿಶಿಷ್ಟಾದ್ವೈತ ಶಿಖಾ ಮಣಿಗಳು ಒಪ್ಪುವರು. ಅಭಿನವ ಗುಪ್ತರು ಬರೆದಿರುವ ಗೀತಾಭಾಷ್ಯದ ೨ ನೆಯ ಶ್ಲೋಕ, ೧೮ ನೆಯ ಅಧ್ಯಾ ಯದಲ್ಲಿ ಇನ್ನೊರ್ವ ಭಾಸ್ಕರರ ಹೆಸರೂ ಬಂದಿದೆ ಅದರಿ ಈ ಭಾಸ್ಕರರು ವೇದಾಂತಿಭಾಸ್ಕರರಾಗಿದ್ದರೋ ಅಥವಾ ಶೈವಭಾಸ್ಕರರಾಗಿದ್ದರೋ ನಿಶ್ಚಯಮಾಡು ವುದು ಕಷ್ಟಸಾಧ್ಯವಾಗಿದೆ ಅಸ್ತು!

ವೇದಾಂತಿ ಭಟ್ಟಭಾಸ್ಕರರು ಸಮುಚ್ಚಯವಾದಿಗ ಳಾಗಿದ್ದೂ ಭಾಸ್ಕರರು ಕೇವಲ ಜ್ಞಾನದಿಂದ ಮೋಕ್ಷವೆಂದಿಗೂ ಉಂಟಾಗುವುದಿಲ್ಲವಾದುದರಿಂದ ಕರ್ತ ವ್ಯ ಅವಶ್ಯಕತೆಯ್ದುಂಟೆಂದು ಸಾರುವರು. ಜ್ಞಾನವ ಉತ್ಪತ್ತಿಯು ಶ್ರವಣ ಮನನ ನಿಧಿಧ್ಯಾಸನಪೂರ್ವಕ ಕರ್ಮದಿಂದುಂಟಾಗುವುದು ಜ್ಞಾನಲಾಭಕ್ಕಾಗಿ ಜನ್ಮ ಪರ್ಯಂತವೂ ಶಮ ದಮಾದಿಗಳ ಅನುಷ್ಠಾನವು ಅತ್ಯವಶ್ಯವಾಗಿ ನಡೆಯಬೇಕಾಗುವುದು, ಇಲ್ಲದಿದ್ದರೆ ಅವರ್ಣಾಶ್ರಮಿಗಳಾಗಲಾರದು ಅವರ್ಣಾಶ್ರಮಿಗಳಿಗೆ ಅಶ್ರಮೋಚಿತವಾದ ಕರ್ಮಾನುಷ್ಠಾನವೂ ಅತ್ಯಾವಶ್ಯಕವೇ, ಕರ್ತವ್ಯಗಳನ್ನು ಯಾವ ಅವಸ್ಥೆಯಲ್ಲಿಯೂ ಉಚಿತವಾದುದಲ್ಲ ಶ್ರುತಿಯಲ್ಲಿ ಯಾವ ಕಡೆಗೂ ಸಕಲ ಕರ್ಮಗಳನ್ನು ತ್ಯಾಗಮಾಡಬೇಕೆಂದು ಉಪದೇಶಿಸಲ್ಪ ಟ್ಟಿಲ್ಲ "ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ, ಲೋಕೈಷಣಾಯಾಶ್ಚ ವ್ಯುತ್ಥಾಯ ಭಿಕ್ಷಾಚರ್ಯಂ ಚರಂತಿ" ಈ ಶ್ರುತಿವಚನದಿಂದ ಶಂಕರಾಚಾರ್ಯ ಸಂಪ್ರದಾಯದವರು ಸಕಲಕರ್ಮತ್ಯಾಗನೇ ಉಪದಿ ಷ್ಟವಾಗಿದೆ ಎಂದು ಅಭಿಪ್ರಾಯಪಡುವರು, ಆದರೆ ಭಾಸ್ಕರರು ಈ ಶ್ರುತಿವಚನದಲ್ಲಿ ಕರ್ಮತ್ಯಾಗದ ಪ್ರಶಂ ಗವೂ ಕೂಡ ಉಕ್ತವಾಗಿಲ್ಲವೆಂದೂ ಅಪ್ಪಣೆಕೊಡಿಸು ವರು. ಈ ಶ್ರುತಿಯಲ್ಲಿ ಒಂದೊಂದು ಆಶ್ರಮದಿಂದ ಮುಂದಿನದೊಂದು ಆಶ್ರಮವನ್ನು ಹೊಂದತಕ್ಕ ವಿಷ ಯವು ಮಾತ್ರ ಉಕ್ತವಾಗಿದೆ ಸ್ಮೃತಿಯಲ್ಲಿಯೂ ಕೂಡ ಈ ವಿಧವಾದ ವ್ಯವಸ್ಥೆಯು ಉಕ್ತವಾಗಿದೆ. ಈ ಸ್ಮೃತ್ಯಭಿಪ್ರಾಯಾನುಸಾರವಾಗಿಯೇ ಮೇಲಿನ ಮಂ ತ್ರದಲ್ಲರ್ಥಮಾಡಿಕೊಳ್ಳುವುದೇ ಯುಕ್ತವಾಗಿದೆ ಇಲ್ಲ ದಿದ್ದರೆ ಛಿಲ್ಲಾಚಿರ್ಯಪದದಿಂದ ಬೌದ್ಧ ಜೈನ ಮೊದಲಾ ದವರೆ ಭಿಕ್ಷಾಚರಣನೆಂದು ಅರ್ಥಮಾಡಿಕೊಳ್ಳಬೇಕಾಗಿ ಬರುವುದು ಸ್ವತಿಗಳಲ್ಲಿ ದಂಡ ಕಮಂಡಲು ಯಜ್ಞೋ ಪವೀತ ಮೊದಲಾದವುಗಳ ಧಾರಣೆಯು ಕೇವಲ ವೇದ ವನ್ನೊಪ್ಪತಕ್ಕ ವೈದಿಕರಿಗೇನೇ ಹೇಳಲ್ಪಟ್ಟಿದೆ ಸರ್ವ ಕರ್ಮತ್ಯಾಗಿಯು ಕೇವಲ ಜ್ಞಾನದಿಂದಲೇ ಅಪವರ್ಗ (ಮೋಕ್ಷ) ವನ್ನು ಸಂಪಾದಿಸುವನೆಂಬುದು ಎಂದೂ ಒಪ್ಪತಕ್ಕ ಸಂಗತಿಯಲ್ಲ, ಶ್ವೇತಾಶ್ವತರದಿ ಶ್ರುತಿವಚ ನಗಳು ಈ ವಿಷಯಕ್ಕೆ ಎಂದೂ ಒಪ್ಪಿಗೆಯನ್ನು ಕೊಡು ವಂತಿಲ್ಲ "ತಪಃಪ್ರಭಾವಾತ್ ದೇವಪ್ರಸಾದಾಚ್ಚ ಬ್ರಹ್ಮ ಹ್ಯೇತಾಶ್ವತರೋಽಥ ವಿದ್ವಾನ್ | ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ, ಪ್ರೋವಾಚ ಸಮ್ಯಗ್ಗಣಸೇವಿಜುಷ್ಟ ಮ್" ॥" ಶ್ವೇತಾಶ್ವತರೋಪನಿಷತ್ತಿನ ಈ ವಚನವು ಕರ್ಮತ್ಯಾಗವನ್ನೆಸಗಿಸುವುದಿಲ್ಲ. ಇಲ್ಲಿ ಅತ್ಯಾಶ್ರಮಿ ಶಬ್ದದಿಂದ ಆಶ್ರಮಗಳನ್ನು ದಾಟಿದವನೆಂದು ಅರ್ಥವಾಗುವುದಾದರೂ ಆ ದಾಟುವಿಕೆಯಲ್ಲಿಯೂ ಒಂದು ವಿಶೇಷವಿದೆ ಹೊಳೆಯನ್ನು ದಾಟಿದನೆಂದರೆ ಹಕ್ಕಿಯಂತೆ ಅಂತರದಿಂದ ಹಾರಿದನೆಂದು ಅರ್ಥಮಾ ಡುವರಲ್ಲೆ! ಹಾಗೆ ಒಂದುಮೆಳೆ ಅರ್ಥಮಾಡಿದರೂ ಹಕ್ಕಿಯೂ ಕೂಡ ಮೊದಲು ಒಂದು ಸ್ಥಲಕ್ಕೆ ಹಾರು ವಾಗ ಅದಕ್ಕೆ ವೇದಲೊಂದು ಸ್ಥಲದ ಆಶ್ರಯವಿಷ್ಟೇ ಇರುವುದೆಂಬುದು ಲೋಕಪ್ರಸಿದ್ಧವಾದ ಸಂಗತಿಯಾ ಗಿದೆ ಇಂತಾಗಿ ಆತ್ಯಾಶ್ರಮಿಶಬ್ದಕ್ಕೆ ಸ್ಥಲದಿಂದ ಸ್ಥಲಾಂ ತರವೆಂದು ಅರ್ಥಮಾಡುವುದೇ ಶಾಸ್ತ್ರಸಂಗತವಾದ ಸಂ ಗತಿಯು. ಒಂದುಮೆಳೆ ಆತ್ಯಾಶ್ರಮಿಶಬ್ದಕ್ಕೆ ಆಶ್ರಮ ಲಂಘನ ಅಥವಾ ಆಶ್ರಮಾಹಿತ್ಯವೆಂದರ್ಥಮಾಡುವ ದಾದರೆ ಭಾಸ್ಕರರನ್ನು ಅವಿಧ್ಯೆವಹಾರಮಾಡಿದಂತಾ ವುದು ಆತ್ಯಾಶ್ರಮಿಶಬ್ದಕ್ಕೆ ಆಶ್ರಮಬದ್ಧವಲ್ಲವೆಂದು ಹೇಳುವವನು ಆಪರಾಧಿಯಿನಿಸುವನು, ಆತನು ಸ್ಪಾಯ ಶ್ಚಿತ್ತಾರ್ಹನು, ಆತನ ಯೋಗ್ಯತೆಯನ್ನು ಯಾವ ಅವ ಸ್ಥೆಯಲ್ಲಿಯೂ ಒಪ್ಪುವುದು ಇತರ ಶಬ್ದದಲ್ಲಿ ಆತ್ಯಾ ಶ್ರಮಿಶಬ್ದಕ್ಕೆ ಕೇವಲ ಜ್ಞಾನಮಾತ್ರವೆಂದು ಅರ್ಥಮಾ ಡಬಹುದಾದರೂ ಅದೂ ಸಮಂಜಸವಾಗಿ ತೋರುವು ದಿಲ್ಲ. ಏಕೆಂದರೆ ಇಂತಹ ಜ್ಞಾನವೆಸ್ತೆಯಲ್ಲಿ..... ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ" ಎಂ ಬುಕ್ತಿಯು ಹೊಂದುವೆಂತಿಲ್ಲ, ಇವೇ ನೊದಲಾದ ಆಧಿ ಪ್ರಾಯಗಳನ್ನು ದಾಹರಿಸಿ ಭಾಸ್ಕರಾಚಾರ್ಯರು ಕರ್ಮ ತ್ಯಾಗವು ಯಾವ ಅವಸ್ಥೆಯಲ್ಲಿಯೂ ಉಚಿತಗಲು ಸಾಧ್ಯವಿಲ್ಲವೆಂತಲೂ, ಯಾವ ಕಾಸ್ಪವೂ ಕರ್ಮತ್ಯಾಗ ವನ್ನು ಪಡೆಸಿಕುವುದಿಲ್ಲವೆಂತಲೂ ಅಪ್ಪಣೆ ಕೊಡಿಸು ವರು ಇದೂ ಅಲ್ಲದೆ ವೇದಾಂತವಾಕ್ಯದಿಂದ ಕೇವಲ ಅರ್ಥಜ್ಞಾನವಾಗುವುದೇ ಹೊರತು ಸಾಂಸಾರಿಕವಾದ ಸಕಲಕರ್ಮವೂ ನಿವಾರಣೆಹೊಂದಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಉಪಾಸನೆ ಅಥವಾ ನಿದಿಧ್ಯಾಸನವನ್ನು ಅನುಷ್ಠಾನಮಾಡುವುದಿಲ್ಲವೋ ಅಲ್ಲಿಯವರೆಗೆ ಕ್ಲೇಶವು ಜವು ಕೂಡ ದಗ್ಧವಾಗಲಾರದು. ವಿದ್ಯೆ ಅಥವಾ ಜ್ಞಾನವೆಂಬುವುದು ಅಪವರ್ಗ (ಮೋಕ್ಷ) ಪ್ರಾಪ್ತಿಗೆ ಉಭಯಕ್ಕವಾದ ಸಾಧನೆಯು, ಇದರಲ್ಲಾವ ಸಂದೇ ಹವೂ ಇಲ್ಲ ಆದರೆ ಭಾಸ್ಕರರು ವಿದ್ಯೆಗೆ ಹೆಚ್ಚು ಪಲಕ್ಕೂ ಶ್ರೀ ಶಂಕರರು ಹೇಳುವ ಫಲಕ್ಕೂ ವಿಲಕ್ಷ ಣತೆ ತೋರುವುದು, ಏಕೆಂದರೆ ಭಾಸ್ಕರರ ಅಭಿಪ್ರಾಯ ದಂತೆ ಭೇದಜ್ಞಾನರೂಪವಾದ ಅವಿದ್ಯೆಯ ನಿವೃತ್ತಿ ಯಾದಮೇಲೆಯೂ ವಿದ್ಯೆಯು ಮುಕ್ತಿಗೆ ಸಾಧವೆಂಗ ಳಾರದೆಂದು ಗೊತ್ತಾಗುವುದು. ವಾಕ್ಯಾರ್ಥಜ್ಞಾನದಿಂದ ಸಮಸ್ತ ದ್ವೈತಜ್ಞಾನವು ನಿವೃತ್ತವಾಗುವೆದಿಲ್ಲ ಎಲ್ಲಿ ಯವರೆಗೆ ಶರೀರದ ಸಂಬಂಧವಿರುವುದೋ ಅಲ್ಲಿಯವ ರೆಗೆ ಶರೀರ, ಇಂದ್ರಿಯ, ಮನಸ್ಸು ನೊದಲಾದವುಗ ಳಿಂದ ರೂಪ ರಸಾದಿಗಳ ಜ್ಞಾನವು ಅವಶ್ಯವಾಗಿ ಉಂ ಟಾಗುವುದು, ಆದರೆ ದೇಹಪಾತಾನಂತರದಲ್ಲಿ ಮಾತ್ರ ಭೇದಜ್ಞಾನವು ಪೂರ್ಣರೂಪವಾಗಿ ನಿವೃತ್ತವಾಗುವುದು, ಮತ್ತು ಸರ್ವಜ್ಞತ್ವ ಮೊದಲಾದ ಪರಮೇಶ್ವರನ ಧರ್ಮ ಗಳ ಉತ್ಪತ್ತಿಯೂ ಆಗುವುದು ಆ ಸಮಯದಲ್ಲಿ ಲೌಕಿಕ ಮತ್ತು ಆಲೌಕಿಕಉಪಕರಣಗಳಾವ ವೂ ಇಲ್ಲದ ಕರ್ಮ ಗಳೂ ನಿವೃತ್ತವಾಗುವವು. ಆದುದರಿಂದ ಎಲ್ಲಿಯವರೆಗೆ "ನನ್ನ ಶರೀರ" ಇಂತೆಂಬ ವ್ಯವಹಾರವು ಇರುವುದೋ ಅಲ್ಲಿಯವರೆಗೆ ಆಶ್ರಮೋಚಿತಗಳಾದ ಕರ್ಮಗಳನ್ನು ಆವರಿಸಲೇಬೇಕಾಗುವುದು ಕರ್ತೃತ್ವ-ಭೋಕ್ತೃತ್ವ ನೊದಲಾದವುಗಳು ಔಪಾಧಿಕಗಳಾಗಿರುವುವು, ಎಲ್ಲಿಯ ವರೆಗೆ ಉಪಾಧಿ ವಿಶಿಷ್ಟವಾದ ಶರೀರವಿರುವುದೋ ಅಲ್ಲಿ ಯವರೆಗೆ ಭೋಕ್ತೃತ್ವಾದಿಗಳಿವೆ ಅವಾಯ (ಸಾಪೆ) ಇಲ್ಲ. ಅದರೆ ವ್ಯತ್ಯಾಸವಿಷ್ಟು—ಜ್ಞಾನಿಗೆ ಸ್ವಕರ್ತೃತ್ವಾದಿ ಗಳಲ್ಲಿ ಅಭಿಮಾನವಿರುವುದಿಲ್ಲ, ಅಜ್ಞಾನಿಗೆ ಮಾತ್ರ ಇವುಗಳ ವಿಷಯದಲ್ಲಿ ಅಭಿಮಾನವಿರುವುದು ಸ್ವಾಭಾವಿ ಕವಾಗಿದೆ. ಭಾಸ್ಕರರ ಅಭಿಪ್ರಾಯಾನುಸಾರವಾಗಿ ಜೀವಿತಾವಸ್ಥೆಯಲ್ಲಿ ಮುಕ್ತಿಯುಂಟಾಗಲು ಸಾಧ್ಯವೇ ಇಲ್ಲ ಆದರೆ ಜೀವಿತಾವಸ್ಥೆಯಲ್ಲಿ ರಾಗದ್ವೇಷಾದಿಗಳು ಮಾತ್ರ ನಿರ್ಮೂಲನವಾಗಬಲ್ಲವು, ಇಷ್ಟೇ ವಿಶಾ ಅತ್ಯಂ ತಿಕ ಮುಕ್ತಿಯಾಗಲಿ ಅಥವಾ ಬ್ರಹ್ಮಭಾವಪತ್ತಿಯಾ ಗಲಿ ಉಂಟಾಗುವುದಿಲ್ಲ, ಆದುದರಿಂದ ಈ ಮುಕ್ತಿಗಾಗಿ ಜ್ಞಾನ-ಕರ್ಮಗಳೆರೆಡೂ ಅತ್ಯಾವಶ್ಯಕವಾಗಿ ಬೇಕಾಗು ವವು ಜ್ಞಾನದಿಂದ ಅವಿದ್ಯೆಯು ನಿವೃತ್ತಿಯಾಗುವುದು, ಆದರೆ ಭೇದಜ್ಞಾನವು ಮಾತ್ರ ನಿವೃತ್ತವಾಗಲಾರದು. ಸ್ಪಾರಬ್ಧಕರ್ಮವಂತೂ ಅವಶ್ಯವಾಗಿ ಉಳಿದುಕೊಂಡೇ ಇರುವುದು ವರ್ತಮಾನ ಜನ್ಮದಲ್ಲಿ ಜ್ಞಾನೋದಯ ವಾಗುವಾದರೆ ಅದರಿಂದ ಸಂಚಿತಕರ್ಮವೆಲ್ಲ ನಿವೃತ್ತ ವಾಗುಬುದು, ಆದರೆ ಜ್ಞಾನಕಕ್ಕಿಂತಲೂ ಪ್ರಾರಬ್ಧಕರ್ಮವು ನಿವೃತ್ತವಾಗಲು ಮಾತ್ರ ಬಲವಂತಲ್ಲವು ಈ ವಿಷಯ ದಲ್ಲಿ ಪ್ರಮಾಣವಾರದೂ— "ಅಗ್ನೀ ಅಭ್ಯಪಟಲೀ ನ ದಹತಿ, ಇಂಧನಂತು ದಹತಿ—ಕೋತ್ಸ ಪರ್ಯಾಯಯ ಜ್ಞೇತ, ವಿಚಿತ್ರಾ ಹಿ ಶಕ್ತಯೋ ಭಾವನಾಂ" ಪ್ರಾರ ಬ್ಧದ ನಾಶವಾಗದೆ ಇರುವುದರಿಂದ ವಿದ್ಯಾವಸ್ಥೆಯ ಕಾಲದಲ್ಲಿ ಜೀವದ ಕರ್ತೃತ್ವ ಮತ್ತು ಭೋಕ್ತೃತ್ವಗಳು ಅನುವರ್ತಿಸತ್ಕಲ್ಪವುಗೇ ಆಗುವವು ಆದುದರಿಂದ ಕರ್ಮಸಹಿತವಾದ ವಿದ್ಯೆ (ಜ್ಞಾನ) ಯು ಮುಕ್ತಿಗೆ ಸಾಧನವಾಗುವುದೇ ಹೊರತು ಕೇವಲ ವಿದ್ಯೆಯು ಆಗು ವುದಿಲ್ಲ ಈ ವಿಷಯದಲ್ಲಿ ಪ್ರಮಾಣವೂ ಕೂಡ ಉಂಟು—ಸಮುಚ್ಚಿತಾಭ್ಯಾಮೇವ ಜ್ಞಾನಕರ್ಮಭ್ಯಾ ಮವಿದ್ಯಾ ನಿವೃತ್ತಿರ್ದ್ವಾರೇಣ ಅಪವರ್ಗಾವ್ಯಭ್ಯುಪೇ ಕಾಕ್ಷತ್ವಕರೇಣ.

ಭಾಸ್ಕರಾಚಾರ್ಯರು ಹೇಳುವ ಇನ್ನೊಂದು ಅನಂತ ವಿಷಯಗಳು ಬಹಳ ಮಹತ್ವಪೂರ್ಣವಾಗಿವೆ–ಶ್ರವಣ ಮಹತ್ತಿಗಳನ್ನು ಪುನಃ ಪುನಃ ಅಭ್ಯಾಸ ಮಾಡುವುದರಿಂದ 'ತತ್' ಮತ್ತು 'ತ್ವಂ' ಪದಾರ್ಥದ ವೈಶಿಷ್ಟ್ಯ ಯುಂಟಾಗಿ ಅತ್ಯಪದರೂಪದ ಜ್ಞಾನಪ್ರದವುಂಟಾಯಿತು, ಅದರೂ ಇದಿಲ್ಲರಿಗೂ ಅವುದಿನಲ್ಲಿ ಯಾವಾಗ ಹೃದಯ ದಲ್ಲಿ ಸಂಸ್ಕಾರವು ಸುಸಮರ್ಥವಾಗಿಲ್ಲದೆಯೋ ಆಕಸ್ಮಿಗೆ ಬ್ರಹ್ಮಾತ್ಮಭಾವದ ಅನುಭವವು ಉಂಟಾಗುವುದಿಲ್ಲ. ಎಲ್ಲಿಯ ವರೆಗೆ ಅವಿದ್ಯೆಯಿರುವುದೋ ಅಲ್ಲಿಯ ವರೆಗೆ ಕರ್ಮವಿದ್ದೇ ತೀರಲೆಬೇಕಾಗುವುದು. ಈ ಅವಿದ್ಯೆಯು ನಿವೃತ್ತಿಯಾದ ಮೇಲೆ ಮತ್ತು ಬ್ರಹ್ಮಭಾವದ ಉತ್ಪತ್ತಿಯಾದ ಮೇಲೆ ಮಾತ್ರ ಕರ್ಮವು ನಿಶ್ಚೇಷವಾಗುವುದು ಬ್ರಹ್ಮಸಾಕ್ಷಾತ್ಕಾರಕ್ಕಾಗಿ ಬೇಕಾಗುವ ಜ್ಞಾನ ಲಾಭವ ತ್ರವಣ-ಮನನಗಳನ್ನು ಒಮ್ಮೆ ಮಾತ್ರ ಆಚರಿಸಿದರೆ ಉಂಟಾಗುವುದೆಂದು ಹೇಳಲು ಸಾಧ್ಯವೇ ಇಲ್ಲ ಇವರ ಅಭಿಪ್ರಾಯಾನುಸಾರವಾಗಿ ಪ್ರಪಂಚವು ಪರಮಾತ್ಮನ ಅಪಾತ್ಮವಿಕಾಸವಾಗಿದೆ. ಅಳ್ಳೆದಲ್ಲಿಯೂ ಸತ್ಯವಾಗಿರುವಂತೆ ಭೇದಜೀವವೂ ಸತ್ಯವಾಗಿರುವುದು ಈ ಭೇದದ ಅಶ್ರಯವನ್ನು ಮಾಡಿಯೇ ಎಲ್ಲಾ ವೈದಿಕ ಹಾಗೂ ಲೌಕಿಯಬೇಕಾಗಿದೆ ಜೀವಾತ್ಮ ಪರಮಾತ್ಮರಲ್ಲಿ ಸ್ವಾಭಾವಿಕವಾಗಿಯೇ ಅಭೇದವಿರುವುದು ಅದರೆ ಉಪಾಧಿಕೃತ ಭೇದವು ಬಂದೊದಗುವುದು. ಉಪಾಧಿಯು ನಿವೃತ್ತವಾದ ಮೇಲೆ ಪರಮಾತ್ಮನಲ್ಲಿ ಜೀವವು ಅಭೇದವಾಗಿ ಬೆರೆಯುವುದು. ಇದೇ ಮುಕ್ತಾವಸ್ಥೆಯು

ಜಗದಿರಿಶಮು ಮಾನವನ ಹಿತಕ್ಕಾಗಿ, ಗೋದಿ, ಕಡಲಿ, ಅಕ್ಕಿ ಮುಂತಾದ ಧಾನ್ಯಗಳನ್ನೂ ಮಾವು ತೆಂಗು ಹಲಸು ಮೊದಲಾದ ಫಲಗಳನ್ನೂ ಇನ್ನೂ ಹಾನಾನವಿಧವಾದ ಭಕ್ಷ್ಯಹಿತಾರ್ಥಗಳನ್ನೂ ನಿರ್ಮಿಸಿದ್ದಾನೆ ಇವೆಲ್ಲವನ್ನೂ ಮನುಷ್ಯನು ಸವಯಕ್ಕೆ ಅನುಸರಿಸಿ ಮಿತವಾಗಿ ಸೇವಿಸುವವರಿಂದ ಪರಿಪುಷ್ಟದೇಹಿಯೂ ಶುಖವುಳ್ಳವನೂ ಆಗುವನು ಮತ್ತು ಗಂಧಕ, ಅಭ್ರಕ, ಪಾಷಾಣ, ಉನ್ನತ್ತಬೀಜ, ವತ್ಸನಾಭಿ, ಅಫೀಮು ಮೊದಲಾದ ವಿಷಹಿತಾರ್ಥಗಳನ್ನು ಸಹ ಮಿತವಾಗಿ ಸೇವಿಸುವದರಿಂದ ಮನುಷ್ಯನು ಅರೋಗ್ಯವನ್ನು ಪಡೆಯುವನು ಯಾವುದಾದರೂ ಅತಿಯಾಗಿ ಸೇರಿಸುವದರಿಂದ ಅನರ್ಥವನ್ನುಂಟುಮಾಡದೆ ಇರಲಾರದು ಅದಕ್ಕಾಗಿಯೇ ನೀತಿಕಾರರು "ಅತಿ ಸರ್ವತ್ರ ವರ್ಜಯೇತ್" ಎಂಬ ಸದ್ವಾಕ್ಯದಿಂದ ಕುಮಾರ್ಗಗಾಮಿಗಳನ್ನು ಎಚ್ಚರಿಸುತ್ತಲಿದ್ದಾರೆ. ಕೆಲವು ಕಾಲದ ಹಿಂದೆ ಪಾಶ್ಚಾತ್ಯದೇಶಗಳಲ್ಲಿ ಜಹಾ ಎಂಬ ಎಲೆಯು ಉದಯಿಸಿ ಹಿಂದುಸ್ಥಾನಕ್ಕೆ ಹೊರಟುಬಂತು ಇದನ್ನು ಕೆಲವು ನಮೀಕ ಸುಧಾಕರರು ಸ್ವಾಗತಮಾಡಿ ಇದರ ಸೇವನೆಯಲ್ಲಿ ಕಂಕಣಬದ್ಧರಾಗಿ, ನಂತರು ಈ ಚಹಾ ದೇವಿಯ ಸೇವನೆಯಿಂದ ಹಲ್ಕೆಟ್ಟಕೆಲೆ ಕೆಮ್ಮು ಜ್ವರ ಮೊದಲಾದ ರೋಗಗಳು ನಾಶವಾಗುವವೆಂದು ಕೆಲವು ಡಾಕ್ಟರರು ತಲೆದೂಗಿದರು ಸಮಯ ವರಿತು ಮಿತವಾಗಿ ಸೇವಿಸುವದರಿಂದ ವಿಷವೂ ಸಹ ಗುಣಕಾರಿಯಾಗುವದೆಂದು ನೊದಲೇ ಹೇಳಿದ್ದಾಗಿದೆ. ಬಿರುಗಾಳಿಯು ಸರ್ವತಗರಣ್ಣೂ ಎತ್ತರವಾದ ಪ್ರದೇಶ ಗಳನ್ನೂ ತನ್ನ ಹೊಡತದಿಂದ ಕ್ಷಯವಾಗಿ, ನಾಶಗೊಳಿಸುವಂತೆ, ಈ ಚಹಾ ಎಂಬ ಬಿರುಗಾಳಿಯು ಭರದಿಂದ ಬೀಸುತ್ತ ದೇಶದ ಐಶ್ವರ್ಯವನ್ನೂ ಜನರ ಬಲವನ್ನೂ ಧರ್ಮದ ವಿಳಿಗೆಯನ್ನೂ ಹಾಳುಮಾಡುತ್ತಲಿರುವ ಸಂಗತಿಯು ಸಜ್ಜನರ ಮನಸ್ಸಿಗೆ ಕಲ್ಯಪ್ರಾಯವಾಗಿದೆ

ಚಹಾದಲ್ಲಿರುವ ಅಲ್ಪಗುಣಾಗಳು

ಈ ಚಹಾ ಸೊಪ್ಪಿನಿಂದ ತಲೆನೋವು, ಹೊಟ್ಟೆ ಶೂಲೆ, ಕೆಮ್ಮು, ಜ್ವರ ಮೊದಲಾದ ರೋಗಗಳು ಹಾಸಿ ಹೊಂದಿವೆಂದು ಕೆಲವರು ಹೇಳುವರು ಇದು ಕೇವಲ ಮನುಷ್ಯನ ಭ್ರಮೆಯೆಂದೆ ಹೇಳಬೇಕಾಗಿದೆ ಶಠೆ, ಸಿಂದಿ, ಗಾಂಜಾ ಮೊದಲಾದ ಉನ್ಮಾದಕಾರಿಯಕ ಪದಾರ್ಥಗಳನ್ನು ಸೇವಿಸುವದರಿಂದ ನ್ಪಣಕಾಲ ಆಂದರೆ ನಿತೆ ಇರುವ ವರೆಗೂ ಮಪ್ರಸ್ಸನ ಪ್ರವಾಹವು ವೇಗವುಳ್ಳದ್ದೂ ಬಲವುಳ್ಳದ್ದೂ ಇದ್ದು ನಿತೆ ತೀರಿದನಂತರ ಮೊದಲಿನ ಬೀನಿಯು ಪುನಃ ಹೆಚ್ಚಾಗುತ್ತದೆ ಆದರಂತೆಯೇ ಚಹಾಸೊಪ್ಪಿ ಪೆಲ್ಲಿಯಾದರೂ ಉನ್ಮಾದಪಾಯಕ ಪದಾರ್ಥಗಳು ಮಿಶ್ರವಾಗಿರುತ್ತವೆ ಇದನ್ನು ವಾನಮಾಡಿದ ಅಲ್ಪಕಾಲದಲ್ಲಿ ಮನಸ್ಸಿಗೆ ಆನಂದವು ತೋರಿ ತಲೆನೋವು ಹೊಟ್ಟೆಶೂಲೆ ಮೊದಲಾದ ರೋಗಗಳ ಶಕ್ತಿಯು ಅಲ್ಪವಾದಂತೆ ಕಂಡು ಬರುತ್ತದೆ ತಾನು ಸೇವಿಸಿದ ಚಹಾದ ಶಕ್ತಿಯು ಕಡಿಮೆ ಆದ ಅದ ಹಾಗೆಲ್ಲ ರೋಗಗಳು ಪುನಃ ಪ್ರಬಲಗಳಾಗುತ್ತ ಹೋಗುವವು ಆ ಕಾಲದಲ್ಲಿ ಮನುಷ್ಯನು ಪುನಃ ಚಹಾ ಪಾನಮಾಡದಿದ್ದರೆ ತನಗೆ ಆನಂದವು ಸಿಗದೆ, ಕೆರೆ ಭಾವಿಗಳ ಪಾಲಾಗಬೇಕೆಂಬ ಆಲೋಚನೆಯುಂಟಾಗುವದು ಇದನ್ನು ಎಂದಾ ಮುಟ್ಟದೆ ಇದ್ದ ಮಾನವನೇ ಪುಣ್ಯವಂತನಲಿಯು. ಒಂದಾ ವರ್ಷ ಇದರ ರುಚಿಯನ್ನು ನಾಲಿಗೆಗೆ ಮುಟ್ಟಿಸಿದರೆ ಸಾಕು ಈ ಚಹಾ ಎಂಬ ಭೂತವು ಮನುಷ್ಯನನ್ನು ಜನರಲ್ಲಿ ಹಜಾ ಹುಜಾ ಮಾಡದೆ ಬಿಡಜಾರದು ಚಹಾವ ಭಕ್ತರೇ! ಇತ್ತಕಡೆಗೆ ದಯಮಿಟ್ಟು ಚಿತ್ತಾಗಿ ಲಕ್ಷ್ಯಗೊಡಿರಿ.

ಪರದೇಶದವರ ಚಹಾಪಾನಕ್ಕೂ ನಮ್ಮ ದೇಶದವರ ಚಹಾಪಾನಕ್ಕೂ ಭೂಮ್ಯಾಕಾಶದಷ್ಟು ಅಂತರವಿದೆ

ಇಂಗ್ಲಂಡ್, ಜರ್ಮನ್, ಅಮೆರಿಕಾ ಮೊದಲಾದ ದೇಶಗಳ ಹವೆಯು ಅತಿ ತೀಕ್ಷರವಾಗಿರುತ್ತದೆ ಅಂಥ ದೇಶವಾಸಿಗಳು ಈ ಚಹಾ ಸೊಪ್ಪನ್ನು ಉಪಯೋಗಿಸುವದರಿಂದ ತೀಕ್ಷ ಹವೆಯು ಬಾಧಿಸುವದಿಲ್ಲ ಇದರಲ್ಲಿ ಸ್ವಾಭಾವಿಕವಾಗಿ ಉಷ್ಣ ತೆಯನ್ನುಂಟುಮಾಡುವ ಗುಣ ವಿರುತ್ತದೆ ಆದರೂ ಪರದೇಶೀಯರು. ಇವನ್ನು ಮಿತವಾಗಿ ಸೇವಿಸುವರು ಮತ್ತು ಅಲ್ಪಯು ಮಾಂಸ ಬ್ರೆಡ್ ಬೆಣ್ಣೆ ಮೊದಲಾದ ಪೌಷ್ಟಿಕವಾದ ಆಹಾರ ವನ್ನೇ ಸೇವಿಸುವರು ಬಾಲಕರೂ ತರುಣರೂ ವೃದ್ಧರೂ ವ್ಯಾಯಾಮ ಮಾಡುತ್ತ ದೇಹದ ಶಾಂತಿಯನ್ನು ಕಾಪಾಡಿಕೊಳ್ಳುತ್ತ ಹೋಗುವರು ನಮ್ಮ ದೇಶದ ಹವೆಯು ಕೆಲವು ಕಡೆಗಳಲ್ಲಿ ಸ್ವಲ್ಪ ತೀಕ್ಷ ಕೆಲವು ಕಡೆಯಲ್ಲಿ ಸ್ವಲ್ಪ ಉಷ್ಣವಿರುತ್ತದೆ ಇಂಥ ಸ್ಥಿತಿಯಲ್ಲಿ ಅತಿ ಉಷ್ಣಕಾರಿಣಿ ಜಹಾ ಸೊಪ್ಪನ್ನು ವಿಶೇಷವಾಗಿ ಉಪಯೋಗಿಸುವದರಿಂದ ಮನುಷ್ಯನ ದೀರ್ಘರೋಗಿಯಾಗಿ, ಯಮನ ಬಾಯಿಗೆ ಹುತ್ತಾಗುತ್ತಾನೆ ೯ ನಮ್ಮ ದೇಶದವರು ಜೋಳ, ಅಕ್ಕಿ ಮೊದಲಾದ ಆಲ ಬಲಕಾರಿಯಾದ ಆಹಾರವನ್ನು ಉಪಯೋಗಿಸುವರು. ಇನ್ನು ಕೆಲವರು ನುಚ್ಚು, (ಅಂಬಲಿ) ಮಜ್ಜಿಗೆ ಉಳಿಗದ್ದೆ ಮೆಣಸಿನಿಕಾಯಿ ಹಿಂಡಿ ಪುಂಡಿಪಲ್ಯ ಮೊದಲಾದ ಫಲ

[೬ನೆಯ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ವೈಕಾಖ ಶು|| ಪಂಚಮಿಗೆ ಹನ್ನೊಂದು ವರ್ಷಗಳು ತುಂಬಿ ೧೨ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ ಪಿ ಮಾಡಬೇಕಾಗುತ್ತದೆ ವಿ ಪಿ ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರಲ್ಲರೂ ಕೂಡಲೆ ೨ ರೂ ೮ ಆಣೆಗಳನ್ನು ಮನಿಯಾರ್ಡರ್ ದ್ವಾರ ಕಳುಹಿಸಬೇಕು ವಿ ಪಿ ಮಾಡಿದರೆ ೨ ರೂ ೧೩ ಆಣೆ ಬೀಳುವುದು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಲಭಮಾನ್ಯರಿಗಾಗಿ ಚಂದಾದಾರರ ಹೆಸರನ್ನೆಲ್ಲ ಒಟ್ಟುಗೂಡಿಸಿ ಒಂದೇಸಾರಿ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತಕಾರಿಯಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿ ರುವ ನಂಬರನ್ನು ಪತ್ರಾ ದಯೆಯಿಟ್ಟು ಮರೆಯದೆ ತಿಳಿಸಿಬೇಕು ನಂಬರು ತಿಳಿಸದಿದ್ದರೆ ತೊಂದರೆಯಾಗುವುದು

ಸಂ—

12-6-61

ಪಂಚಾಚಾರ್ಯಪ್ರಭಾ.

೧೯೩೮ ನೆಯ ಮೇ ತಾ|| ೩೦ ನೇ ಸೋಮವಾರ

ಶ್ರೀಜಗದ್ಗುರು ಪಂಚಾಚಾರ್ಯರ (೨೨) ಗುರುತ್ವ.

ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ವೀರಶೈವಮತದಲ್ಲಿ ಜನ್ಮನೆತ್ತಿ ಬ್ರಾಹ್ಮಣಾದಿ ಸಕಲ ವರ್ಣಿಯರಿಗೂ ಬ್ರಹ್ಮಚರ್ಯಾದಿ ಸಕಲಾಶ್ರಮಿಗಳಿಗೂ ಶ್ರೀಪಂಚಾಚಾರ್ಯರೇ ಗುರುಗಳಾಗಿದ್ದಾರೆ ವೀರಶೈವಮತೀಯರಲ್ಲಿ ಸಡೆಯಬೇಕಾದ ವಿವಾಹಾದ್ಯಖಿಲ ಶಾಖಕಾರ್ಯಗಳಲ್ಲಿ ಈ ವಯ ಜನ ಆಚಾರ್ಯರ ಕೆಲಸ ಗಳನ್ನು ಆಯಾಯ ಜುತ್ತಿನರ ಮೂಲಕ ವಿಧ್ಯುಕ್ತ ಪ್ರಕಾರ ಸ್ಥಾಪಿಸಿ ಕಲಶಗಳಲ್ಲಿರುವ ಮಂತ್ರೋದಕವನ್ನೂ ಆಯಾಯ ಜುತ್ತಿನಲ್ಲಿ ಸಂಪ್ರೋಕ್ಷಿಸುತ್ತ ಬಂದಿರುವು ದೊಂದು ಪಂಚಾಚಾರ್ಯರಲ್ಲಿ ನೆಲೆಯಾಗಿರುವ ಅನಿತರ ಸಾಧಾರಣವಾದ ಗುರುತ್ವದ ಗುರುತಾಗಿದೆ ಶಿವಾಗಮ ಗಳಂತೂ ಈ ಅಭಿಪ್ರಾಯವನ್ನು ವಿಶೇಷವಾಗಿ ಉದ್ಘೋಷಿಸುತ್ತಿರುವವು ಕಂಠದಲ್ಲಿ ಶಿವಲಿಂಗಧಾರಣವಿಲ್ಲದ ವನು ವೀರಶೈವನೆನಿಸುವುದಿಲ್ಲ ವೀರಶೈವನಷತದ ಬ್ರಹ್ಮಚಾರಿಯಾಗಿಲಿ, ಗೃಹಸ್ಥನಾಗಿಲಿ, ವಾನಪ್ರಸ್ಥನಾಗಿಲಿ, ಸನ್ಯಾಸಿಯಾಗಿಲಿ ಎಲ್ಲರೂ ತಮ್ಮ ತಮ್ಮ ಕಂಠದಲ್ಲಿ ಧರಿಸಿದ ಶಿವಲಿಂಗವನ್ನು ಪೂಜಿಸುವ ಮೂಲಕ ತೀರ್ಥ ಪ್ರಸಾದಗಳನ್ನು ಗ್ರಹಿಸಲೇಬೇಕೆಂದು ಶಾಸ್ತ್ರವು ಶಾಸನ ಮಾಡುತ್ತಿರುವುದು ಇಂಥ ಶಿವಲಿಂಗವನ್ನೆ ಪತಿಯನ್ನಾ ಗಿಯೂ, ತನ್ನನ್ನು ಸತಿಯನ್ನಾಗಿಯೂ ಬಾವಿಸುವು ದೊಂದು ವೀರಶೈವಮತದ ಮೂಲಧರ್ಮವಾಗಿದೆ ಶಿವ ಲಿಂಗವನ್ನು ಶಿವದೀಕ್ಷೆಯಿಲ್ಲದವನೆಂದೂ ಪಡೆಯಲಾರನು

ಆದಿ ನೈತ್ಯ ಯೋ ಏಕ್ಸ್ಯ ಚಕಾರೇಷಧರೋಪಿ ಚಾ |
ಸಂಸ್ಕೃತೇಪ್ಯದಿ ವಾ ಲಿಂಗಿ ಶ್ವಾಪಚಾತಿ ಜಾಯತೆ ॥

ಗುರುವಿನಿಂದ ದೀಕ್ಷೆಯನ್ನು ಪಡೆಯದವನು ನಾಲ್ಕುವೇದ ಗಳನ್ನೋದಿದ್ದರೂ ಶಿವಲಿಂಗವನ್ನು ಮುಟ್ಟುವನಕ್ಕೂ ಸಹ ಯೋಗ್ಯನಲ್ಲವೆಂದು ಶಾಸ್ತ್ರವು ಪ್ರತ್ಯಕ್ಷವಾಗಿಯೆನ್ನು ವಿಧಿ ಸುವುದು ಪ್ರಥಮತಃ ಇಂಥ ಲಿಂಗಧಾರಣಸಾಧನವಾದ ಶಿವದೀಕ್ಷೆಯನ್ನು ಮಾಡಿ ಶಿವಲಿಂಗವನ್ನು ಅನುಗ್ರಹಿಸಿ ದಿವ್ಯಮಂತ್ರೋಪದೇಶಮಾಡಿದವರಾರು? ಶ್ರೀಪಂಚಾ ಚಾರ್ಯರೇ ಅಲ್ಲವೆ? ಎಗದ್ಗುರು ಪಂಚಾಚಾರ್ಯರಿಂದ ಈ ಅಧಿಕಾರವು ಉತ್ತರಾಚಾರ್ಯರಿಗೆ ಬಂದಿರುವುದು

ಪಂಚಗೋತ್ರಸಮುದ್ಭೂತಾಃ ಪಂಚಸೂತ್ರಾನುಸಾರಿಣಃ |
ಗುರವಸ್ತಲಸಮ್ಭೂತಾ ಗುರವಸ್ತವಲಿಂಗಿನಾಂ ||

ವೀರ ನಂದಿ ಭೃಂಗಿ ವೃಷಭ ಸ್ಕಂದ ಎಂಬ ಐದು ಗೋತ್ರ ಗಳಲ್ಲಿ ಜನಿಸಿ ಪಂಚಸೂತ್ರಾನುಸಾರಿಗಳಾದ ಗುರುಗಳೇ ಲಿಂಗಧಾರಿಗಳಿಗೆಲ್ಲ ಗುರುಗಳಾಗಿದ್ದಾರೆಂದು ಏವಾಗಮ ಗಳು ಸಾರುತ್ತಿರುವವು ಪಂಚಾರ್ಯರಿಂದ ಪಂಚ ಕಲಶಗಳಲ್ಲಿ ವಿದ್ಯುಕ್ತವಾಗಿ ಆಹ್ವಾನಿಸಿಕೊಂಡು ಆವರ ಸಾಕ್ಷಿಯಾಗಿ ಬ್ರಹ್ಮಶಿರ್ಯಾದಿಚತುರಾಶ್ರಮಗಳನ್ನು ಸ್ವೀಕರಿಸುವದ ಶಾಸ್ತ್ರಸಮ್ಮತಿಯಾಗಿದೆ ವೀರಶೈವ ಸಿದ್ಧಾಂತತೀರ್ಥಯಾಗಿ ಪಂಚಕಲಶಗಳ ದ್ವಾರಾ ಪಂಚಾ ಚಾರ್ಯರನ್ನು ಆಹ್ವಾನಿಸದೆ ಪೂಜಿಸದೆ ನಮಸ್ಕರಿಸದೆ ತೀರ್ಥಪ್ರೋಕ್ಷಣವಿಲ್ಲದ ಬ್ರಹ್ಮಶಿರ್ಯಾಶ್ರಮವನ್ನು ಸ್ವೀಕಾರ ಮಾಡುವವರಾಗಿಲಿ ಗೃಹಸ್ಥಾಶ್ರಮಸ್ವೀಕಾರಸಮಾಧಾನ ಹಾಗಿಲ್ಲ ವಾನಪ್ರಸ್ಥಾಶ್ರಮ ಸ್ವೀಕಾರಮಾಡುವಹಾಗಿಲ್ಲ ಸನ್ಯಾ ಶ್ರಮಸ್ವೀಕಾರಮಾಡುವಹಾಗಿಲ್ಲ ಅಕಾಶವು ಎಲ್ಲ ಪದಾರ್ಥಗಳಲ್ಲಿ ಹೇಗೆ ಅನುಸ್ಯೂತವಾಗಿ ವ್ಯಾಪಿ ಸಿರುವುದೋ ಹಾಗೆಯೆ ಶ್ರೀಪಂಚಾಚಾರ್ಯರ ಗುರು ತ್ವವು ವೀರಶೈವಮತದ ಅಬಿಲ ವರ್ಣಾಶ್ರಮಗಳೊಳಗೆ ವ್ಯಾಪಿಸಿಕೊಂಡಿರ ವುದರಿಂದ ಇದು ನಿಬಿಡಾರ್ಥವೆಂದು ನಿಸ್ಸಂಶಯ ಗುತ್ತದೆ ದೀಕ್ಷಾವಸರದಲ್ಲಿ ಪಂಚಾಚಾರ್ಯರ ಸೂತ್ರನಾಮಪದವಿ— ಬಂದ ಗುರು, ಲಿಂಗ, ಜಂಗಮ, ಪಾದೋದಕ ಪ್ರಸಾದ, ವಿಭೂತಿ ರುದ್ರಾಕ್ಷಿ, ಸಂತ್ಯ ಎಂಬ ಎಂಟು ಆಚರಣೆಗಳು ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಸನ್ಯಾಸ ಎಂಬ ನಾಲು ಆಶ್ರಮ ದವರೆಲ್ಲರೂ ಒಳ್ಳೆ ದುಬುರುತ್ವದ ಯಾವ ಆಶ್ರಯ ಯಾದರೂ ಗುರುವದಿಷ್ಟವಾದ ಪಂಥವನ್ನಾಗಲಿ, ಗುರುದತ್ತ ವಾದ ಶಿವಲಿಂಗವನ್ನಾಗಲಿ ಆ ಶಿವಲಿಂಗದ ಪೂಜೆಯ ಸ್ಥಾನವಾಗಲಿ ಬಿಟ್ಟರುಂಟೆ? ಸರ್ವಸಂಗಪರಿತ್ಯಾಗಿಯಾದ ಅತಿವರ್ಣಾಶ್ರಮಿ (ಲಿಂಗಾರೂಢ) ಯೂ ಕೂಡಾ ದೀಕ್ಷಾವಸರದಲ್ಲಿ ಉಪದೇಶಮಾಡಿದ ಈ ಆಚ್ಚಾನಿಯಮಗಳನ್ನು ಶಿಕ್ಷಾ ಪಂಥಿಲ್ಲ ಹಾಗೆ ವಿಟ್ಟವನು ಆರೂಢಪಥಿತನೆಂದು ಶಿವಾ ಗಮಶಾಸನನಿರುವಾಗ ಇನ್ನು ಆಶ್ರಮಸೋಪಾನಗಳನ್ನ ತಿಸ್ಕರಿಸಿದ ಬ್ರಹ್ಮಚಾರಿ, ಗೃಹಸ್ಥ ವಾನಪ್ರಸ್ಥ, ಯತಿ ಗಳಿಗೆ ಉಂಟೆಂದು ಆರ್ಷಾತ್ಪತ್ಪಪ್ರಮಾಣದಿಂದಲೇ ಸಿದ್ಧ ವಾಗುತ್ತದೆ ಗಂಡನನ್ನು ಕಳೆದುಕೊಂಡ ಹೆಂಗಸಿನಂತೆ ಪಂಚಾಚಾರ್ಯರ ಗುರುತ್ವವನ್ನು ಕಳೆದುಕೊಂಡವ ರಿಗೂ ಕಳೆಸಿಕೊಳ್ಳಬೇಕೆಂಬ ಹವಣಿಕೆಯುಳ್ಳವರಿಗೂ ಅಪಾಪವು ಯಾವಾಗಲೂ ಸಿದ್ಧವಾಗಿರುತ್ತದೆ ಲಿಂಗ ಧಾರಿಗಳಾಗಿದ್ದೂ ಅದರ ಮೂಲವನ್ನು ಒಸರಿಸು ಯಾರು ಪೀರಶೈವಮತಶಾಖಾರ್ಯರಾದ ಪಂಚಾಚಾರ್ಯರ ಮೇಲೆ ಧಾಳಿಯಾಡುವರೋ ಅವರು ತಮ್ಮ ಶೈಥಿಲ್ಯವ ರುವ ನಿತಿತ ಬುದ್ಧಿಯಿಂದ ಶತ್ರುಗಳನ್ನು ಸಂತೂಸುವುದಕ್ಕೆ ಬದಲು ತಮ್ಮ ಶಿರಸ್ಸನ್ನೇ ಕಾವ್ಯ ಕತ್ತರಿಸಿಕೊಳ್ಳುವ ಮೂರ್ಖರಂತೆ ಹಾಸ್ಯಾಸ್ಪದರಾಗುವರಲ್ಲಿ ಸಂಶಯ ವಿಲ್ಲ ಕಸ್ತೂರಿಯ ಗಂಧದಿಂದ ಸುಮಘಮಿಸುತ್ತಿರುವ ಒಂದು ಬಟ್ಟೆಯ ನೋಲಿರುವ ಇತರ ಬಟ್ಟೆಗಳಂತೆ ಪಂಚಾಚಾರ್ಯಕಾಂಶ್ರಾಯಾಯಿಕವಾದ ಬ್ರಹ್ಮಚಾರಿಗೂ, ಗೃಹಸ್ಥನಿಗೂ, ಸನ್ಯಾಸಿಗೂ ಆ ಪಂಚಾಚಾರ್ಯರ ಮಹಾಗುರುತ್ವದ ಸಂಬಂಧದಿಂದ ಯಧಾಸಂಭವವಾಗಿ ಗುರುತ್ವಾಂಶವು ಸಂಭವಿಸುವದು ಪಂಚಾಚಾರ್ಯಸಂಬಂ ದದ ಗಂಧವಿಲ್ಲದ ಬ್ರಹ್ಮಚಾರಿಗಾಗಲಿ, ಗೃಹಸ್ಥನಿಗಾ ಗಲಿ, ವಾನಪ್ರಸ್ಥನಿಗಾಗಲಿ, ಸನ್ಯಾಸಿಗಾಗಲಿ ಗುರುತ್ವ ನೆಂಬುದು ಜನ್ಮಜನ್ಮಾಂತರದಲ್ಲಿಯೂ ಗಗನಕುಸುಮಾ ಯಮಾನವಾಗಿರುವುದು

ಶ್ರೀಮದ್ಭುವರಾಜರವರ ವರ್ಧಂತೀಮಹೋತ್ಸವ

ಕಳೆದ ೨೫ನೆಯ ತಾರೀಖು ಬುಧವಾರದಿವಸ ಮೈಸೂರು ಸಂಸ್ಥಾನಾಧಿಪತಿಗಳಾದ ಶ್ರೀಕೃಷ್ಣರಾಜಸಾರ್ವ ಭೌಮರ ಸಹೋದರರಾದ ಶ್ರೀಮದ್ಭುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ ಸಿ ಐ ಇ ಯವರ ೫೬ನೆಯ ವರ್ಷದ ವರ್ಧಂತೀ ಮಹೋತ್ಸವವು ಈ ವರ್ಷ ಅರಮನೆಯ ಸಜ್ಜೆಯಮೇಲೆ ಅತಿಸ್ಪೃಹದಿಂದ ನಡೆಯಿತು ಪ್ರಾತಕಾಲ ಮಂಗಲಸ್ನಾನಾನಂತರ ಕುಲಗುರುಗಳಾದ ಶ್ರೀಪರಕಾಲಸ್ವಾಮಿಗಳವರು ರಾಜಮಯೂರಾಯುತರಾಗಿ ಅರಮನೆಗೆ ಆಗಮಿಸಿ ಶ್ರೀಮದ್ಭವರಾಜರಿಂದ ಭ್ರಕ್ಷ್ಯಪೂರ್ವಕ ಸಮರ್ಪಿಸಲ್ಪಟ್ಟ ಅರ್ಘ್ಯಾದ್ಯಾದ್ಯತಿಥಿಸತ್ಕಾರವನ್ನು ಸ್ವೀಕರಿಸಿ, ಆತೀರ್ವದಿಸಿದ ಮೇಲೆ ಯುವರಾಜರವರು ದಿವ್ಯಾಂಬರ ಗಳಿಂದ ಭೂಷಿತರಾಗಿ ಶ್ರೀಮನ್ಮಹಾರಾಜರವರ ಮತ್ತು ಶ್ರೀಜಯಚಾಮರಾಜೇಂದ್ರ ಒಡೆಯರವರೊಡಗೂಡಿ ಸಜ್ಜೆಗೆ ಬಜಯಂಸ್ಸಿ ಸುವರ್ಣಮಯ ಛತ್ರಚಿಕೆಗ ಳನ್ನಲಂಕರಿಸಲಾಗಿ ಆಯುರ್ವೃದ್ಧಿ ಸೂಚಿಕವಾದ ೫೧ ಗುಂಡುಗಳು ಹಾರಿಸಲ್ಪಟ್ಟವು ಚಿರಕಾಲ ಸಂಸ್ಥಾನದ ನೂತನ ಬಂಧುಪರಿವಾರವೂ ಅರಸುಮಂಡಲಿಯೂ ಒಂ ದು ಪಾರ್ಶ್ವದಲ್ಲಿ ಕೋಛಸುತ್ತಲಿತ್ತು ಚತುರಂಗ ಸೈನ್ಯ ವು ೧೫ನುದ್ರಾಂಕಿತವಾಗಿ ಮುಜರೆಗಳನ್ನೆಸ್ಕಿಸ್ಪಿತು. ಆಸ್ಥಾನ ಪಂಡಿತೋತ್ತಮರು ಫಲಮಂತ್ರಾಕ್ಷತೆಗಳನ್ನೊ ಪ್ಪಿಸಿದ ಬಳಿಕ ರಾಜಬಂಧುಗಳೂ ಅಧಿಕಾರಿಗಳೂ ಪಟ್ಟಿ ಣದ ಮಹಾಜನಗಳೂ ನಜರು ಮುಜರೆಗಳನ್ನು ಮಾಡು ವುದರೊಳಗಾಗಿ ಹನ್ನೆರಡು ಘಂಟೆಯಾಯಿತು ವಾದ್ಯ ದ್ವನಿಯು ದಿಙ್ಮಂಡಲವನ್ನು ವ್ಯಾಪಿಸುತ್ತಿರಲು ತಾಂಬೂ ಲಪ್ರಪ್ಪವಿಸರ್ಗೋತ್ಪಾದಕ ದರ್ಬಾರಿನ ಕಾರ್ಯಗಳು ಸಮಾಪ್ತಿಗೊಂಡವು. ಶ್ರೀಮದ್ಭವರಾಜರವರು ಪ್ರಾಯ ಏ೫ ಹತ್ತಾರು ವರ್ಷಗಳಿಂದ ಈ ಶುಭಸಮಯದಲ್ಲಿ ವಿದೇಶಗಳಲ್ಲಿ ವಾಸಮಾಡುತ್ತಿದ್ದುದರಿಂದ ಇಮ್ಮನರೆಗೆ ಇಂಥ ಶುಭಸನ್ನಿವೇಶವು ಪ್ರಜೆಗಳಿಗೆ ತಪ್ಪಿಹೋಗಿದ್ದಿತು ಈ ಸಾರಿ ರಾಜಕುಮಾರರ ವಿವಾಹವು ನಡೆದ ಸ್ವಲ್ಪವಿ ಪಸಗಳಲ್ಲಿಯೇ ಲಭಿಸಿದ ಈ ಜನ್ಮದಿನೋತ್ಸವವು ಪ್ರಜೆ ಗಳನ್ನು ಸಂತೋಷ ಸಾಗರದಲ್ಲಿ ಮುಳುಗಿಸಿತು ಯಮ ವಂಶವಿಪಕರಾದ ಶ್ರೀಮನ್ಮಹಾರಾಜ ಸರ್ವರಿಗೂ ದೀರ್ಘಾಯುರಾರೋಗ್ಯಪರಂಪರೆಯ ನ್ನೀಯಲೆಂಬು ಪ್ರಾರ್ಥಿಸುವೆವು

ಒಳದೇಶದ ವೃತ್ತಾಂತಗಳು.

ಬೇಲೂರು ತಾಲೋಕು ಬಸವನಹಳ್ಳಿ ರಂಗೆ ಎಂಬ ವನು ತನ್ನ ಹೆಂಡತಿಯನ್ನು ಕುಲೆನಾಡಿನವಳೆಂಬ ಆಪಾ ದನೆಯಮೇಲೆ ಹಾಸನದ ಸೆಷನ್ಸ್ ಫಸ್ಟ್‌ಕ್ಲಾಸ್ ಮ್ಯಾಜಿ ಸ್ಟ್ರೇಟರು ರಂಗನನ್ನು ಸರ್ಜಸ್‌ವಿಜಾರಣೆಗೆ ಗುರಪಡಿ ಸಿರುತ್ತಾರೆ

ದ್ವೀತೀಯ ಸಚಿವರಾದ ಶ್ರೀ ಎ ಮಾಧವರಾಯ ರವರು ಜೂ ೧ನೆಯ ತಾರೀಖಿನ ದಿವಸ ಶಿವಮೊಗ್ಗಾಕ್ಕೆ ಹೋಗಿ, ಅಲ್ಲಿಂದ ೭ನೆಯ ತಾರೀಖಿಗೆ ಚಿಕ್ಕಮಗಳೂರಿಗೆ ಬಂದು ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸಿ ೨೫ನೆಯ ತಾರೀಖಿನ ದಿವಸ ಬೆಂಗಳೂರಿಗೆ ಬರುವರೆಂದು ತಿಳಿದು ಬರುತ್ತದೆ

ರಾಜಧಾನಿಯ ನಜರಬಾದಿನಲ್ಲಿರುವ ಮಿ|| ಜಾರ್ಜ್ ವಿಯೆಬಲ್ಡ್‌ರವರು ಸರಿಯಾದ ಲೈಸೆನ್ಸಿಲ್ಲದ ಕೋವಿ ಯೊಂದನ್ನಿಟ್ಟುಕೊಂಡಿದ್ದರೆಂಬ ಆಪರಾಧಕ್ಕಾಗಿ ಶಿಕ್ಷೆಗೆ ಗುರಿಯಾಗಿದ್ದರು ಸಿಟಿಮ್ಯಾಜಸ್ಟ್ರೇಟ್ ಮಿ|| ರಾಜಿ ಕೆ ವಿ ರಾಮನಾಥಯ್ಯನವರು ಆಪಾದಿತರು ಆಪರಾಧ ಮಾಡಿಲ್ಲವೆಂದು ತೀರ್ಮಾನಿಸಿ ಬಿಡುಗಡೆ ಮಾಡಿರು ತ್ತಾರೆ

ತುರುಮಕುಂಡ್ಲು ನರಸೀಪುರದ ಪೋಲೀಸರು ಕೃಷ್ಣಾ ಪುರದ ಪುಟ್ಟಮಾದ ಎಂಬವನಮೇಲೆ ಕೊಲೆ ಆಪಾದನೆ ಗಾಗಿ ಸೈಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟ್ ನಲ್ಲಿ ವ್ಯವಹಾರವನ್ನು ಹೂಡಿರುತ್ತಾರೆ ಪುಟ್ಟಮಾದನು ಕರಿಯನೆಂಬವನನ್ನು ಮಚ್ಚಿನಿಂದ ಕಡಿದು ಕೊಂದನೆಂ ಬುದೇ ಆಪಾದನೆ ಇವರಿಗೆ ಸ್ಪೀನಂಬಂಧವಾದ ಮನ ಸ್ತಾಸನಿದ್ದಿತಂತೆ!

ರಾಜಪುತ್ರ ಶ್ರೀಜಯಚಾಮರಾಜೇಂದ್ರ ಒಡೆಯ ರವರ ವಿವಾಹಮಹೋತ್ಸವಕ್ಕಾಗಿ ರಾಜಧಾನಿಗೆ ದಯ ಮಾಡಿದ್ದ ಬಿಕಾನೇರ್ ಸಂಸ್ಥಾನದ ಮಹಾರಾಜರು ಕಳೆದ ಮಂಗಳವಾರ ಬಿಕಾನೇರಿಗೆ ಪ್ರಯಾಣ ಮಾಡಿ ರುರು ಅವರ ಗೌರವಾರ್ಥವಾಗಿ 19 ತೋಪುಗಳು ಹಾ ರಿಸಲ್ಪಟ್ಟವು ಹೈದರಾಬಾದಿನ ರಾಜಪ್ರತಿನಿಧಿರೂ, ಪರಸ್ಥಳ ಗಳಿಂದ ಬಂದಿದ್ದ ಇತರ ದೇಶೀಯ ಮತ್ತು ಯೂರೋ ಪಿಯರ್ ಅತಿಥಿಗಳೂ ಕಳೆದ ವಾರ ರಾಜಧಾನಿಯಿಂದ ಪ್ರಯಾಣ ಮಾಡಿದರು.

ಶ್ರವಣಬೆಳಗೊಳದಲ್ಲಿರುವ ಶ್ರೀಗೋಮಟೇಶ್ವರನ ತಿಲಾವಗ್ರಹವು ನಾಶವಾಗುವ ಸ್ಥಿತಿಯಲ್ಲಿರುವದೆಂದು ಪತ್ರಿಮ ದೇಶದಲ್ಲೆಲ್ಲಾ ಸುದ್ದಿ ಹಬ್ಬಿದ್ದೆರಿಂದ, ಆ ಸಂಶಯವನ್ನು ನಿವಾರಿಸಲು ಮೈಸೂರು ಸರ್ಕಾರದ ಪ್ರಕಟನ ಶಾಖಾಧಿಕಾರಿಗಳು, ಆ ರೀತಿ ಗಾಬರಿಪಡಲು ಕಾರಣವಿಲ್ಲವೆಂದೂ, ತಿಲಾಪ್ರತಿಮೆಯು ಸರಿಯಾದ ಸ್ಥಿತಿಯಲ್ಲಿರುವದೆಂದು ಶಾಸನಶಾಖೆಯ ಡೈರೆಕ್ಟರವರು ವರದಿ ಮಾಡಿರುವರೆಂದೂ, ಅಲ್ಲದೆ ಪ್ರತಿಮೆಯನ್ನು ಸರಿಯಾದ ಸ್ಥಿತಿಯಲ್ಲಿರಿಸಿ ಕಾಪಾಡಿಕೋಡು ಬರಲು ಸಾಕಾದಷ್ಟು ಗಮನ ಕೊಡಲಾಗುತ್ತಿದೆಯೆಂದೂ ಪ್ರಸಿದ್ಧಪಡಿಸಿದ್ದಾರೆ

ಸರ್ ಕೆ ಪಿ ಪುಟ್ಟಣ್ಣಶೆಟ್ಟರು ವೀರಕೈವ ಹಾಸ್ಟೆಲನ್ನು ನಿರ್ಮಿಸಲು ಧರ್ಮಾರ್ಥವಾಗಿ 85 ಸಾವಿರ ರೂಪಾಯಿಗಳನ್ನು ಕೊಟ್ಟು ನಿಷಯವನ್ನು ಈ ಹೊದಲು ಪ್ರಕಟಿಸಲಾಗಿತ್ತಲ್ಲೆ! ಆದರಲ್ಲಿ ೧೦ ಸಾವಿರ ರೂಪಾಯಿಗಳನ್ನು ಸರ್ಕಾರದವ್ವಿ ರೇನಸಾನ್ಸಿಯಾಗಿಟ್ಟು, ಉಳಿದ 10 ಸಾವಿರ ರೂಪಾಯಿಗಳಿಂದ ಹಾಸ್ಟಲ್ಲಿನಾಗಿ ಬನವನ ಗುಡಿ ಬುಲ್ ಟೆಂಪಲ್ ರೋಡಿನಲ್ಲಿ ೩೬ನೇ ನಂಬರ್ ಬಂಗಲೆಯನ್ನು ಕೊಂಡುಕೊಡಿರುತ್ತಾರೆ ಈ ಒಂಗಲೆಗೆ ಅನಧ್ಯಕವಾದ ಬದಲಾವಣೆಗಳು ನಡೆಯುತ್ತಿವೆ ಶೀಘ್ರವಲ್ಲಿಯೇ ಹಾಸ್ಟಲ್ ಪ್ರಾರಂಭವಾಗುವದೆಂದು ತಿಳಿದುಬರುತ್ತದೆ

ವರ್ತಮಾನಸಂಗ್ರಹ.

ಬೆಂಕಿಯ ಅನಾಹುತ'

ಕಳೆದ ಒನೆಯ ತಾರೀಖಿನ ದಿವಸ ಕೋಕನಾಡದಲ್ಲಿ ಬಡವರ ಗುಡಿಸಿಲುಗಳಿಗೆ ಬೆಂಕಿ ಬಿದ್ದು 50 ಗುಡಿಸಿಲುಗಳು ಭಸ್ಮವಾದವು 23ವರ್ಷ ವಯಸ್ಸಿನ ಸ್ತ್ರೀಯೊಬ್ಬಳು ಎರಡು ಗುಡಿಸಲುಗಳ ನಡುವೆ ಸಿಕ್ಕಿ ಜೀವಹಿಡುಹೋದಳು

ಕೋರ್ಟಿನಲ್ಲಿ ಮರಣ

ಲಾಹೋರು ಹೈ ಕೋರ್ಟಿನಲ್ಲಿ ವಾದಮಾಡುತ್ತಿದ್ದಂತೆಯೇ ಸರ್ದಾರ್ ಮೆಹಪತ್‌ಸಿಂಗ್ ಎಂಬವರು ಕೆಳಕ್ಕೆ ಬಿದ್ದು ವ್ಯಸರಿದರು ಹೈದರಬಾಜಿನಿಯು ನಿಂತುಹೋದುದರಿಂದ ಅವರು ವೃತರಾದರೆಂದು ಹೇಳಲಾಗಿದೆ

ಜೈಲಿನಲ್ಲಿ ಬಂದಿಗಳನ್ನು ನಿಷ್ಕರುಣೆಯಿಂದ ಶಿಕ್ಷಿಸಿದ್ದಕ್ಕೆ ನಿಜಾರನೆ!

ಬಿಜಾಪುರದ ಜೈಲಿನಲ್ಲಿ ಖೈದಿಗಳನ್ನು ಚಾವಟಿಯಿಂದ ಹೊಡೆದರೆಂದು ಹೊರಟಿರುವ ಆಪಾದನೆಯ ಸಂಬಂಧವಾಗಿ ವಿಚಾರಣೆ ನಡೆಸಲು ಪೂನಾ ಸೆಷನ್ ನ್ಯಾಯಾಧೀಶರಾದ ಶ್ರೀ ಎ ಎಸ್ ಲೋಕೂರ್ ಮತ್ತು ಸರ್ಕಾರಿ ವಕೀಲರ ಮುಖ್ಯಾಧಿಕಾರಿಗಳಾದ ಭಂಡಾರಿಯವರನ್ನು ನಿಯಮಿಸಿದ್ದಾರೆ

ಜರೂಸೆಲಂ ನಗರದಲ್ಲಿ ಕರ್ಫ್ಯೂ ಆಜ್ಞೆ!

ಜರೂಸೆಲಂನಗರದಲ್ಲಿ ಪುನಃ ಕ್ರಾರಿಕೃತ್ಯಗಳು ಪ್ರಾರಂಭವಾದ್ದರಿಂದ ಕರ್ಫ್ಯೂ ಆಜ್ಞೆಯನ್ನು ಜಾರಿಗೆ ತರಲಾಗಿದೆ ನಗರದಲ್ಲಿ ನಡೆದ ಹೊಡೆದಾಟದ ಸಲವಾಗಿ 8 ಮಂದಿ ಸೈನಿಕರಾದರು 18 ಮಂದಿ ಸಿವಿಲಿಯನ್ ಗಾಯಗೊಂಡಿದ್ದಾರೆ ನಗರವಲ್ಲಿ ಶಾಂತಿ ಸಮಾಧಾನಗಳನ್ನು ಕಾಪಾಡಿಕೊಂಡು ಬರಲು ಅಧಿಕಾರಿಗಳೊಡನೆ ಸಹಕರಿಸಬೇಕೆಂದು ಯಹೂದಿಯರನ್ನು ಯಹೂದ್ಯಸಂಘದವರು ಪ್ರಾರ್ಥಿಸಿರುತ್ತಾರೆ

ಬಂಗಾಳದ ಜಮಿನುದಾರರಿಗೆ ಮಹಾಪ್ರಧಾನರ ಎಚ್ಚರಿಕೆ!

ಬಂಗಾಳದ ಮಹಾಪ್ರಧಾನರಾದ ಸರ್ ಫಜಲೂಲ್ ಹಕ್‌ರವರು ಬಂಗಾಳದ ಜಮಿನುದಾರರುಗಳನ್ನುದ್ದೇಶಿಸಿ, ಅಸೋಸಿಯೇಟೆಡ್ ಪ್ರೆಸ್ ಸುದ್ದಿಗಾರರ ಮೂಲಕ "ಜಮಿನ್ದಾರರು ತಪ್ಪಿನಮೇಲೆ ತಪ್ಪುಗಳನ್ನು ಮಾಡುವುದರಿಂದ ರೈತರಿಂದಿನೆ ಸೌಹಾರ್ದಭಾವವಿಂದ ವರ್ತಿಸಿ ಸಮಾಧಾನಕರವಾದ ಒಪ್ಪಂದಗಳನ್ನು ಮಾಡಿಕೊಳ್ಳುವುದೇ ಕ್ಷೇಮ ಇಲ್ಲದಿದ್ದರೆ ಸರ್ವನಾಶವು ಸಿದ್ಧ" ಎಂದು ಎಚ್ಚರಿಕೆ ಕೊಟ್ಟಿರುತ್ತಾರೆ

ಮನುಷ್ಯಾಪಹರಣಾಪ್ರಯತ್ನ!

ಇಂಗ್ಲೆಂಡಿನಲ್ಲಿ ಮಹಾಧನಿಕರೆನಿಸಿದ ಲಾರ್ಡ್‌ನ ಫ್ರೀಲ್ಯಾರು ಆಕ್ಸ್‌ಫರ್ಡ್ ನಗರದಲ್ಲಿರುವ 'ಕಾಲೆ'ಕಾರ್ಯನೆಯಲ್ಲಿ ರಾತ್ರಿ ಬಹಳಹೊತ್ತಿನವರೆಗೆ ಕೆಲಸಮಾಡುತ್ತ ಕುಳಿತಿರುವಾಗ ಇಬ್ಬರು ಮುಸುಕು ಮೋಟರುಕಾರಿನಲ್ಲಿ ಬಂದು ಕಚೇರಿಯನ್ನು ಪ್ರವೇಶಿಸಿ ಲಾರ್ಡ್‌ನನ್ನೀಲ್ಲಾರನ್ನು ಸದ್ದುಮಾಡದೆ ಕಾರಿನಲ್ಲಿ ಬಂದು ಕುಳಿತುಕೊಳ್ಳಬೇಕೆಂದು ಆಜ್ಞೆಮಾಡಿದರು ದೈವವಶಾತ್ ಪಕ್ಕದ ಕೊಠಡಿಯಲ್ಲಿ ಕುಳಿತಿದ್ದ ನಫೀಲ್ಡರವರ ಸ್ನೇಹಿತರೊಬ್ಬರು ಇವನ್ನು ಕೇಳಿ ಕೂಡಲೆ ಪೋಲೀಸಿಗೆ ಟೆಲಿಫೋನ್ ಮಾಡಿದ್ದರಿಂದ ಪೋಲೀಸಿನವರು ಬಂದು ಈ ದುಷ್ಟರನ್ನು ಬಂಧಿಸಿದರು

ಜರ್ಮಾ ಮಂತ್ರಿಮಂಡಲದಲ್ಲಿ ಬದಲಾವಣೆ

ಜಪಾನಿನ ಮಹಾಪ್ರಧಾನರಾದ ರಾಜಕುಮಾರ ಕೊನೊಯಯವರು ಚಕ್ರವರ್ತಿಗಳನ್ನು ಭೇಟಿ ಮಾಡಿದ ಮೇಲೆ ಮಂತ್ರಿಮಂಡಲದಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಯಿತೆಂದು ಪ್ರಕಟಿಸಲ್ಪಟ್ಟಿದೆ ನಿವೇಕಾಂಗ ಸಚಿವರಾಗಿದ್ದ ಶ್ರೀಹರಿಹಿಟರವರು ರಾಜಿನಾಮೆ ಕೊಟ್ಟ ದ್ದಾರೆ ಅವರ ಸ್ಥಳಕ್ಕೆ ಜನರಲ್ ಆಗಾಕಿಯವರು ವಿದೇಶಾಂಗ ಸಚಿವರಾಗಿ ನೇಮಿಸಲ್ಪಟ್ಟಿದ್ದಾರೆ ಸೈನ್ಯಶಿಕ್ಷಣ ಶಾಖೆಯ ಅಧಿಕಾರಿಯ ಜನರಲ್ ಆರಾಕಿಯವರ ಕೈಗೆ ಕೊಡಲ್ಪಟ್ಟಿದೆ ಮಂಚೂರಿಯನ್ನು ಜರ್ಮಾ ಆಕ್ರಮಿಸಿಕೊಳ್ಳಲು ಯುದ್ಧನಡೆಸಿದಾಗ ಜನರಲ್ ಆರಾಕಿಯವರು ಸಂಧಾನ ಸಚಿವರಾಗಿದ್ದರು ಸಂಧಾನ ಸಚಿವರಾದ ಶ್ರೀಸುಗಿಯಾಮಾರವರು ರಾಜೀನಾಮೆ ಇತ್ತಿರುವುದಾಗಿ ತಿಳಿದುಬಂದಿದೆ

ಪಂ॥ ಜವಹಿರರ ಯೂರೋಪು ಪ್ರವಾಸ'

ಅಲಹಾಬಾದು ಕಾಂಗ್ರೆಸ್ ಸಮಿತಿಯವರು ವಿದೇಶಿ ಸತ್ಕಾರಕೂಟದಲ್ಲಿ ಮಾತನಾಡುತ್ತಾ ಪಂ॥ ಜವಹಿರಲಾಲರು ಈ ರೀತಿ ಹೇಳಿದರು. "ಸಂಘೀಷಕ್ಕಾಗಿ ಪ್ರವಾಸಮಾಡುವುದು ನನಗೆ ಇಷ್ಟವಾಗಿದ್ದರೂ ನಾನು ಸಂತೋಷಕ್ಕಾಗಿ ಈ ಪ್ರವಾಸವನ್ನು ಕೈಗೊಂಡಿಲ್ಲ ಆರೋಗ್ಯಕ್ಕಾಗಿಯೂ ಹೋಗುವದಿಲ್ಲ ವಿಶೇಷವೆಂದರೆ ಈಗ ನಾನು ಪೂರ್ಣ ಆರೋಗ್ಯವನ್ನು ಹೊಂದಿದ್ದೇನೆ ಅಲ್ಲದೆ ನನ್ನ ಪುತ್ರಿಯನ್ನು ನೋಡುವ ಉದ್ದೇಶದಿಂದಲೂ ಹೊರಟಿಲ್ಲ ಹಾಗೆ ನನ್ನ ಇಷ್ಟವಿದ್ದಲ್ಲಿ ಆಕೆಯೇ ಭಾರತಕ್ಕೆ ಬರುತ್ತಿದ್ದಳು ಯೂರೋಪಿನ ಪರಿಸ್ಥಿತಿಯನ್ನು ಪರಿಶೀಲಿಸುವುದೇ ಅಲ್ಲಿಗೆ ನಾನು ಈಗ ಹೊರಟಿರುವುದಕ್ಕೆ ಕಾರಣ ಭಾರತದ ಸಮಸ್ಯೆಯು ವಿಶ್ವಸಮಸ್ಯೆಯೊಂದಿಗೆ ಐಕ್ಯವಾಗಿದೆ' ಎಂಬಾಗಿ ಹೇಳಿದರು

ಚೀನಾ-ಜರ್ಮಾ ಸಂಗ್ರಾಮದಲ್ಲಿ ಜರ್ಮನಿಯ ಸಾಕ್ಷ್ಯ!

ಜಪಾನಿನ ಪ್ರೇರಣೆಯಿಂದ ಜರ್ಮನ್ ಸರ್ಕಾರವು ಚೀನದಲ್ಲಿರುವ ಜರ್ಮನ್ ಸಲಹೆಗಾರರನ್ನೆಲ್ಲಾ ಹಿಂದಕ್ಕೆ ಕರೆಸಿಕೊಳ್ಳುವದೆಂದು ಸುದ್ದಿಯಿದೆ ಚೀನಕ್ಕೆ ಶಸ್ತ್ರಾಸ್ತ್ರ ಸರಬರಾಜನ್ನೂ ನಿಲ್ಲಿಸಿರುವದೆಂದು ತಿಳಿದುಬಂದಿದೆ ಅನೇಕ ಜರ್ಮನ್ ಸೈಜಿಗಳು ಚೀನಾದೇಶವನ್ನು ಬಿಟ್ಟು ಹೊರಡಲಿದ್ದಾರೆ ಮಾರ್ಷಲ್ ಚಿಯಾಂಗ್ ಕೈಜೆಕ್ ರವರಿಗೆ ಸಲಹೆ ಕೊಡುತ್ತಿದ್ದ ಜರ್ಮನ್ ಸಲಹೆಗಾರರೆಲ್ಲರೂ ಇನ್ನು 15 ದಿನಗಳೊಳ್ಗೆ ಚೀನಾದೇಶವನ್ನು ಬಿಟ್ಟು ಹೊರಡುವರು 2 ತಿಂಗಳ ಕೆಳಗೆ ಜರ್ಮನಿಯಿಂದ ಬಂದಿದ್ದ ರೆಡ್‌ಕ್ರಾಸ್ ಪಡೆಯು ಕೂಡ ಹಿಂದಕ್ಕೆ ಕರೆಸಿಕೊಳ್ಳಲ್ಪಡುವದೆಂದು ತಿಳಿಬರುತ್ತದೆ

ಯೂರೋಪಿನಲ್ಲಿ ಯುದ್ಧದ ಭೀತಿ!

ಇಂದಿನ ಯೂರೋಪಿನ ರಾಜಕೀಯ ಪರಿಸ್ಥಿತಿಯು ಬಹಳ ಸೂಕ್ಷ್ಮವಾಗಿದೆ ಯಾವುವಾದರೂ ಒಂದು ಸಣ್ಣ ಘಟನೆಯು ನಡೆದರೆ ಸಾಕು, ಸಂಪೂರ್ಣ ಯೂರೋಪು ಖಂಡವೆಲ್ಲವೂ ಸಂಗ್ರಾಮಾಗ್ನಿಯಿಂದ ಆವರಿಸಲ್ಪಡುವ ದಲ್ಲದೆ ಅದರ ಬೇಗೆಯು ಪ್ರಪಂಚದ ಇತರ ಭಾಗಗಳಿಗೂ ತಗಲದಿರುವುದಿಲ್ಲ. ಸದ್ಯಃ ಜಿಕೊಸ್ಲೊವೋಕಿಯದ ಸಮಸ್ಯೆಯು ಶಾಂತಿಯುತವಾಗಿ ತೀರ್ಮಾನವಾಗಬೇಕೆಂದು ಹೆರ್ ಹಿಟ್ಲರನು ಬಯಸಿದ್ದರೂ ಯಾವ ಕಾರಣ ದಿಂದಲಾದರೂ ಜರ್ಮನ್ ಪ್ರಜೆಗಳಿಗೆ ಆಪಾಯವಾದರೆ ತಾನು ಕೂಡಲೆ ಸೈನ್ಯಸಮೇತ ಜೆಕೊಸ್ಲೊವೋಕಿಯ ಪ್ರಾಂತವನ್ನು ಪ್ರವೇಶಮಾಡುವುದಾಗಿ ಹೇಳುತ್ತಿದ್ದಾನೆ. ಹಾಗೇನಾದರೂ ಸಂಭವಿಸುವುದಾದರೆ, ಬ್ರಿಟಿಷರೂ ಸಮರಾಂಗಣವನ್ನು ಪ್ರವೇಶಮಾಡಬೇಕಾಗುತ್ತದೆ ಹಾಗೇನಾದೂ ಸಂಗ್ರಾಮವುಪೊದಗುವುದಾದರೆ ಬ್ರಿಟಿಷ್ ಸರ್ಕಾರವು ಫ್ರಾನ್ಸಿಗೆ ಸಹಾಯಮಾಡುತ್ತದೆಂಬ ಆಂಶವನ್ನು ಜರ್ಮನ್ ಸರ್ಕಾರವು ಆಗಲೇ ಅರಿತಿದೆ

ಸೈಬೀರಿಯದಲ್ಲಿ ರಷ್ಯದ ಯುದ್ಧ ಸಿದ್ಧತೆ!

ರಷ್ಯದೇಶಕ್ಕೂ ಮಂಗೋಲಿಯಾ ಮತ್ತು ಮಾಂಚು ಕೋಗಳಿಗೆ ನಡುವೆ 200 ಮೈಲು ಉದ್ದದ ಗಡಿಪ್ರದೇಶದಲ್ಲಿ ರಷ್ಯದವರು 4 ಲಕ್ಷ ಸೈನಿಕರನ್ನೂ 2 ಸಾವಿರ ಭಾರಿ ಸಿರಿಂಗಿ ಗಾಡಿಗಳನ್ನೂ 900 ವಿಮಾನಗಳನ್ನೂ ಇಟ್ಟಿರುವರಂತೆ ಮತ್ತು ಸಮುಯಬಿದ್ದರೆ ಅಪಯೋಗಿಸಿಕೊಳ್ಳಲು ವಿಷವಾಯು ನಿರೋಧ ವರ್ತಾಡುಗಳನ್ನು ಮುಖ್ಯ ಸ್ಥಳಗಳಲ್ಲಿ ಮಾಡಿರುವರು ಮಾಂಚುಕೋ ಗಡಿಪ್ರದೇಶ ವಾಸಿಗಳುದ ನಾಗರಿಕರೆಲ್ಲರೂ ಮತ್ತು ಗುಂಡುಗಳಲ್ಲದೆ ವಿಷವಾಯು ನಿರೋಧ ಮುಖವಾಡಗಳನ್ನೂ ಇಟ್ಟುಕೊಂಡಿರುತ್ತಾರೆ ಜರ್ಮಾದೇಶವು ಚೀನಾ ಯುದ್ಧದಲ್ಲಿ ಬಲಹೀನವಾಗುವನ್ನೇ ರಷ್ಯವು ನಿರೀಕ್ಷಿಸುತ್ತಿದ್ದು, ಮತ್ತು ಜಪ್ಪಾನಿನಿಂದ ಚೀನವು ಸಂಪೂರ್ಣ ಜಪಜಯ ಹೊಂದುತ್ತಿದೆಯೆಂಬುದು ತಿಳಿದುಬಂದಾಗ ಚೀನಾದೇಶದವರಿಗೆ ಸಹಾಯಮಾಡಲು ಸಿದ್ಧವಾಗಿದೆ ಜರ್ಮಾ ಸಹ ರಷ್ಯವನ್ನು ಎದುರಿಸಲು ಮಾಂಚುಕೋವಿನಲ್ಲಿ ಶಕ್ತರಾದ 2 ಲಕ್ಷ 50 ಸಾವಿರ ಸೈನಿಕರನ್ನು ಇಟ್ಟಿದ್ದಾರೆ ಮುಖ್ಯವಾಗಿ ತನ್ನ ದೇಶದ ಆರ್ಡಿಕ ಮತ್ತು ಕೈಗಾರಿಕೆಗಳ ಅಭಿವೃದ್ಧಿಗಾಗಿ ಮಾಡಿಯುತ್ತಿರುವ ಸೂಕಾಯಿಟ್ ರಷ್ಯವು ತಾನಾಗಿ ಮೇಲೆ ಬಿದ್ದು ಯುದ್ಧವನ್ನಾರಂಭಿಸಲು ಸಿದ್ಧವಾಗಿಲ್ಲ ಸಿ.ಕೆಯಾಂಗ್, ಟರ್ಕಿಸ್ತಾನ್ ಮತ್ತು ಮಂಗೋಲಿಯ ಇವುಗಳು ಜಪಾನಿನ ವಶವಾಗುವಂತೆ ರಷ್ಯದವರು ಅಲ್ಲೆಲ್ಲಾ ಸೇನೀಯ ಸೈನಿಕರನ್ನು ತರಬೇತುಮಾಡಿ ಸಿದ್ಧವಾಗಿಟ್ಟಿದ್ದಾರೆ

ಸ್ವೀಕಾರ.

ಅರಸೀಕೆರೆ ತಾ॥ ಯರೆಹಳ್ಳಿ ಗ್ರಾಮವಲ್ಲಿರುವ ಸಾಹುಕಾರ ಮಾ॥ ರಾ॥ ರುದ್ರಪ್ಪಶೆಟ್ಟರ ಪುತ್ರ ಚಿ॥ ಸೌ॥ ವೀರಭದ್ರಪ್ಪಶೆಟ್ಟಿಗೆ ಇದೇ ತಾಲೂಕಿನ ಮಾಡಾಳು ಗ್ರಾಮದಲ್ಲಿರುವ ಮಾ॥ ರಾ॥ ಆರೆಮಲ್ಲಿಪ್ಪಶೆಟ್ಟರ ಪುತ್ರಿ ಚಿ॥ ಸೌ॥ ಲಿಂಗವ್ವನವರ ಸಹೋದರಿ ಚಿ॥ ಸೌ॥ ಬೊಡ್ಡಮಲ್ಲಮ್ಮನವ್ವನ್ನು ಕೊಟ್ಟು ನೆರವೇರಿಸಿದ ನಿಶ್ಚಿತಾರ್ಥಕ್ಕೆ ಬಂದ ಜಾಟೀಲ ಮಾ॥ ರಾ॥ ನಾಗನಗೌಡರ ಪುತ್ರ ಚಿ॥ ಸೌ॥ ಗುಜ್ಜನ ಗೌಡರಿಗೆ ಕೊಟ್ಟು ನೆರವೇರಿಸಿದ ನಿಶ್ಚಿತ ಕಾರ್ಯದಲ್ಲಿ ಕನ್ಯೆಯ ತಂದೆಯವರು ಪ್ರಭಾಪೋಷಣಕ್ಕೋಸ್ಕರ ತೆಗೆ ಯಿಸಿದ ೧ ರೂ ಯು ಗುರುಕಿಂಕರ ಶ್ರೀಯುತ ಸಾಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತದೆ

ಬಳ್ಳಾರಿ ಜಿ॥ ಚಿಗಟೇರಿ ರುದ್ರವಡೆಯರ ಮರವ ನೇಗಿ ವೀರಭದ್ರಯ್ಯನವರು ತಮ್ಮ ಮರದಲ್ಲಿ ತಮ್ಮ ಪುತ್ರನಿಗೂ ಮತ್ತು ತಮ್ಮ ಸಹೋದರರ ಮಕ್ಕಳಿಗೂ ಮಾಹೇಶ್ವರದೀಕ್ಷೆಯನ್ನು ನೆರೆಗೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ ೧ ರೂ ಯು ಹಿರೇಮ್ಯಾಗಳಗೇರಿ ವೇ॥ ಶಿವರುದ್ರಾಶ್ರಿಗಳ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂ॥ ಚಾ॥ ಸಾ॥ ರ್ಯ ರು ನಿತ್ಯಮಂಗಲವನ್ನಿತ್ತಿಯಲೆಂದು ಪ್ರಾರ್ಥಿಸುತ್ತೀನೆ.

[೩ನೆಯ ಪುಟದಿಂದ ಮುಂದುವರಿದುದು]

ತ್ಯ ಆಹಾರವನ್ನೇ ವಿಶೇಷವಾಗಿ ಉಪಯೋಗಿಸುವರು ಇಂಥ ಆಹಾರವನ್ನು ಸೇವಿಸುತ್ತ ಒಂದು ದಿವಸಕ್ಕೆ ಎಷ್ಟು ಸಾರಿ ಚಹಾ ಕುಡಿದರೆ ಅತಿ ಉಷ್ಣವಾಗಿ ವೀರ್ಯವೆಲ್ಲ ಸ್ಖಲಿಸಿ ಅನೇಕ ರೋಗಗಳಿಗೆ ತವರುಮನೆ ಯಾಗುವರು

ಚಹಾದಿಂದ ಮಂದಾಗ್ನಿಯೂ ಕ್ಷಯರೋಗವೂ

ಉದಯಕಾಲದಲ್ಲಿ ಜಠರಾಗ್ನಿಯು ಪ್ರಜ್ವಲಿಸುತ್ತಲಿರುವ ಕೆಂಡದಂತೆ ದೀಪ್ತವಾಗಿರುವದು ಅಂಥ ಸಮಯದಲ್ಲಿ ಅಕ್ಕಿ ಸಾತ್ವಿಕವಾದ ಆಹಾರವನ್ನು ಹಾಕದೆ ಉಳ್ಳುತ್ತಿರುವ ಉಗ್ರವಾದ ಚಹಾ ಸುರುವಿದರೆ ಜಠರಾಗ್ನಿಯ ಶಕ್ತಿಯು ಮಂದವಾಗಿಹೋಗುತ್ತದೆ ಅದರಲ್ಲಿ ಎಣ್ಣೆಯಲ್ಲಿ ಕರಿದ ಕಾರದ ಅವಲಕ್ಕಿಯಾದರೂ ಚಹಾದೇವಿಯ ಸಹೋದರಿಯೆಂದೆ ಹೇಳಬೇಕಾಗಿದೆ ಇತ್ತೀಚೆಗೆ ಳೆಲವರು ರೊಟ್ಟಿ ಅನ್ನ ಮೊದಲಾದ ಆಹಾರವನ್ನು ಬಿಟ್ಟು ಘಂಟೆಗೆ ಎಂಟುಸಾರಿ ಚಹಾ, ಕಾರದ ಅವಲಕ್ಕಿಯನ್ನ ಸೇವಿಸುತ್ತಿರವರು ಇದರಿಂದ ದೇಹ ಕಾಂತಿಯು ಕುಗ್ಗುತ್ತ ಧಾತ ಪ್ಲೇಣತೆಯೂ ಸಿರ್ಲತೆಯೂ ಉಂಟಾಗಿ, ಕ್ಷಯರೋಗ ಭಾಗಿಗಳಾಗುತ್ತಾರೆ ಇವರ ಸಂತಾನವಾದರೂ ಗುಂಗಾಡಿ ಚಿಕ್ಕಾದಿಗಳಿಗೆ ಸದೃಶವಾಗದೆ ಪೂರ್ವದ ಜನರ ಆಹಾರವನ್ನೂ ಅವರ ರಕ್ತಿ ವತ್ತು ಅವರು ಮಾಡಿದ ಅಮಾನ ಷಕತೆಗಳನ್ನೂ ಕದಲಂವ್ಯಗಳನ್ನೂ ಚಿತ್ತಗಳನ್ನೂ ನೋಡಿದರೆ ಈಗಿನವರು ಹದಲಿ ಸಾಯುವಂಥವುಗಳಾಗಿರುತ್ತವೆ ಈಗಿನ ಜನರ ಆಹಾರವನ್ನ ವ್ಯವಹಾರವನ್ನೂ ನೋಡಿದರೆ ಇನ್ನು ಳೆಲವುಕ ಒದೆಮಂದೆ ಒಂದು ಸೂಜಿಯು ಒಂಭತ್ತಿಜನರಿಗಿ ಎತ್ತಲಿಕ್ಕಿಲ್ಲಂದು ಕಂಡು ಬರುತ್ತದೆ ಅದವಾ ಧೂಲಿಯಂತೆ ಾಗಿ ಹಾರಿ ಹೋಗಿವ ನರಕಿಟಿಕಗಳಾದರೂ ಜನಿಸಿಹುದೆಂದು ಊಹಿಸಲ್ಕೆಂಾಗದೆ ಇಂಥ ಕ್ಷುದ್ರ ಸಂತ ನಕ್ಕೆ ಈಗಿನ ಚಹಾಭಕ್ತರೇ ಕಾರಣರಲ್ಲವೆ? ಗ್ರಾಸ್ ದೇಶದಲ್ಲಿ ಒಬ್ಬ ಮನುಷ್ಯನ ಒಂಬು ಕಡೆಯ ಮಿಾಸಾ ಕಿಗಳು ಹತ್ತಿತ್ತು ಅವನು ಒಂಬಾನೊಂದುದಿನ ಕನ್ನಡಿಯನ್ನು ಕೈಯಲ್ಲಿ ತೆಗೆದುಕೊಂಡು ತನ್ನ ಮುಖವನ್ನು ನೋಡಿ ಕೊಳ್ಳಲು ಒಂದು ಭಾಗದಲ್ಲಿ ವಿಾಸಯ ಕೂದಲುಗಳು ತನ್ನವಿಗಿ ಇದ್ದವು ಮತ್ತೊಂದು ಕಡೆಯ ಮಿಾಸಲಿ ಅರ್ಧಕೂದಲುಗಳು ಉದರಿಹೋಗಿದ್ದವು ಒಟ್ಟಿನಮೇಲೆ ಮೂರ್ಕಾಲು ಮಿಾಸೆಯವನಾಗಿದ್ದನಂದು ಹೇಳಿಹುದು ಒಳಕ ಅವನು ಒಂದು ಕಪ್ಪಿಯಿಂದ ಎರಡೂ ಕಡೆಯ ಮಿಾಸೆಯ ಕೂದಲುಗಳನ್ನು ಸರಿಪಡಿಸಿಕೊಂಡ “ ಪ್ರೆಂಚ್‌ಕಟ್” ಎಂದು ಹೆಸರಿಟ್ಟಿದೆಂತೆ! ಇದನ್ನು ನೋಡಿ ಕೆಲವರು ಇದು ಒಂದು ತರಹ ಸ್ಯಾಸ್ಸಿ ಇರ ಬಹುದೆಂದಿ ತಿಳಿದು, ತಮ್ಮ ತಮ್ಮ ವಿಾಸೆಯ ಕೊಣೆಯ ಬಾಗಗಳನ್ನ ಅವನಂತೆಯೆ ತಿದ್ದಿಕೊಳ್ಳತೊಡಗಿದರು ಆಮೆ ಪದ್ಧತಿಯು ನಮ್ಮ ದೇಶದಲ್ಲಿಯಾದರೂ ಮೆಚ್ಚಿಮೆಲ್ಲನೆ ಕಾಲಿಡುತ್ತಬಂದಿದ್ದೆ ಈಗ ಕಸನುಡಿಸು ವವರು ಸಹ ಸೈಂಜಾಕಟ್ಟನ್ನು ಮಾಡಿಸತೊಡಗಿದ್ದಾರೆ ಆದರಂತೆಯೇ ಈ ಚಿಹುದ ಸೂಪ್ಪನ್ನು ಮೊದಲು ಪರದೇಶೀಯರು ತಮ್ಮ ತಮ್ಮ ಹಿತಕ್ಕಾಗಿ, ಸೇವಿಸತೊಡಗಿದರು ಅದನ್ನು ನೋಡಿ ನಮ್ಮ ದೇಶದವರವರೂ ಅವರ ಮರ್ಯಾದೆಯನ್ನು ತಿಳಿಯದೆ ಮನಸ್ಸಿಗೆ ಬಂದಂತೆ ಕುಣಿಯುತ್ತ ಕೈಯಲ್ಲಿದ್ದ ದುಡ್ಡನ್ನು ಕಳೆದುಕೊಂಡು ಹುಚ್ಚರಂತೆ ತಿರುಗುತ್ತಿರುವದನ್ನು ನಾವು ಕಣ್ಣಾರೆ ನೋಡುತ್ತಿರುವೆವು ಈಗಿನ ಕಾಲದಲ್ಲಿ ವೃದ್ಧರೂ ತರುಣರೂ ಬಾಲಕರೂ ಚಹಾ ಇಲ್ಲದೆ ಜೀವಿಸುವಂತೆಯೇ ಇಲ್ಲ ಮೊಲೆಕುಡಿಯುವ ಕೂಸಿಗೂ ಸಹ ಚಹಾ ಬೇಕೇ ಬೇಕು ಮಲಗಿರುವಾಗ್ಗೆ ಚಹಾ, ಅರ್ಧರಾತ್ರಿಯಲ್ಲಿ ಚಹಾ, ನಿದ್ರೆ ಹತ್ತಿದಾಗ ಸಹ ಚಹಾ ಎಂದು ಬಡಬಡಿಸುವರು ಮತ್ತು ಮಲಗುವಾಗ್ಗೆ ಕಪ್ಪುಬಿಳಿ ಗಳನ್ನು ತಲೆಗಿಂಬಿಗೆ ಇಟ್ಟುಕೊಂಡೇ ಮಲಗುವರು ಮುಂಜಾನೆ ಏಳುವಾಗ್ಗೆ ಚಹಾ ಎಂದು ಏಳುವರು ಊಟದ ಚಹಾ, ನಿಂಕರ ಚಹಾ, ಹೋದರೂ ಚಹಾ, ಬಂದರೂ ಚಹಾ, ಸಾಯುವ ಸಮಯದಲ್ಲಿಯೂ ಚಹಾ ಎಂದು ಬಾಯಿತೆಗೆಯುವರು

ಹೀಗೆ ನಿಲ್ಲಿನೋಡಿದರೂ ಚಹಾದ ಹುಚ್ಚು ಹಿಡಿದ ಜನರೇ ತಿರುಗುತ್ತಿರುವರು ಇಂಥ ಹುಚ್ಚುಮಾನವರನ್ನು ಹೊತ್ತ ಭೂಮಾತೆಯೇ ನಿನ್ನ ದುರ್ಭಾಗ್ಯವ ವರ್ಣಿಸಲಸದಳವಾಗಿದೆ

(ಸಶೇಷ)

ಪ್ರಶ್ನೋತ್ತರ ರತ್ನಮಾಲಿಕಾ

ಲೇಬುಕರು—ಮಲ್ಲಿಕಾರ್ಜುನಾರಾಧ್ಯ, ರಾಜಬೆನ್ನೂರು
ನುಕಮತಿ, ಮುಜೀನೂರು, ಮಿಾ ತಿಪಟೂರು

ಪ್ರ—ದೇಹದ ಒಳಗಿನ ರಚನೆಯು ಹೇಗಿರುವದು?

ಉ—ಜೇರಡಹುಳದ ಜಾಳಿಗೆಯಲ್ಲಿ ಒಂದಕ್ಕಿಂತ ಒಂದು ಸಣ್ಣ ಸಣ್ಣ ಚಕ್ರಗಳಿರುವಂತೆ ಈ ದೇಹದ ಬ್ಲಿಯೂ ಸೂಕ್ಷ್ಮ ಚಕ್ರಗಳಿರುವುವು ಆ ಕೆಂಟವು ಎಲ್ಲಕ್ಕೂ ಸೂಕ್ಷ್ಮ ಚಕ್ರದಲ್ಲಿ ತನ್ನ ಮುಖ್ಯವಸತಿಯನ್ನು ಮಾಡಿಕೊಂಡಿರುವಂತೆ ಈ ಅಣುರೂಪತಾದ ಜೀವನು ಎಲ್ಲಕ್ಕೂ ಸೂಕ್ಷ್ಮವಾದ ಹೃದಯಚಕ್ರದಲ್ಲಿ ತನ್ನ ಮುಖ್ಯವಾಸವನ್ನು ಮಾಡಿಕೊಂಡಿರುವನು. ಇದಕ್ಕೆ ಜ್ಞಾನಿಗಳು ಹೃದಯಕಮಲವೆಂದು ಹೇಳುವರು ಜೇರಡಹುಳದ ಜಾಳಿಗೆಯಲ್ಲಿ ಅದ್ದವಾಗಿ ಅಡ್ಡವಾಗಿ ತಂತುಗಳಿರುವಂತೆ ಈ ದೇಹವೆಂಬ ಜಾಳಿಗೆಯಲ್ಲಿ ನಾಡಿಗಳೆಂಬ ದೀರ್ಘವಾದ ವಕ್ರಗಳಾದ ತಂತುಗಳಿರುವವು ಆ ಕೆಂಟವು ತನ್ನ ತಂತುವಿಗೆ ಹತ್ತಿದ ಇತರ ಪದಾರ್ಥಗಳನ್ನು ಗ್ರಹಿಸಿ ತಿನ್ನುವಂತೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆಂಬ ಜ್ಞಾನತಂತುಗಳಿಗೆ ಹತ್ತಿದ ಪದಾರ್ಥಗಳನ್ನು ಗ್ರಹಿಸಿ ನುಂಗಿ ತನ್ನಲ್ಲಿಟ್ಟುಕೊಳ್ಳುವನು ಅಂದರೆ ಪರಮಾತ್ಮನಲ್ಲಿ ಲೀನನಾಗುವನು

ಪ್ರ—ವಾಸನೆಯೆಂದರೇನು?

ಉ—ನಿಶ್ಚಯವಾದ ಭಾವನೆಯಿಂದ ಪೂರ್ವಾಪರವಿಚಾರವಿಲ್ಲದೆ ದೈವೈಸನ್ನಿಗಳನ್ನು ಹಿಡಿಯುವ ಚಿತ್ತವೃತ್ತಿಯು ಆದರೆ ತತ್ವವಿಚಾರದಿಂದ ಈ ವಾಸನೆಯೆಲ್ಲಯಲು ಏಶಿರುತುವಿನಷಡನೆ ಹಿಮವು ತೊಲಗುವಂತೆ ಈ ವಾಸನೆಯೆ ನಂಗಡವೆ ಚಿತ್ತವೂ ನಾಶವಾಗುವುದು ಮತ್ತು ನಾಡಿಗಲಿಂದ ಅಂಡಳೆಗಡಂತೆ ವಾಸನೆಗಳಿಲದಲ್ಲಿ ಈ ಸ್ಥೂಲದೇಹವು ಹಿಡಿಯಲ್ಪಟ್ಟಿರುವುದರಿಂದ ವಾಸನೆಗಳೊಡಿನೆಯೆ ಇದೂ ಹೋಗುವದು

ಪ್ರ—ಮನಸ್ಸಿನಲ್ಲಿ ಎಷ್ಟು ವಿಧವುಂಟು ?

ಉ—ಶುದ್ಧ ಅಶುದ್ಧವೆಂದು ಎರಡುವಿಧವಾಗಿರುವುದು ದೈವೈಸನ್ನಿಗಳಿಲ್ಲವೂ ಪೂರ್ಣಗ್ರಾಸನಾದ ಆತ್ಮನಿಗೆ ಅಭಿನ್ನವೆಂಬ ಜ್ಞಾನರೂಪದಿಂದ ಪ್ರವರ್ತಿಸುವದೇ ಶುದ್ಧವೆನಿಸುವದು ಇದು ಹುರಿದ ಬೀಜದಂತೆ ಜನ್ಮಾಂತರಕ್ಕೆ ಕಾರಣವಾಗದೆ ಸತ್ಯುರುಷನ್ನು ಆಶ್ರಯಿಸಿಕೊಂಡಿರುವದು ಆದರೆ ಚಿತ್ತವೃತ್ತಿಗಳಲ್ಲಿ (ವಾಸನೆ) ಬ್ರಹ್ಮಕ್ಕೆ ಇವು ಬಿನ್ನವೆಂದು ಅಜ್ಞಾನರೂಪದಿಂದ ದೃಶ್ಯಪದಾರ್ಥಗಳಲ್ಲಿ ಪ್ರವರ್ತಿಸುತ್ತ ಅಹಂಕಾರ ಮಮಕಾರಗಳನ್ನುಂಟುಮಾಡಿ ನೆನದ ಕಡಲೆಯಂತೆ ಪುನರ್ಜನ್ಮಕ್ಕೆ ಕಾರಣವಾಗುವದೇ ಅಶುದ್ಧವೆನಿಸುವದು

ಪ್ರ—ಕಾಂತಕರ್ತವ್ಯವೆಂದರೇನು?

ಉ—ದೇಹಾಭಿಮಾನವಂ ಇಟ್ಟುಕೊಂಡು ತಾನು ಮಾಡುವ ಕಾರ್ಯಗಳ ಫಲಗಳನ್ನು ಭೋಗಿಸುವ ಕರ್ತೃವು ತಾನೆಂಬ ಮೋಹವನ್ನಿಟ್ಟುಕೊಂಡಿರುವದೇ ಕರ್ಮಕಾಂಡವು ಇದು ಜೀವನಿ ಸರಕಾರಕ್ಕೆ ಬೀಜರೂಪವಾಗಿರುವದು ಮನ ಬುದ್ಧಿ ಚಿತ್ತ ಅಹಂಕಾರಗಳೆಂಬ ಕರಣಾದಿಗಳು ತಮ್ಮತಮ್ಮ ಕಾರ್ಯಗಳಲ್ಲಿ ಪ್ರವರ್ತಿಸಿ ಕೋಟಲೆಗೊಳಗಾಗಿರುವವಲ್ಲದೆ ತಾನು ಅವಲ್ಲಕ್ಕೂ ಸಾಕ್ಷೀಭೂತನಾಗಿದ್ದೇನೆ ನನಗೂ ಅವಕ್ಕೂ ಯಾವ ವಿಧವಾದ ಸಂಬಂಧವೂ ಇಲ್ಲೆಂಬ ಸುವಿಚಾರವೇ ಜ್ಞಾನಕಾಂಡವು ಇದರಿಂದ ಭವಬಂಧನವು ಹರಿದುಹೋಗುವುದು ಇನ್ನು ತಾನು ತನ್ನ ಪ್ರಾಣ ದೇಹಸತ್ಪಾದಿಗಳಿಗಾಗಲಿ ತಾನೆಸಗುವ ಕಾರ್ಯಶಬ್ದಾದಿವಿಷಯಗಳು, ಪ್ರಜಾಭಿವೃದ್ಧಿ, ಮತಾಭಿಕರಣಗಳ ಭೋಗ, ಗೃಹಕ್ಷೇತ್ರಾದಿಗಳು ಇತ್ಯಾದಿಗಳನ್ನು ಮನಃ ಪೂರ್ವಕವಾಗಿ ಪರಮಾತ್ಮಸ್ವರೂಪನೆಂದು ತಿಳಿದು ಅವುಗಳ ವಿಷಯದಲ್ಲಿ ಅಭಿಮಾನವಂ ತೊರೆವುದೇ ಮುಕ್ತಿಯನ್ನೀಯುವ ಭಕ್ತಿ ಕಾಂಡವು

ಪ್ರ—ಮುಮುಕ್ಷುವಿಗೆ ಸತ್ಪುರುಷರ ದರ್ಶನವಾದರೆ ಆವನ ಮನಸ್ಸು ವಿಕಾಗುವದು?

ಉ—ಹಸಿವಾದಾಗ್ಗೆ ರಸಾಯನ ದೊರತಂತೆಯೂ, ಆತಾಲಮರಣದುಃಖದಲ್ಲಿ ಅಮೃತ ದೊರೆತಂತೆಯೂ, ಅನಾವೃಷ್ಟಿಯಲ್ಲಿ ಪುಷ್ಕಳಮಳೆಬಂದಂತೆಯೂ, ದರಿದ್ರನಿಗೆ ನಿಧಿದೊರತಂತೆಯೂ, ಕುರುಡನಿಗೆ ಕಣ್ಣುಬಂದಂತೆಯೂ, ಇಷ್ಟಬಾದ ಸುಜಾತೀಯ ಸ್ತ್ರೀಯಲ್ಲಿ ಪುತ್ರೋತ್ಪತ್ತವಾದಂತೆಯೂ, ಕಳೆದುಕೊಂಡ ಪದಾರ್ಥವು ಸಿಕ್ಕಂತೆಯೂ, ಸತ್ಪವನು ಬದುಕಿದಂತೆಯೂ ಆನಂದಸಾಗರದಲ್ಲಿ ಲೋಲಾಡುವಂತೆ ಸತ್ಪುರುಷರೂ ಸಹ ಸಚ್ಚಿತ್ಸಾನ್ನು ಕಂಡರೆ ಪರಮಾನಂದ ಭೂಮಿಯಂ ಕಂಡ ರೈತನಿಗೆ ಬೀಜಬಿತ್ತಲವೇಕ್ಷೆಯಾಗುವಂತೆ ಆತನ ಹೃದಯಕ್ಷೇತ್ರದಲ್ಲಿ ಜ್ಞಾನಬೀಜವನ್ನೂರವೇಕಂಬುಲವಲವಿಕೆಯುಂಟಾಗುವದು.

ಪ್ರ—ದೇವತೆಗಳಂದರೂ ತಿಳಿಯಲಸಾಧ್ಯವಾದುದಾವುದು?

ಉ—ಕುದುರೆಯ ಹಾರಾಟ, ಮೇಘಗರ್ಜನೆ, ಅತಿವೃಷ್ಟಿ-ಅನಾವೃಷ್ಟಿ, ಮರಣ ಮಾರಾಟ, ಸ್ತ್ರೀಯರ ಮನಸ್ಸು, ಪುರುಷನ ಭಾಗ್ಯರೇಖೆಗಳು ಇವುಗಳನ್ನು ತಿಳಿಯುವದು ಮನುಜರಿಗೆ ಸಾಧ್ಯವಿಲ್ಲವು

ಪ್ರ—ಯಾರಿಗೆ ಆಯುಸ್ಸು ಸುಖಸಾಧವಾಗುವದು?

ಉ—ಯಾರು ತಿಳಿಯಕ್ಕರ್ತನ್ನು ತಿಳಿದು ಜೀವಕಾಲ ವಸ್ತುವೇದವಿಲ್ಲದೆ ಪರಿಪೂರ್ಣವಾಗಿರುವ ವಸ್ತುವಿನಲ್ಲಿ ವಿಶ್ರಾಂತಿಯಂ ಪಡೆಯುವರೋ ಆವರಿಗೆ

ಪ್ರ—ಧನಿಕನಿಗೂ ದರಿದ್ರನಿಗೂ ತಾರತಮ್ಯವೆನ್ನು?

ಉ—ದರಿದ್ರನಿಗೆ ಇಲ್ಲವೆಂಬುದೊಂದೇ ದುಃಖವು, ಧನಿಕನಿಗೆ ಯಾವುದು ಎಲ್ಲಿ ಹೋಗುವದೋ ಎಂಬ ದುಃಖವು ಸಹಸ್ರಸ್ರಕಾರವಾಗಿರುವದು ದರಿದ್ರನು ಕೊಡದವನಿಗೆ ದರಿದ್ರತೆಯುಂಟಾಗುವದೆಂಬ ಭಯದಿಂದ ದೇಹಂಯೆಂದವರಿಗೆ ನಾಸ್ತಿ ಎನ್ನುವದಲ್ಲ, ಆದರೆ ರಾಗ-ಭೋಗ ರೋಗಗಳಂದೇಳಲು ಹಸ್ಸಲಾಘವವನ್ನು ಪೇಕ್ಷಿಸುವ ಧನಿಕನು ಪರರಿಗೆ ಕೊಟ್ಟರೆ ತನಗೆ ಆಮಿಷಯಾಗುವದೆಂಬ ಲೋಭದಿಂದ ಯಾಚಕರಂ ನಿರಾಕರಿಸುತ್ತ ಆ ದೋಷದಿಂದಲೇ ಮುಂದೆ ದರಿದ್ರನಾಗುವನು. ಧಾರ್ಮಿಕನ ಧನವು ಯಾಚಕರಂ ಸಂತಸಪಡಿಸಿದ್ದರಿಂದ ಅಕ್ಷಯವಾಗಿ ಇಹಿಯ ಶ್ರಮವನ್ನುಂಟುಮಾಡಿ ಜನ್ಮಾಂತರಕ್ಕೆ ಸ್ಥಿತಿಯಾಗುವದು.

ಪ್ರ—ಮಹಾರೋಗ-ಅಂತಕ್ಕಳು ವಿಂಗಡಲೂ ಮಿಗಿಲಾದುವಾದು?

ಉ—ಸಂಸಾರರೋಗವು ಈ ಮಹಾರೋಗಕ್ಕೆ ಜ್ಞಾನಿಗಳಿಂದ ಚಿಕಿತ್ಸೆಯಂ ಮಾಡಿಸಿದರೆ ಸತಿ-ಸುತ ಧನ ಗೃಹ, ಕ್ಷೇತ್ರ ಇತ್ಯಾದಿಗಳ ಯೋಗ ವಿಯೋಗದ ದಿಂದುಟಾಗುವ ಹರ್ಷಮರ್ಷಗಳು ಗರುಡಮಂತ್ರದಿಂದ ವಿಷವಿಳಿಯುವಂತೆ ನಿರ್ನಾಮವಾಗಿ ಇರುವದು ಬರುವದು ಹೋಗುವದೆಲ್ಲವೂ ಬ್ರಹ್ಮನೇ ಎಂಬ ಸುಜ್ಞಾನ ಮುಂಟಾಗಿ ಪರಮಾನಂದವುಂಟಾಗುವದು ಆದರೆ ಯಾರು ಮಾಯಾಮಯವಾದ ಸ್ವಪ್ನಾಂಗನಾಸಂಗ ಮವಂತಿರುವ ಈ ಸಂಸಾರಭ್ರಾಂತಿಯಂ ಎಣಿಸದಿರುವರೋ ಅವರು ಉರಿಯುವ ಮನೆಯಲ್ಲಿ ಹುಲ್ಲಿನ ಗಾಣಿಯ ಮೇಲೆ ಮಲಗಿದಂತಾಗುವದು

ಶ್ರೀಮತಿ ಚಿಕ್ಕಬಸಮ್ಮಯ್ಯನವರ ಭತ್ಯ

ಗಣತಿ—೯೧ನೆ ಸಾಲಿನಲ್ಲಿ ಈ ಧರ್ಮಭತ್ಯಕ್ಕೆ ೯೦ ವಿದ್ಯಾರ್ಥಾಸಂಗಮಾಡಲು ಇಚ್ಛುಳ್ಳ ವೀರಶೈವ ಬಡ ವಿದ್ಯಾರ್ಥಿಗಳು ಈ ಕೆಳಗೆ ಕುಟುಮಾಡಿರುವವರಿಗೆ ಬರುವ ಜೂ॥ಮಾಹೆ ಕಾರ್ಯು ೧೦ ರೊಳಗೆ ವಿಧಾಯಕವಾದ ಧಾರಣನಲ್ಲಿ ಅಪ್ಲಿಕೇರ್ಷ ಬರೆದುಕೊಳ್ಳಬೇಕು

ಕಾಲಾತೀತವಾಗಿ ಬರುವ ಮತ್ತು ವಿಧಾಯಕವಾದ ಧಾರಣನಲ್ಲಿ ಬರೆದುಳ್ಳಿದ ಅಪ್ಲಿಕೇರ್ಷಗಳಿಗೆ ನಿಗಾ ಕೊಡುವದಿಲ್ಲ

ಮೈಸೂರು
೨೩-೫-೩೮

ಎಂ ಪಿ ಚೆನ್ನಪ್ಪ,
ರಿಜಿಸ್ಟ್ರರ್ ವೀರಶೈವಾಧಾರ
ಕನ್ವೀನರ್

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಪುರಂದಲ್ಲಿರುವ ಪತ್ರಿಯೊಂದು ಗುರುವರ್ಗದ ಮಠಕ್ಕೆ ವಿಜಾಯ ಶಿಷ್ಯರ ಮನೆಗಳನ್ನು ತಿಳಿಯಬೇಕಾದರೆ ಅಥವಾ ಮಠಪರ್ಯಟನೆಗೋಸ್ಕರ ಹಳ್ಳಿಪಟ್ಟಣಗಳಿಗೆ ಒಂದುಸಾರಿ ಹೋಗಿ ಶಿಷ್ಯರ ಮನೆಗಳನ್ನು ತಿಳಿದುಕೊಂಡು ಬರುತ್ತಿರುವುದು ಅವರಿಗೆ ಬಹಳ ತೊಂದರೆಯಾಗುತ್ತಿರುವುದರಿಂದ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷೇಮವನ್ನು ಬಯಸಿಹೋಗುವುದಕ್ಕೆ ಅನುಕೂಲವಾಗುವಂತೆ ಶಿಷ್ಯರ ಮನೆಗಳನ್ನು ತಿಳಿದುಕೊಳ್ಳಲಿಕ್ಕೆ ಅನುಕೂಲವಾಗಿರುವಂತೆ ಈ ಅಪೂರ್ವ ಪುಸ್ತಕವನ್ನು ಹೊರಡಿಸಿರುತ್ತಾರೆ. ಇದರಲ್ಲಿ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿದೆ. ಇದನ್ನು ಪ್ರತಿಯೊಬ್ಬ ಗುರುವರ್ಗದವರೂ ತಪ್ಪದೆ ಕೊಂಡುಕೊಳ್ಳಬೇಕಾಗಿ ಮಠದ ಮೇಲ್ವಿಚಾರಕರಾದ ಶ್ರೀ ಮಂತ್ರಗೋಳಿಮಠದ ಶ್ರೀಗಳವರು ಕೋರಿಕೊಳ್ಳುತ್ತೇವೆ. ಇದರಲ್ಲಿ ಬರೆಯುವ ವಿಷಯಗಳ ಸರಳವು ಜನ್ಯಾಗಿ ತೋರಿಸಲ್ಪಟ್ಟಿದೆ. ಅಮಪರಿಂದ ಸದರಿ ಪುಸ್ತಕವನ್ನು ಶಿಷ್ಯರುಗಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಉಪಯೋಗಿಸಿಕೊಳ್ಳಲಿಲ್ಲದಂತೆ ವಿವರವನ್ನೆಲ್ಲಾ ಬರೆದು ಪಂಚಾಂಗಶರ್ಮರವಾಗಿ ಸಿದ್ಧಪಡಿಸಿರುವುದು ತಮ್ಮ ಶಿಷ್ಯರನ್ನೆ ಕಾಣಾದಿಕೊಳ್ಳಬೇಕು ಇದಕ್ಕಾಗಿ ಪ್ರತಿಯೊಬ್ಬ ಗುರುವರ್ಗದವರೂ ತಪ್ಪದೆ ಕೊಂಡುಕೊಳ್ಳಬೇಕು ಎಂದೂ ಕೇಳಿದಷ್ಟು ಕಾಗದಗಳನ್ನು ಪ್ರತಿಯೊಬ್ಬರಿಗೂ ಬರೆಯಲಿಕ್ಕೆ ಆಗುವುದಿಲ್ಲವಾದ್ದರಿಂದ ಸುಂದರವಾಗಿ ಮುದ್ರಿಸಿರುವ ಈ ಪುಸ್ತಕವನ್ನು ಕೊಂಡುಕೊಳ್ಳಬೇಕೆಂದು ಕೋರಿಕೊಳ್ಳುತ್ತೇವೆ. ಇದರಲ್ಲಿ ಬರೆಯಲು ಅನುಕೂಲವಾಗಿರುವಂತೆ ಮತ್ತು ಪ್ರಯಾಣದ ಖರ್ಚನ್ನು ಹೊರಿಸಿರುವುದು ಸುಂದರವಾಗಿ ಮುದ್ರಿಸಿರುವ ಈ ಪುಸ್ತಕವನ್ನು ಕೊಂಡುಕೊಳ್ಳಬೇಕು ಎಂದೂ ಕೇಳಿದಷ್ಟು ಕಾಗದಗಳನ್ನು ಪ್ರತಿಯೊಬ್ಬರಿಗೂ ಬರೆಯಲಿಕ್ಕೆ ಆಗುವುದಿಲ್ಲವಾದ್ದರಿಂದ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭೆತ್ತು ಅಮೃತಲೀಲೆಗಳೆಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಾರ್ಥವಾದ ಆಸ್ತ್ರ, ಧರ್ಮಚಕ್ರ, ವ್ಯಾಸ, ಸಾನಂದ, ಜೊವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪಡೆತಿರುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಸದ್ಯಃ ಪ್ರತಿಷ್ಠಾಪೋಷಮಾನಾದಿತಕ್ಕೆ ಏನರು ಆಚಾರ್ಯರು ಒಂದೆರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ಕ್ಕೆ ೦—೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೫ಕ್ಕೆ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವರ್ಭವಿಸಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಧಿಕೇಕ ಮಾಡುವ ಫೋಟೋ .. ೦—೦—೯

ಶ್ರೀ ರೇಣುಕಾಚಾರ್ಯರು ವಿಭೂಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೯ಕ್ಕೆ ... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಪಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಘರ್ಮಪೀಠದ ಫೋಟೋ . ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ . ೦—೦—೯

ಶ್ರೀಮುಮ್ಮಡಿಯಾಣೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ . ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ . ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ಕ್ಕೆ . ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾವ್ಯಾಧಿಗ ಆಕ್ಕಂತ ಸುಂದರವಾದ ಫೋಟೋ ೧೫ಕ್ಕೆ . ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಇಷ್ಟಲಿಂಗ ಸುಂದರ ಫೋಟೋ ೧೫ಕ್ಕೆ . ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರ ಶಾಸ್ತ್ರಿಗಳವರ ಸಂಸ್ಕೃತ ಸಭೆಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ . ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರ ಶಾಸ್ತ್ರಿಗಳವರ ಸಂಸ್ಕೃತ ಸಭೆಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ಕ್ಕೆ . ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾವ್ಯಾಧಿಗ ಆಕ್ಕಂತ ಸುಂದರವಾದ ಫೋಟೋ ೧೫ಕ್ಕೆ . ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಇಷ್ಟಲಿಂಗ ಸುಂದರ ಫೋಟೋ ೧೫ಕ್ಕೆ . ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರ ಶಾಸ್ತ್ರಿಗಳವರ ಸಂಸ್ಕೃತ ಸಭೆಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಹಿಮವತ್ಕೇದಾರದಲ್ಲಿ ಸುಧೃವಲ ಲೋಹಾನಿ ಶ್ರೀ ಕೇದಾರಪಾರ್ವತಾಮಿಯ ನುಂದಿರವ ಸುಂದರ ಫೋಟೋ . ೧—೦—೯

ಸೊಲ್ಲಾಪುರದಲ್ಲಿ ನಿವೇರಿಸಿದ ಉಜ್ಜಯಿನೀ ಜಗದ್ಗುರುಗಳನ ಅತ್ಯ ಪಲ್ಲಕ್ಕಿ ಮಹೋತ್ಸವದ ಫೋಟೋ . ೦—೦—೯

ಸೂಚನೆ—೬ ಅಂಗ ರಂಗವಾಗಿ ಎಲ್ಲಾ ಕಮಿತಿ ಆರ್ಡರುಗಳಿಗೆ ಪಿ ಕಳುಹಿಸುವವಕ್ಕಾಗುನ್ನಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಅಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯೂ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೂಜೆಯಾಗಿಸುತ್ತಾರೆ. ಮಾದರಿ ಸೀಸೆ ಪುಗಸೆಟ್ಟೆ ಕಳುಹಿಸಲಾಗುವುದು. ಬುದ್ಧಿ ಒಂದಕ್ಕೆ ಕ್ರಯ ರೂ. ೦ ೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ ೪ ಆಣೆ.

ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆಯುರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[6] ಪೋ ಬಾ ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	..	೨	ಆಣೆ
ಗೋತ್ರಸೂತ್ರಶಬ (೫ನೆಯ ಆವೃತ್ತಿ)	....	೧	ಆಣೆ
ಮರುಳಸಿದ್ಧೇಶ್ವರಸ್ತೋತ್ರ	...	೧	ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	....	೧	ಆಣೆ
ಪಂಚವಿಂಶತಿ ಪ್ರಶ್ನೆಪ್ರಕಾಶ (೩ನೆಯ ಆವೃತ್ತಿ)	...	೧	ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಲಿ (೮ನೆಯ ಆವೃತ್ತಿ)	....	೧	ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	೧	ಆಣೆ
ಬಸವಾದಿಪ್ರತಿಷ್ಠಾಪದ್ಧತ್ತ್ವದರ್ಪಣ (೪ನೆಯ ಆವೃತ್ತಿ)	....	೨	ಆಣೆ
ಶ್ರೀರೇಣುಕಾಚಾರ್ಯಶತಕ(೩ನೆಯ ಆವೃತ್ತಿ)	....	೨	ಆಣೆ
ಪಂಚಾಚಾರ್ಯಪ್ರಭಾಕರ	....	೨	ಆಣೆ
ಶ್ರೀಗುರುತತ್ತ್ವಸದಗಳು	....	೨	ಆಣೆ
ಶ್ರೀರುದ್ರಮುನಿಶಿವಾಚಾರ್ಯರತಕ	....	೨	ಆಣೆ
ವೀರಶೈವಮತಮಾಮಾಂಸಾ	...	೩	ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) ...	.	೩	ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	೪	ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವವಿಸ್ಫೀರಣ (೩ನೆಯ ಆವೃತ್ತಿ)	....	೬	ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	....	೬	ಆಣೆ
ವೀರಶೈವಮಹಾತ್ಮರು	....	೮	ಆಣೆ
ಬಸವಧ್ವಾಂತತಿಮಾಕರ (೩ನೆಯ ಆವೃತ್ತಿ)	....	೮	ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಷಣಮು (ತೆಲುಗು)		೪	ಆಣೆ
Speeches by Pandit Shri Kashinatha Shastri (*English*)		12	As.
ಸಿದ್ಧಾಂತಸಾರಾವಲಿ (ತ್ರಿಲೋಚನಶಿವಾಚಾರ್ಯಕೃತ)	....	೧೨	ಆಣೆ
ಶಿವಾದ್ವೈತಮಂಜರಿ (ಸಚ್ಚಿದಾನಂದಾಖ್ಯನ ೧೩೨೩ ಪುಟ)	....	೪	ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	೨	ರೂ.
ವೀರಶೈವಸಿದ್ಧಾಂತಸುಧಾಕರ	....	೨	ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	.	೧	ರೂ.
ಸಿದ್ಧಾಂತತಿಖಾಮೋಪನಿಷತ್ (ಕನ್ನಡ ಟೀಕಾಸಹಿತ)	....	೧	ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	೧	ರೂ
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ)	.	೧	ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರವು)	....	೧	ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)		೧೨	ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨	ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨	ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	....	೧೨	ಆಣೆ
ವೀರಶೈವರತ್ನ (ಮರಾಠಿ)	...	೧	ರೂ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ...	...	೩	ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	.	೧	ರೂ.
ವೀರಶೈವೈಕ್ಯಕೌಮುದಿ (ಸಂಸ್ಕೃತ) ...	..	೧	ರೂ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದೀ) ...	...	೨	ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾ ವೇ|| ಶಿರಸಿ ಗುರುಸಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನವಪಂಕಜಾತಜನಿತರ್ ಪಂಚಾಸ್ಯಸೀರಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್
ಪಂಚಾಚಾರಪರಿಯಮಕರ್ ಪರಿಲಸತ್ಪಂಚಾಕ್ಷರೀಮೋಢಕರ್ | ಪಂಚಾಚಾರ್ಯಜಗದ್ಗುರುತ್ವಮರವರ್ ಪಾಲಿಪ್ಪುದೀಲೋಕಮಂ

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು

ಸ್ಥಳವಂಗಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ. ೪ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ ನೇ ಜೂ ೧೯೩೭ಇಲ [ಸಂಚಿಕೆ ೫

ವೀರಶೈವಮಹಾತ್ಮರು.

ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರಿಂದ ಯುಗಯುಗಾಂತರಗಳಲ್ಲಿ ಸ್ಥಾಪಿತವಾಗಿರುವ ವೀರಶೈವ ಮತದೊಳಗೆ ಸ್ಥಾಚೀನಕಾಲದಲ್ಲಿ ಅನೇಕಜನ ಮಹಾತ್ಮರು ಅವತರಿಸಿ, ಅನೇಕಾನೇಕಾದ್ಭುತಲೀಲೆಗಳನ್ನಾಚರಿಸಿ ಜಗತ್ಪೂಜ್ಯರಾಗಿ ಹೋಗಿದ್ದಾರೆ. ಆ ಮಹಾತ್ಮರ ಲೀಲೆಗಳೇ ವೀರಶೈವರಿಗೆ ತಿಳಿಯದಾಗಿವೆ. ಈ ವಿಷಯವನ್ನು ಸರ್ವರೂ ತಿಳಿದುಕೊಂಡು ಧನ್ಯರಾಗಬೇಕೆಂಬ ಉದ್ದೇಶದಿಂದ ವೇ|| ಪಂ|| **ಶ್ರೀಕಾಶೀನಾಥಶಾಸ್ತ್ರಿಗಳವರು** ಮೇಲ್ಕಂಡ ಗ್ರಂಥವನ್ನು ಸೂತನನಾಗಿ ರಚಿಸಿದ್ದಾರೆ. ಈ ಗ್ರಂಥವು ಚಾರಿತ್ರಿಕದೃಷ್ಟಿಯಿಂದ ಬರೆಯಲ್ಪಟ್ಟಿರುವುದರಿಂದ ಇದರ ಮಹತ್ತ್ವವು ವರ್ಣನಾತೀತವಾಗಿದೆ ಈ ಗ್ರಂಥದಲ್ಲಿ— **ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರ** ಸಂಕ್ಷಿಪ್ತಚರಿತ್ರೆಯು ಬರೆಯಲ್ಪಟ್ಟಿರುವಲ್ಲದೆ, **ದೂರ್ವಾಸವಮಹರ್ಷಿ, ಸದಾನಂದಶಿವಯೋಗಿ, ಅನಂದಲಿಂಗ ಶಿವಾಚಾರ್ಯ, ಭೂಕೈಲಲಿಂಗಶಿವಾಚಾರ್ಯ, ಶಿವಯೋಗಿಶಿವಾಚಾರ್ಯ, ಚಿದ್ಭವನಶಿವಾಚಾರ್ಯ, ಮಲ್ಲಿಕಾರ್ಜುನಶಿವಾಚಾರ್ಯ, ಹಲಾಯುಧ, ಮಂಚನಪಂಡಿತಾರಾಧ್ಯ, ಶ್ರೀಪತಿಪಂಡಿತಾರಾಧ್ಯ, ಉದ್ಭಟಾರಾಧ್ಯ, ಹಿಹಿಲಾರಾಧ್ಯ, ಕೆರೆಯಪದ್ಮರಸ, ನಿಜಗುಣಶಿವಯೋಗಿ, ಮಲ್ಲಿಕಾರ್ಜುನಶಿವಯೋಗಿ,** ಇವರೇ ಮೊದಲಾದ ಮಹಾತ್ಮರ ಚರಿತ್ರೆಗಳು ಬರೆಯಲ್ಪಟ್ಟಿವೆ. ಆದುದರಿಂದ ಗುರುಭಕ್ತಿಶೀಲರಾದ ಸಮಸ್ತ ವೀರಶೈವರೂ ಈ ಗ್ರಂಥವನ್ನು ತರಿಸಿಕೊಂಡು, ಓದಿನೋಡಿ ವೀರಶೈವಮತದ ಪ್ರಾಚೀನವೈಭವವನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ.

ಬೆಲೆ ೮ ಆಣೆ. ವಿ. ಪಿ. ಛಾರ್ಜು ಪ್ರತ್ಯೇಕ.

ವೀರಶೈವರತ್ನ.

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾಗಿರುವ ಈ ಮೇಲ್ಕಂಡ ಗ್ರಂಥವು **ಮಹಾರಾಷ್ಟ್ರದೇಶದ** ವೀರಶೈವರ ಉದ್ಧಾರಕ್ಕೋಸ್ಕರ **ಮಹಾರಾಷ್ಟ್ರಭಾಷೆಯಲ್ಲಿ** ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದ ಯೋಗ್ಯತೆಯು ಅಸಾಧಾರಣವಾಗಿರುವದು ಆದುದರಿಂದಲೇ ಈ ಗ್ರಂಥವು ಸ್ವಲ್ಪದಿವಸಗಳಲ್ಲಿಯೇ ಕನ್ನಡಭಾಷೆಯಲ್ಲಿ ೫ ಸಾರೆ ಮುದ್ರಿಸಲ್ಪಟ್ಟಿರುವದು. ಈ ಗ್ರಂಥದ ಸಮಗ್ರಸ್ವರೂಪವನ್ನು ಮಹಾರಾಷ್ಟ್ರದೇಶದವರಿಗೆ ತಿಳಿಯುವಂತೆ ಮಾಡಬೇಕೆಂದು ಅನೇಕಜನ ಮತಾರಾಷ್ಟ್ರದೇಶದ ವೀರಶೈವರು ಪ್ರಾರ್ಥಿಸಿಕೊಂಡಪ್ರಕಾರ, ವಿಶೇಷ ಪ್ರಯತ್ನವನ್ನು ವ್ಯಯಮಾಡಿ ಇದನ್ನು ಈಗ ಮರಾಠಿಭಾಷೆಯಲ್ಲಿ ಬಹುಸುಂದರವಾಗಿ ಮುದ್ರಿಸಿದ್ದಾಗಿದೆ. ಈ ಗ್ರಂಥದಲ್ಲಿ ಅತ್ಯಂತಮಹತ್ತ್ವದ ೩೦ ಫೋಟೋಗಳು ಸೇರಿಸಲ್ಪಟ್ಟಿರುವುವು. ಇವುಗಳಲ್ಲಿ ಅನೇಕ ಪ್ರಾಚೀನಶಾಸನಗಳ ಫೋಟೋಗಳವೆ. ಮಹಾರಾಷ್ಟ್ರದೇಶದ ವೀರಶೈವರ ಉದ್ಧಾರಕ್ಕಾಗಿ ಅವಿರ್ಭವಿಸಿರುವ ಈ ಗ್ರಂಥರತ್ನವನ್ನು ಮಹಾರಾಷ್ಟ್ರಭಾಷೆಯನ್ನುಬಲ್ಲವರೆಲ್ಲರೂ ಅವಶ್ಯವಾಗಿ ತರಿಸಿಕೊಂಡು ಸಂಪೂರ್ಣವಾಗಿ ಓದಿನೋಡಿ ಈ ಗ್ರಂಥದಲ್ಲಡಕ್ಕಿರುವಾಗಿರುವ ಅನೇಕಾನೇಕಮಹತ್ತ್ವವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ

ಬೆಲೆ ೧ ರೂ. ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್—
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ.

ಧಾರವಾಡ ಡಿ|| ಗವರ್ನ್ಮೆಂಟ ಬೆಟಗೇರಿ ನಿವಾಸಿಗಳಾದ ಮಾ|| ರಾ|| ವೀರಪ್ಪ ಗೋಲಣ್ಣನವರ ಇವರ ಪುತ್ರ ಚಿ|| ಕರಿಯಪ್ಪನಿಗೂ ಸೂಡಟೂರಿನಲ್ಲಿರುವ ಮಾ|| ರಾ|| ಕಳಸಾಪುರದ ಅಡಿವಪ್ಪನವರ ಪುತ್ರಿ ಚಿ|| ಸೌ|| ಪಾರ್ವತವ್ವನಿಗೂ, ಮತ್ತು ಮೇಲ್ಕಂಡ ಮಾ|| ರಾ|| ಗೋಲಣ್ಣನವರ ವೀರಪ್ಪನವರ ಪುತ್ರ ಚಿ|| ಸೌ|| ಲಕ್ಷ್ಮಪ್ಪನಿಗೂ ಮಾ|| ರಾ|| ಬಸನಗೌ ಪರಪ್ಪನವರ ಪುತ್ರ ಚಿ|| ಅಂದಾನಪ್ಪನಿಗೂ ವಿವಾಹಮಹೋತ್ಸವವು ನೆರವೇರಿದ ಸಮಯದಲ್ಲಿ ವಧೂವರರಿಂದ ಪ್ರಭಾವೋಪಣಕ್ಕಾಗಿ ತೆಗೆಯಿಸಿದ **4** ರೂ. ಗಳು ಮಾ|| ರಾ|| ಹಿರೇಮನೆ ಪಾಟೀಲ ನೀಲಪ್ಪಗೌಡರ ದ್ವಾರಾ ಕಲ್ಪಿರುತ್ತವೆ.

ಧಾರವಾಡ ಡಿ|| ರಾಣೇಬೆನ್ನೂರು ಟವನ್ಶಿಪ್ಪಲ್ಲಿರುವ ಮಾ|| ರಾ|| ಬಸಪ್ಪ ಕಾರುವತ್ತೆಪ್ಪ ಬದಾಮಿ ಇವರ ಪುತ್ರ ಚಿ|| ಸೌ|| ಚೆನ್ನಬಸವ್ವನಿಗೂ ಹೆಲಗೇರಿಗ್ರಾಮದ ಮಾ|| ರಾ|| ಚನ್ನವೀರಪ್ಪ ಪಟ್ಟಣಶೆಟ್ಟಿ ಇವರ ಪುತ್ರ ಚಿ|| ಶರಣಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಪ್ರಭಾವೋಪಣಕ್ಕೋಸ್ಕರ ಉಭಯರಿಂದ ಸಮರ್ಪಿಸಲ್ಪಟ್ಟ **2** ರೂ. ಗಳು ರಾಣೇಬೆನ್ನೂರು ಹಿರೇಮಠದ ವೇ|| ಶಿವಲಿಂಗಪ್ಪಯ್ಯನವರ ದ್ವಾರಾ ಕಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಕಾಂಗ್ರೆಸ್ಸು ಹಿಂದೂಗಳ ಪ್ರತಿನಿಧಿಯೆನಿಸಲಾರದು

ಹಿಂದೂಮಹಾಸಭೆಯ ವರ್ಕಿಂಗ್‌ಕಮಿಟಿಯು ಕಳೆದ 23 ನೆಯ ತಾರೀಖಿಗೆ ನಿನ್ನ ಸಾಯಂಕಾಲ ಸೇರಿ, ಕಾಂಗ್ರೆಸ್ಸು ಕೋಮುವಾ ಒಪ್ಪಂದಕ್ಕಾಗಿ ಮುಸ್ಲಿಂ ಲೀಗಿನೊಡನೆ ನಡೆಯಿಸುತ್ತಿರುವ ಸಂಧಾನವನ್ನು ಕುರಿತು ಒಂದು ನಿರ್ಣಯವನ್ನು ಮಾಡಿತು. ಕಾಂಗ್ರೆಸ್ಸು **ಇಡೀ** ಜನಾಂಗದ ಪ್ರತಿನಿಧಿಯಾಗಿರಬೇಕೇ ಹೊರತು ಕೋಮುವಾರು ಜಗಳವನ್ನು ಪರಿಹರಿಸಲು ಯಾವುದೇ ಕೋಮಿನ ಪ್ರತಿನಿಧಿಯಾಗಿ ನಿಂತು ಕೆಲಸಮಾಡಲು ಸಾಧ್ಯವಿಲ್ಲ. ಹಿಂದೂಗಳ ಪ್ರಾತಿನಿಧ್ಯವನ್ನು ವಹಿಸುವ ಹಕ್ಕು ತನಗಿದೆಯೆಂದು ಹೇಳುವುದನ್ನು ಈ ಸಭೆಯು ಒಪ್ಪುವುದಿಲ್ಲ. ಆದ್ದರಿಂದ ಹಿಂದೂಗಳ ಹೆಸರಿನಲ್ಲಿ ಕಾಂಗ್ರೆಸ್ಸು ಮುಸಲ್ಮಾನರೊಡನೆ ಯಾವ ಒಪ್ಪಂದಕ್ಕೂ ಬರಲಾಗದೆಂದು ಈ ನಿರ್ಣಯವು ಸೂಚಿಸುತ್ತದೆ. ಹಾಗೆ ಯಾವುದಾದರೂ ಒಪ್ಪಂದವನ್ನು ಮಾಡಿಕೊಂಡರೆ ಅದನ್ನು ಪಾಲಿಸಬೇಕೆಂಬ ನಿರ್ಬಂಧವು ಹಿಂದುಗಳ ಮೇಲೆ ಬೀಳುವುದಿಲ್ಲ ಮತ್ತು ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಆಗುಬಹುದಾದ ಒಪ್ಪಂದವನ್ನು ಹಿಂದೂ ಮುಸ್ಲಿಂ ಒಪ್ಪಂದವೆಂದು ಪರಿಗಣಿಸಿ ಅದರ ಆಧಾರದ ಮೇಲೆ ಆಡಳಿತವಲ್ಲಿ ಬದಲಾವಣೆಗಳನ್ನು ಮಾಡಕೂಡದೆಂದು ಸರ್ಕಾರದವರನ್ನು ಎಚ್ಚರಿಸಲಾಗಿದೆ

ಚಹಾ (ಟೀ) ದೇವಿಯ ಚೆಲ್ಲಾಟ

(ಮುಂದುವರಿದುದು)

ಲೇಖಕರು—ಶ್ರೀಗುರುವೀರಾರಾಧ್ಯ ಬ್ಯಾಚಾರ್ಯರು, ಬ್ಯಾಡಗಿ
ಶ್ರೀಪಟ್ಟಾಧ್ಯಾಶ್ರಯ, ಬೆಳಮಕಿ

(ಕಪ್ಪು ಬಸಿಗಳು)

ಕಪ್ಪು ಬಸಿಗಳು ಚೀನದೇಶದಲ್ಲಿ ಕಜಿನಿಂದ ತಯಾರಿಸಲ್ಪಟ್ಟಿರುವೆವೆಂದರಿಂದ ಇವುಗಳಲ್ಲಿ ಯಾವ ದೋಷವೂ ಇಲ್ಲವೆಂದು ತಿಳಿದು ಕೆಲವರು ಉಣ್ಣುವದಕ್ಕೂ ಕುಡಿಯುವದಕ್ಕೂ ಇವುಗಳನ್ನೆ ಉಪಯೋಗಿಸುತ್ತಾ ಪುತ್ತು ಪೌಚಕ್ಕೆ ಹೋಗುವಾಗ ಇವುಗಳಲ್ಲಿ ನೀರು ತುಂಬಿಕೊಂಡು ಹೋಗುತ್ತಾರೆ ಆಮೇಲೆ ಆಪತ್ತಿಗಳನ್ನು ತೊಳೆದು ಪುನಃ ಚಹಾ ಕುಡಿಯ ವದಕ್ಕೆ ಉಪಯೋಗಿಸುವರು ಕೆಲವರು ದೇವರ ಪೂಜೆಯ ಸಮಯ ಸಹ ಇವುಗಳನ್ನೆ ಉಪಯೋಗಿಸುವರು ಕಾಯಿಹಲ್ಲೆ ತಿಂಬಿಡುವದಕ್ಕೂ ಕಪ್ಪು, ಉಪ್ಪಿನಕಾಯಿಗೂ ಕಪ್ಪು, ಅಡಿಗೆ ಮನೆಯಲ್ಲಿಯೂ ಕಪ್ಪು, ದೇವ ಪಸೆಯಲ್ಲಿಯೂ ಕಪ್ಪು, ಒಳಗೂ ಕಪ್ಪು, ಹೊರಗೂ ಕಪ್ಪು, ಸ್ತ್ರೀಯರಿಗೂ ಕಪ್ಪು, ಪುರುಷರಿಗೂ ಕಪ್ಪು, ಹಿಗೆ ಎಲ್ಲವೂ ಕಪ್ಪೇ ಕಪ್ಪು (ಕಲುಕವು) ಆ ಕಪ್ಪು ಒಸಗಳು ಹೊಸದೊರೆದಿದ್ದಾಗ ದ ಹೊಳಪು ಸ್ವಲ್ಪ ತಪ್ಪು, ಸನ್ನ ದೊರದ ಮೇಲೆ ತಯಾರಿಸಲ್ಪಡುತ್ತವೆ ಮನುಷ್ಯರದ ವಿಜ್ಞಾನ ಪ್ರತ್ಯಕ್ಷನ್ನ ಹೇಗಿಗೆ ಬೆಳೆದಿ ಇಲ್ಲರೆ ಹಾಗಾಬಾರದೆಯಾಯಿ ತೆಂದು ಆನ್ನಾ ತಿಸ್ಸೆರೆ ಜ್ಞಾಪಕ ಈ ಕಪ್ಪು ಹೊರ ಬಳಕೆಯಾದರೆ ಪುನಃ ಹೊಳೆಪ ಉಪಯೋಗಿಸುವರು ಇಂ ಎಧರದಕ್ಕಲ್ಲಿ ವಿತ್ತ ವಿದ್ಯಾಕ್ಕಿಂದಿನ ಕಪ್ಪು ಬಸಿಗಳ ಕವಲು ಕಪ್ಪು ಬಸಿಗಳ ಜೀವನಕ್ಕೆ ಅಣುವು ಜೀವಿಗಿರುವದ ಪರಿಸರ ಕ್ರಿಯ ಬಣ್ಣವು ಕಪ್ಪಾಗಿರುತ್ತದೆ

ಚಹಾದಿಂದುಂಟಾಗುವ ಸಾಂಸರ್ಗಿಕರೋಗಗಳು

ಚಹಾ ಅಂಗಡಿಯಲ್ಲಿ ಒಬ್ಬ ವ್ಯಕ್ತಿಯೋಗಿಯು ಹೋದರೆ ಆತನಿಗೆ ಕಪ್ಪು ಬಸಿಗಳಲ್ಲಿ ಚಹಾ ತುಂಬಿಕೊಡುವರು ಆವನು ಕುಡಿದ ಮೇಲೆ ಒಂಗು ಬಕೆಟ್ಟಿನಲ್ಲಿದ್ದ ನೀರೊಳಗೆ ಅದ್ದಿ ಇಡವರು ಮತ್ತೊಬ್ಬ ಕುಷ್ಠರೋಗಿಯು ಬಂದರೆ ಅವನಿಗೂ ಅದೇ ಕಪ್ಪು ಬಸಿಗಳನ್ನು ಕೊಡುವರು ಅವನ ಕುಡಿದಿಟ್ಟ ಮೇಲೆ ಮೊದಲಿನ ಒಕೇಟಿನಲ್ಲಿದ್ದ ನೀರೊಳಗೆ ಅದ್ದಿ ಇಡುವರು ಹೀಗೆ ಹೊತ್ತು ಮುಳುಗುವ ವರೆಗೂ ಹೀಗೂ ಹೀಗೂ ಹತ್ತಿ ದವರು ಬೆಲಾಭ ಹತ್ತಿದವರು ಗಾಂಡುರೋಗಿಗಳು ಕುಡಿದು ಇಟ್ಟಿರುವ ಕಪ್ಪು ಬಸಿಗಳನ್ನು ಆದೇ ಒಂದು ಬಕೆಟ್ಟಿನಲ್ಲಿದ್ದ ನೀರೊಳಗೆ ಅದ್ದಿ ಪಿಡಾಯಿ ಇಡುವ ಅಂಗಡಿಗಳು ಎಷ್ಟೋ ಇರುವವು ಇಂದ ಅಂಗಡಿಗಳಲ್ಲಿ ಚಹಾ ಉಪಯೋಗಿಸುವದರಿಂದ ಎಂಥಕಠಿಣ ಕಠೋರಿಯಾದೂರ ಅಲ್ಪಕಾಲದಲ್ಲಿಯೆ ಮಹಾವ್ಯಾಧಿಗಳಿಗಾಗುವದಂದು ಸಾರಿಸಾರಿ ಹೇಳಬಹುದು

ಧರ್ಮಶಾಲೆಗೆ ಬದಲಾಗಿ ಗರ್ಮಶಾಲೆ

ಪೂರ್ವಕಾಲದಲ್ಲಿ ಪರಸ್ಥಳಗಳಿಂದ ಬರುವ ಅನಾಥರಿಗೂ ಸಾಧುಸನ್ಯಾಸಿಗಳಿಗೂ ವಾಸಮಾಡುವದಕ್ಕಾಗಿ ಪ್ರತಿಯೊಂದು ಗ್ರಾಮದಲ್ಲಿ ಸಾವಿರಾರು ರೂಪಾಯಿಗಳ ಖರ್ಚಿನಿಂದ ಧರ್ಮಶಾಲೆಗಳನ್ನು ಕಟ್ಟಿಸುವ ಪದ್ಧತಿಯು ಇತ್ತು ಅವುಗಳನ್ನು ನಾವು ಈಗಲಾದರೂ ನೋಡು ತ್ತೇವೆ ಹಿಂದಿನವರು ಕಟ್ಟಿಸಿದ ಧರ್ಮಶಾಲೆಗಳನ್ನು ಕೆಡವಿ ಈಗಿನ ಮಹನೀಯರು ಗರ್ಮಶಾಲೆ (ಚಹಾ ಅಂಗಡಿ) ಗಳನ್ನು ಕಟ್ಟಿಸುವರು ತಿನಿಸಿವ ಎಂಥಕಾಲ ಒದಗಿತು! ನಾನೊಂದುಸಾರಿ ಕಾರ್ಯಾಂತರದಿಂದ ಬೇರೊಂದು ಗ್ರಾಮಕ್ಕೆ ಹೋಗಿದ್ದೆನು ಪ್ರಾಸಂಗಿಕವಾಗಿ ಒಬ್ಬ ಗೃಹಸ್ಥನನ್ನು ಕುರಿತು ಈ ಗ್ರಾಮದಲ್ಲಿ ಚಹಾದ ಅಂಗಡಿಗಳು ಎಷ್ಟು ಇರುವವೆಂದು ಕೇಳಿದೆನು ಅದಕ್ಕೆ ಆ ಗೃಹಸ್ಥನು ಈ ಗ್ರಾಮದಲ್ಲಿ ಮೂರುಸಾವಿರ ಚಹಾ ಅಂಗಡಿಗಳಿರುವವೆಂದು ಉತ್ತರಕೊಟ್ಟನು. ಅದು ಹೇಗೆ ಎಂದು ನಾನು ಪುನಃ ಆಶ್ಚರ್ಯಯುತನಾಗಿ ಕೇಳಲು ಈ ಗ್ರಾಮದಲ್ಲಿ ಮೂರುಸಾವಿರ ಮನೆಗಳಿವೆ ಎಲ್ಲ ಮನೆಗಳೂ ಚಹಾ ಅಂಗಡಿಯಂತೆಯೇ ಆವೆ ಎಂದು ಉತ್ತರವನ್ನುತ್ತನು ಪೂರ್ವ ಕಾಲದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ, ಅರಣ್ಯದಲ್ಲಿಯೂ, ಪರ್ವತಗಳಲ್ಲಿಯೂ, ತೀರ್ಥಯಾತ್ರೆಗಳಲ್ಲಿಯೂ ವಿಶ್ರಾಂತಿಗಾಗಿ ಅನೇಕ ಧರ್ಮಶಾಲೆಗಳನ್ನು ಕಟ್ಟಿಸಿ ಅತುಲವಾದ ಕೀರ್ತಿಯನ್ನು ಪಡೆದು ಪುಣ್ಯಲೋಕವನ್ನು ಹೊಂದಿದವರ ಜನ್ಮವೇ ಸಾರ್ಥಕವು ಈಗಿನ ಕಾಲದಲ್ಲಿ ಊರು ಊರುಗಳಲ್ಲಿಯೂ, ಗುಡ್ಡಗಳಲ್ಲಿಯೂ, ತಿರುಪ್ಪತ್ತಿಯಲ್ಲಿಯೂ, ತೀರ್ಥಯಾತ್ರೆಗಳಲ್ಲಿಯೂ ಅನೇಕ ಗರ್ಮಶಾಲೆ (ಚಹಾಅಂಗಡಿ) ಗಳನ್ನು ಕಟ್ಟಿಸಿ ಸಾಪದ ಕೀರ್ತಿಗಳನ್ನು ಹರಡುವ ಮಾನವರಿಗೆ ಯಮನು ಯಾವ ಶಾಲೆಯನ್ನು ಕಟ್ಟಿಸಿರುವನೋ ತಿಳಿಯದಾಗಿದೆ

ಈಗಿನ ಕಾಲದಲ್ಲಿ ಅಗ್ನಿಮುಹೂರ್ತಗಳನ್ನು ಮಾಡುವದು ಬಹು ಸುಲಭ

ಕೆಲವು ಕಲಿಗಳ ಹಿಂದೆ ವಿವಾಹ ಮೊದಲಾದ ಕಾರ್ಯಗಳಲ್ಲಿ ಬಂದೆ, ಬೆರ್ಚ್, ಬಿರು, ಪುರಿ ಮೊದಲಾದ ಜೊಜನಕ್ಕಾಗಿ ವಿಶೇಷವಾದ ಬರ್ಚ್ ಬರುತ್ತಿತ್ತು ಅವುಗಳು ಈಗಿನವರಿಗೆ ಸೇರುವದಿಲ್ಲ ಸಪ್ತ ಕೃತ್ಯಮವಾದ ಎಂಜ್ಯಸಾರ್ಥಗಳಲ್ಲಿದ್ದು ಚಹಾ ಒಂದಿಷ್ಟಿದ್ದರೆ ಬೇ ತೆಗೆ ನಿಸೆನು ಹೇಳುತ್ತೇ! ಇವ ನಂಥ ಲಗ್ನಮಾಡಿಸಕೃತ್ಯವನು ಒಂದು ಕಪ್ಪುಚಹಾ ಸಹ ಇಲ್ಲವೆಂದಮೇಲೆ ಇದು ಏನು ಲಗ್ನ! ಗತಿಗೆಡಿ ಲಗ್ನ ಎಂದು ಮಗಿಲಿಗೆ ಮುಖಮಾಡಿ ಕೂಗುವರು ಈಗಿನ ವಿವಾಹದಿ ಕಾರ್ಯಗಳಲ್ಲಿ ಎಂದು ದಿವಸಕ್ಕೆ ನೂರು ಎಂಟುಸಾರೆ ಸುಡುಸುಡುವ ಚಹಾ ಹಾಕಿದರೆ ಸಾಕು ಇಂದ ಲಗ್ನವು ಹಂದೆಯೂ ಆಗಿಲ್ಲ ಮುಂದೆ ಯಾದೂ ಆಗಲಿಕ್ಕಿಲ್ಲವೆಂದು ಹಾಸಿ ಹರಿಸುವರು ಇವರು 'ಕಾಲಾಕ್ಕಳುಟಿಲಾಗಿತ' ಎಂಬಂತೆ ಪೂರ್ವದಲ್ಲಿ ಯಾವನು ಧರ್ಮಾತ್ಮನಾಗಿ ಸತ್ಯವಾದಿಯಾಗಿದ್ದನೋ, ಅಂಥ ಸತ್ಪುರುಷನ ಅಗ್ನಿಹೋತ್ರವನ್ನು ಯಾರೂ ವಿಚಾರಿಸದೆ ಸ್ತಬ್ಧರಾಗಿದ್ದಿಲ್ಲ ಈ ಸುಧಾರಿಸಿದ ಕಾಲದಲ್ಲಿ ಯಾವನು ಎಟು ಹತ್ತು ಚಹಾದ ಅಂಗಡಿಗಳನ್ನಿಟ್ಟಿರುವನೋ ಅವನು ಬೇರೆಲವರಿಗಾಗಿ ಮಾಡಿಸುವನೋ ಅವನೆ ಸತ್ಪುರುಷನು, ಅವನೇ ದೊಡ್ಡವನು, ಅವನು ಭೂವರ್ದಿಕ್ಕಿಗೆ ಸಲ್ಲಿಸುವಂದರೂ ಹಾಜೆ ಎನ್ನುವರು ಪಶ್ಚಿಮ ದಿಕ್ಕಿಗೆ ಪೂರ್ವವೆಂದರೂ ಹಾಜೆ ಎನ್ನುತ್ತ ಹಗಲಿರುಳು ನ್ಯಾಯಯುತ ಬಾಗಿಲು ಕಾಯುತ್ತ ಬಿದಿರುವರು ಇಂದ ನರಾಧಮರಿಗೆ ಯಮಧರ್ಮನು ಯಾವ ಶಾಸನ ವನ್ನು ವಿಧಿಸುವನೋ ತಿಳಿಯದಾಗಿದ ಒಂದು ಕಪ್ಪು ಚಹಾ ಹಾಕಿ ಮೇಲೆ ನಾಲ್ಕುಕಾಳು ಕಾರದ ಅವಲಕ್ಕಿ ಉದುರಿಸಿದರೆ ಕೊರ್ಟು ಕಚೇರಿಯವರಿಗೂ ಚಹಾ ಕುಡಿಸಿದವನಿಗೆ ವಕೀಲಿ ದೊರೆಯುವದು, ಒಂದು ಕಪ್ಪು ಚಹಾ ಕುಡಿಸಿದರೆ ತೊರಿಸಿದವನನ್ನು ಹೊಡೆದು ಬರುವರು ಮತ್ತೊಂದು ಕಪ್ಪು ಚಹಾ ಕುಡಿಸಿದರೆ ಕಳ್ಳ ಮಾಡಿತಿದರು ಕೊಡ ವರು ಡಬ್ಬಲ್ ಕಪ್ಪು ಚಹಾ ಕುಡಿಸಿದರಂತೂ ಕೋರ್ಟುಕಚೇರಿಗಳಲ್ಲಿ ಸುಳ್ಳು ಸಾಕ್ಷಿ ನುಡಿಯುವರು ಯಾವನು ತನ್ನ ಮನೆಯಲ್ಲಿ ಹೆಚ್ಚಾಗಿ ಕಪ್ಪು ಬಸಿಗಳನ್ನಿಟ್ಟುಕೊಂಡಿರುವನೋ ಅವನೇ ದೊಡ್ಡ ಶ್ರೀಮಂತನು ಚಹಾ ಕುಡಿಸಿದವನೇ ದೇವರು ಚಹಾ ಕುಡಿಸಿದವನೆ ಬಂಧು ಬಳಗದವನು. ಚಿಹಿ ಕೊಟ್ಟವನೇ ದಾನಶೂರನು ಬಹು ಉದಾರಿಯು

"ಚಹಾದೇನಾ ಮಪಾದೇಶಾ ಚಹಾದೇವೀ ಸದಾರ್ಚಿತಾ |
ಚಹಾಪಾತ್ರಾಯ ಹರಾ ನಮ್ಯಃ ಶ್ರೀಕೃಷ್ಣ ಜಯೆಷ್ಟೆ ನಮೋನಮಃ ॥"

ಈಗಿನ ಕಾಲದಲ್ಲಿ ಸುಧಾರಕರೆಂದರೆ ಮುಂದಲೆಯ ಮೇಲೆ ಆನೆಯ ಮುಂಗಾಲಷ್ಟು ಕೂದಲುಗಳನ್ನು (ಕ್ರಾಪ್) ಬಿಟ್ಟುಕೊಂಡು ಬಾಯಿಯಲ್ಲಿ ಬೀಡಿ ಸಿಗರೇಟ್ ಹಿಡಿದುಕೊಂಡು ಚಹಾ ಅಂಗಡಿ ಕಟ್ಟಿಯ ಮೇಲೆ ಕುಳಿತವನೇ ಸುಧಾರಕನು ಅಂಥವನೇ ನ್ಯಾಯಾಧೀತನು ಅವನೇ ಹೆದ್ದರೆಯ ದೊಡ್ಡಪ್ಪನು ಅವನು ಹೇಳಿದಂತೆಯೇ ಕೇಳುವರು ಹೊಲಸಿಗೆ ನೋಣಗಳು ವಿಶೇಷವಾಗಿ ಮುತ್ತುವಂತೆ ಹುಸಿಲಿರುಳು ಅವನು ಬೆನ್ನು ಬಡಿದೆ ತಿರುಗುವರು. ಈಗ ಯಾವನೆ ಮನೆಯಲ್ಲಿ ಕಪ್ಪು ಬಸಿಗಳಿಲ್ಲವೋ ಮತ್ತು ಚಹಾ ಕುಡಿಯುವದಿಲ್ಲವೋ ಅವನು ಅಶಿಕ್ಷಿತನು, ಅವನು ಗತಿಗೇಡಿಯು, ಜನರು ಅವನನ್ನು ಹೀಣಾದಂತೆ ತಿಳಿದು ದೂರ ಸರಿಯುವರು.

ಎಲ್ಲರಿಗೂ ಚಹಾ ಮೊದಲು ಬೇಕು.

ಚಹಾ ಎಂಬ ಭೂತವು ಇತ್ತಲಾಗಿ ಸರ್ವರಲ್ಲಿಯೂ ವಾಸಮಾಡಿಕೊಂಡಿದೆ ಕೆಲವು ಕಡೆಯಲ್ಲಿ ಗುರುವಂತೀ ಯರಿಗೂ ಸನ್ಯಾಸಿಗಳಿಗೂ ಚಹಾ ಮೊದಲು ಬೇಕು. ಚಹಾ ಇಲ್ಲದೆ ಇವರ ಶಿವಪೂಜೆಯೇ ನಡೆಯುವದಿಲ್ಲ. ಮೊದಲು ಯಾವ ಪೆಟ್ಟಿಗೆಯಲ್ಲಿ ವಿಭೂತಿ, ರುದ್ರಾಕ್ಷಿ, ಘಂಟಾ ಮೊದಲಾದ ಶಿವಪೂಜಾ ಸಾಮಾನುಗಳು ತಿಸುತ್ತಿದ್ದವೋ ಅದೇ ಪೆಟ್ಟಿಗೆಯಲ್ಲಿ ಈಗ ಸಿಂಗಲ್ ಕಪ್ಪು, ಪ್ಲೇಟು ಮೊದಲಾದ ಅಪವಿತ್ರವಸ್ತುಗಳು ಸಿಗುವವು ಕೆಲಕೆಲವು ನಾಮಧಾರಿ ಗುರುಗಳಲ್ಲಿಯೂ ಸನ್ಯಾಸಿ ಗಳಲ್ಲಿಯೂ ದೊರೆಯುವವು ಧರ್ಮಭವಿಷ್ಯಾನಿಗಳೇ! ಇನ್ನಾದರೂ ಈ ಚಹಾ ಎಂಬ ವಿಷಾಭೂತವನ್ನು ಹೊಡೆದೋಡಿಸಿ ದೇಶದ ಐಶ್ವರ್ಯವನ್ನೂ, ಬಲವನ್ನೂ ಮಾನವನ್ನೂ ಕಾಪಾಡಿಕೊಳ್ಳಲು ಪ್ರಯತ್ನಿಸಿರಿ ಇಲ್ಲವಾದರೆ ಚಹಾ ಎಂಬ ಮಹಾರಾಕ್ಷಸಿಯು ಹಿಂದೂ ದೇವಿಯನ್ನು ತಿಂದು ತೇಗದೆ ಬಿಡಬಾರದು ಕೆಲಕೆಲವು ಕಡೆಯಲ್ಲಿ ಚಹಾ ದೇವಿಗಾಗಿ ಹಲವರು ತಮ್ಮಮನೆ ಧನಗಳನ್ನಷ್ಟಿಸಿ ಕಾರ್ಪೊರೇಷನ್‌ಗಳಾಗಿ ಚಹಾ ಚಹಾ ಎಂದು ಜಪಿಸುತ್ತ ಕಣ್ಣು ಮುಚ್ಚಕೊಂಡು ಕೂತಿರುವರು ಕೆಲವರು ತಮ್ಮ ಹಿರಿಯರು ಗಳಿಸಿದ ಆಸ್ತಿ ಪಾಸ್ತಿಗಳನ್ನೆಲ್ಲ ಚಹಾ ದೇವಿಗೆ ಆಹುತಿಕೊಟ್ಟು ಕಡೆಗೆ ಕೈಯಲ್ಲಿ ಪಂಟೆಯನ್ನು ತೆಗೆದುಕೊಂಡು ಜೋಗುಮ್ಮನಂತೆ 'ಛಿಕ್ಷಾಂದೇಹಿ' ಎಂದು ತಿರುಗುವರು ಹಲವರು ಇದೇ ಚಹಾ ಅಂಗಡಿಗಳಿಗಾಗಿ ಉಚ್ಚಕ್ಕು ಕಪ್ಪು ಬಸಿಗಳನ್ನು ತೊಳೆಯುತ್ತ ಕಾಲಹರಣಮಾಡುವರು ಕೆಲವರು ಇದೇ ಚಹಕ್ಕಾಗಿ ಸರ್ವಸ್ವವನ್ನೂ ಹಾಳುಮಾಡಿಕೊಂಡು ಹೊಟ್ಟೆಗೆ ಗತಿಯಿಲ್ಲದೆ ಜನರ ರಲ್ಲಿ ಹೀಜಾ ಹುಜಾ ಎನ್ನಿಸಿಕೊಳ್ಳುತ್ತ ಹುಚ್ಚರಾಯಿಯಂತೆ ತಿರುಗುತ್ತಿರುವರು ಚಹಾದೇವಿ! ನೀನೇ ಧನ್ಯಳು! ಮೂಸತ್ತೆರಡುಕೋಟಿ ದೇವತೆಗಳನ್ನೂ ಮನುಮನಿಗಳನ್ನೂ ಮೂಲೆಗೊಟ್ಟೂ ದಿಂದ ದೇವಿಯ ಮುಂದೆ ಬಂದು ನಿಂತ ನೀನೇ ಮಹಾರಾಜ್ಞಿಸಿ!

ಜಾತ್ಯಭಿಮಾನದ ಜಾಗೃತಿ

(ಬಿದವ—ನೈಜ್ಞಪಿಸೀಲ)

ಪರಮಪವಿತ್ರವಾದ ವೀರಶೈವಮತದಲ್ಲಿ ಜಾತಿ ಸಾಂಕರ್ಯದ ಹೊಲಸು ಪ್ರವೇಶಿಸುವದೆಂದು ಬಹುಜನರಿಗೆ ಭೀತಿಯಾಗಿತ್ತು ಆದರೆ ಕರುಣಿಸಿದ್ದ ಜಾತಿಗಳೇ ವೀರಶೈವಮತದಲ್ಲಿ ವಿರಾಜಿಸುತ್ತಿರುವದರಿಂದ ಸಾಂಕರ್ಯಕ್ಕೆ ಅವಕಾಶವಿಲ್ಲ ಜಾತಿತತ್ವವನ್ನು ಜಾಗೃತಿಗೊಳಿಸುವ ಕಾರ್ಯವಷ್ಟಲ್ಲಿ ಗುರುವಿಂದಲೆರು ಮುಂದಾಗಿರುವದು ಪರಮಸಂತೋಷದ ಸಂಗತಿಯಾಗಿದೆ ನಿಂದ ಕರಿಂದಲೆ ಜಗತ್ಕಲ್ಯಾಣವೆಂಬ ಮಾತು ಇದರಿಂದ ಸಿದ್ಧವಾಗುತ್ತದೆ

ಗುರುವರ್ಗದ ಮೇಲಿನ ವ್ಯೋಮಾಸುರೆಯಂತ್ಯೇ ಅಂತರಂಗದಲ್ಲಿ ಇಟ್ಟುಕೊಂಡು ಬಾಹ್ಯದಲ್ಲಿ ಜಾತಿಗಳ ಉಚ್ಚತ್ವವನ್ನು ಹೇಳುತ್ತ, ಅಥವಾ ಮತಭಾಸ್ಕರನ ಘನತೆಯನ್ನು ವಿಸ್ತರಿಸುತ್ತ 'ಭಾವಾದ್ವೈತ' ಸ್ಥಲದ ಜಾತಿ ಗೋತ್ರ-ಸೂತ್ರಗಳ ರಹಿತತ್ವವನ್ನೇ ಕ್ರಿಯಾದ್ವೈತವನ್ನಾಗಿ ಮಾಡುವ ಮಹಾಮೂರ್ಖರ ಪ್ರಲಾಪವು ಎಂದೂ ಸಾರ್ಥಕವಾಗಲಾರದು ಬಾಹ್ಯಕ್ರಿಯಾಚಾರಗಳಲ್ಲಿ ಲೌಕಿಕಪಥಕ್ಕೆ ಸಂಬಂಧಿಸಿದ್ದು ತದನುಸಾರವಾದ ಜಾತಿ ಕುಲಗೋತ್ರ ಸೂತ್ರಗಳು ಅತ್ಯವಶ್ಯವಾಗಿನಿ ಇವುಗಳನ್ನು ಮುರಿಬಿಡಿಯುವ ಸಾಮರ್ಥ್ಯವು ಯಾರಿಂದಲೂ ಸಾಧ್ಯವಿಲ್ಲ

ಗುರುವರ್ಗದ ವಿಶೇಷಾಧಿಕಾರತ್ವವನ್ನು ಸುಮವಾಗಿ ನಾಶಮಾಡುವ ದುರುದ್ದೇಶದಿಂದ ಗುರುವಿಂದಕರು ಮಾಡಬಾರದ ಕೃತಿಗಳನ್ನು ಮಾಡಿಹೋದರೂ ಅಲ್ಲಿಯೇ ಗುರುವರ್ಗದ ಪೂಜ್ಯ ಪಟ್ಟಚಕ್ರಾಧಿಕಾರಿಗಳು ಈ ಮಾನವರೂಪಿ ರಾಕ್ಷಸರಿಗೆ ದರ್ಪನಕೊಡುತ್ತ ಲಿದ್ದಾರೆ ಗುರುವರ್ಗದ ವಿರಾಡ್ರೂಪಕಶಕ್ತಿಯನ್ನು ಈ ನಿಂದೆಕಿಕಾರಗಳು ಕಣ್ಣಾನದಣಿಯುವಂತೆ ನೋಡಿ ಕೃತಾರ್ಥವಾಗಬೇಕಾಗಿತ್ತು, ಆದರೆ ಇನ್ನೂ ವಿಶಾಚಶಕ್ತಿಯ ಅವಧಿಯು ಇರುವದರಿಂದ ಅಲ್ಲಿ ಓಡಾಡಕೊಡಿಸಿನೆ. ಗುರುವಂಶೀಯರಲ್ಲದೆ ಇತರರಿಗೆ ಗುರುತ್ವವು ಪ್ರಾಪ್ತ

ವಾಗುವದಿಲ್ಲ ಗುರುವರ್ಯರಾದ ಪಟ್ಟಣಾಧಿಕಾರಿಗಳನ್ನು ಬಿಟ್ಟರೆ ಗತ್ಯಂತರವಿಲ್ಲ ಗುರುವೆಂಕಟರಂಗರೆಯನ್ನು ಹರಿದೊಗೆದು ಭಕ್ತಸ್ತೋಮವು ಮಾಹೇಶ್ವರಧರ್ಮವನ್ನು ಪಾಲಿಸಲು ಗುರುನಿಂದಕರು ಕೊಂಚಿತ್ತಾರೆ ಜನ್ಮವೆತ್ತಿ ಬಂದರೂ ಸಾಧ್ಯವಿಲ್ಲ ಗುರುವಂಶದ ಕೀರ್ತಿಯು ಗುರು ಪಟ್ಟಾಧಿಕಾರಿಗಳಿಂದ ವಿಶಾಲವಾಗಿ ಬೆಳೆಯತೊಡಗಿದೆ

ವೀರಮಾಹೇಶ್ವರರ ಗುರುತ್ವವೇ ಸರ್ವಕ್ಕೂ ಮೂಲಾಧಾರವಾಗಿ ಸಮಸ್ತ ಜಾತಿಗಳನ್ನು ಪವಿತ್ರಗೊಳಿಸಿ ವೀರಶೈವ ಮತದ ಪ್ರಾಶಸ್ತ್ಯವನ್ನು ಪ್ರಸಿದ್ಧಗೊಳಿಸುತ್ತಿರುವದು ವೀರಶೈವರಿಗೆ ಮೀರಮಾಹೇಶ್ವರರು ಪರಮ ಪೂಜ್ಯರಾಗಿ ಉಭಯವರ್ಗಗಳು ದೇಹಾತ್ಮಗಳಂತೆ ಇರುವದನ್ನು ಅಬಿಲಪ್ರಪಂಚವು ಕಾಣುವಂತಾಗಲೆಂದು ವಿನೋದನು ಹಾರೈಸುತ್ತಾನೆ

ಯಲಿವಾಳಗ್ರಾಮಸ್ಥ ಚಿಕ್ಕಮಜ್ಜೂರು ಸ್ವಾಮಿಗಳವರ ಆಗಮನ

— —

ಕುಂದಗೋಳ ತಾಲೂಕ ವೈಕಿ ಯಲಿವಾಳ ಗ್ರಾಮಸ್ಥರೆ ಶ್ರೀ॥ ಪ॥ ಬ್ರ॥ ವೀರಣಾರಿದ್ಯ ಶಿವಾಚಾರ್ಯ ಪಟ್ಟದ ಸ್ವಾಮಿಗಳು ಬೃಹದ್ಧರ ಚಿಕ್ಕ ಮಂಜೂರು ಇವರು ಆಗಮಿಸಿ ಕಳೆದ ತಿಂಗಳು ೨೧ ನೆಯ ತಾರೀಖಿನ ದಿವಸ ಶ್ರೀ ವಿರಭದ್ರೇಶ್ವರ ದೇವಸ್ಥಾನದಲ್ಲಿ ಸಾರ್ವಜನಿಕ ಸಭೆಯನ್ನು ನಿರ್ಮಾಡಿಸಿ ಧರ್ಮಗಳ ವಿಷಯವನ್ನು ಬೋಧಿಸಿದರು ಆವರು ಬೋಧಿಸಿದ ವಿಷಯ ಏನೆಂದರೆ—" ಜಗತ್ತಿನಲ್ಲಿ ಸಾವಿಲ್ಲರು ಮನುಷ್ಯ ಶರೀರವುದರಿಂದಾ ಪ್ರಾದುರ್ಭವಿಸಿದ ಬಳಿಕ ಸಾರ್ಥಕವಾದ ಕಾರ್ಯವನ್ನು ಮಾಡಬೇಕು " ಜಂತುನಾಂ ನರಜನ್ಮ ದುರ್ಲಭಂ" ಎಂಬಂತೆ ಸರ್ವ ಪ್ರಾಣಿಗಳಲ್ಲಿ ಮನುಷ್ಯ ಶರೀರವು ಬಹು ದುರ್ಲಭವಿದೆ ಪುಣ್ಯವಿಲೇಷದಿಂದ ಮಾನವ ಜನ್ಮವು ದೊರೆತಮೇಲೆ ಮೋಕ್ಷವನ್ನು ಸಂಪಾದಿಸಬೇಕು ಸರ್ವರೂ ಗುರುಭಕ್ತಿ ಶಿವಭಕ್ತಿ ವಿರತರೂ ಸದಾಚಾರಿಗಳೂ ಆಗಿ ಆವರವರ ಧರ್ಮಪ್ರಕಾರ ನಡೆದುಕೊಂಡು ಬಂದರೆ ಮೋಕ್ಷವು ಸಿದ್ಧಿಸುವದು ವ್ಯಾಸಮಹರ್ಷಿಗಳು " ಪರೋಪಕಾರಃ ಪುಣ್ಯಾಯಪಾಪಾಯ ಪರಪೀಡನಂ" ಪರೋಪಕಾರಮಾಡಿದರೆ ಪುಣ್ಯ ಬರುವುದು. ಪರರಿಗೆ ಪೀಡೆಮಾಡಿದರೆ ಬಹು ಪಾಪರಾಶಿ ರುವುದೆಂದು ನಮ್ಮಗಳ ಉದ್ಧಾರಕ್ಕೋಸ್ಕರವಾಗಿ ಆಪ್ತ ನೆಕೆಯಿಂದಿಸಿರುವರು ಈ ರೀತಿಯಿಂದ ನಡೆದು ಕೃತಾರ್ಥರಾಗಬೇಕಲ್ಲದೆ, ಅನಾಚಾರಿಗಳಾಗಿ ಕ್ರಾಂತಿಕಾರಕಕ್ಕೆ ಚಳವಳಿಗೆ ಬಿದ್ದು ಭಕ್ತಿ ಶೂನ್ಯರಾಗಿ ಹೀನಚಟುಗಳಿಗೆ ಅಂದರೆ ಚಹಾ, ಕಾಫ್ಫಿ, ಸೆಂಧಿ, ಸೆಕೆ, ಸೋಡಾ, ಗಾಂಜಾ ಬೀಡಿ ಮೊದಲಾದವುಗಳಿಗೆ ಬಿದ್ದು ಭ್ರಷ್ಟರಾಗಬಾರದು ಸರ್ವರೂ ಸ್ವಾಜಿಗಳಲ್ಲಿ ಪ್ರೇಮವುಳ್ಳವರಾಗಿ ಸಾರ್ಮಾರ್ಥ ತತ್ವವನ್ನೇ ಮುಖ್ಯವೆಯ್ಯವಾಗಿಟ್ಟುಕೊಂಡು ಧನ್ಯರಾಗಬೇಕು ಸರ್ವರೂ ಧರ್ಮಪ್ರಕಾರ ನಿತ್ಯಾಶ್ರಮಾಚಾರಗಳನ್ನು ಮಾಡುತ್ತಲೇ ಇರಬೇಕು ಪಟ್ಟಚಾರಾಧಿಕಾರಿಗಳಲ್ಲಿ ಶಿವದೀಕ್ಷಾಸಂಸ್ಕಾರವನ್ನು ಪಡೆದು ಸದಾ ಶಿವಾರ್ಚನತತ್ಪರರಾಗಬೇಕು ವೀರಶೈವ ಸ್ತ್ರೀಯರು ಮುಟ್ಟಾದಾಗ್ಯೆ ಲಿಂಗಪೂಜೆಯನ್ನು ಮಾಡಿಕೊಳ್ಳಬೇಕು ಪಾಕಕ್ರಿಯಾದಿಗಳನ್ನು ಮಾಡಬಾರದು ಕೆಲಶೆಲ್ಲಸ್ತ್ರೀಯರು ಹಡೆದಾಗ್ಯೆ ರಜಸ್ಸಲೆ ಆದಾಗ್ಯೆ ಮುಡಿಚಟ್ಟು ಬಂದಿತೆಂದು ಲಿಂಗಮೂರ್ತಿಯನ್ನು ತೆಗೆದು ಕಡೆಗೆ ಇಡುತ್ತಾರೆ ಹೀಗೆ ಎಂದೂ ಮಾಡಬಾರದು ಶುಚಿ ಇರಲಿ, ಅಶುಚಿ ಇರಲಿ ಲಿಂಗಮೂರ್ತಿಯನ್ನು ಎಂದೂ ತೆಗೆಯಬಾರದು. ಪ್ರಾಣದಂತೆ ಕಾಪಾಡಬೇಕು ಭಕ್ತ ಸ್ತ್ರೀಪುರುಷರು ತ್ರಿಪುಂಡ್ರವನ್ನು ಧಾರಣಮಾಡಬೇಕು. ಸ್ತ್ರೀಯರು ಎರಡು ಬೆರಳಿಗಿಂತ ಭಸ್ಮವನ್ನು ಧರಿಸಿದರೆ ವ್ಯಭಿಚಾರಿಯಾಸಿಕೊಳ್ಳುವೆಂದೂ, ಮೂರು ಬೆರಳಿನಿಂದ ಧರಿಸಿದರೆ ಗೌರಿಯಸಿ ಸಿಕೊಳ್ಳುತ್ತಾಳೆಂದೂ ಬೋಧಿಸಿದರು ಸರ್ವರೂ ಪಾದಿ ಬಟ್ಟೆಗಳನ್ನು ಉಪಯೋಗಮಾಡಿ, ಜೀವಪಾಧಾರವಾದ ಒಳ್ಳಲತನ, ಕೈಗಾರಿಕೆಗಳನ್ನು ಮುಂದುವರಿಸಬೇಕೆಂದು ಬೋಧಿಸಿದರು

ಲಿಂಗನಗೌಡ, ರಾಮನಗೌಡ, ಹಿರೇಗೌಡರು
ಯಲಿವಾಳ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ, ಬೆಂಗಳೂರು.
ಸ್ವೀಕಾರ

1 ಬೆಂಗಳೂರು ಕಂಟೋನ್ಮೆಂಟ್ ಮ॥ ರಾ॥ ಎಂ ಜಿ ನಾಗಪ್ಪನವರ ಸಹೋದರ ಚಿ॥ ರಾ॥ ಎಂ ಗಂಗಪ್ಪನೆಂಬ ವರಿಗೆ ಸದರೀ ಕಂಟೋನ್ಮೆಂಟ್ ನಾಗೆನವರದ ಮ॥ ರಾ॥ ಬಸಪ್ಪನವರ ಪುತ್ರ ಚಿ॥ ಸೌ॥ ರುದ್ರಮ್ಮನೆಂಬ ವಧುವನ್ನು ಕಂದು ನಡೆಸಿದ ವಿವಾಹಮಹೋತ್ಸವ ಕಾಲದಲ್ಲಿ ವರನ ಕಡೆಯಿಂದ ಬಂದ ೨ ರೂಪಾಯಿಗಳು ಸಂಘದ ಸೆಕ್ರೆಟರಿಯವರ ಮೂಲಕ ತಲಪಿರುತ್ತೆ

2 ಚಿತ್ತೂರು ಜಿಲ್ಲಾ ಪುಂಗನೂರಿನಲ್ಲಿರುವ ಸರಾಫ್ ಅಂಗಡಿ ಮ॥ ರಾ॥ ವೀರಾದಿ ಚಂದ್ರಶೇಖರಯ್ಯನವರ ಸಹೋದರ ಮ॥ ರಾ॥ ವೀರಭದ್ರಪ್ಪನೆಂಬ ವರಪ್ಪಗೂ ಬೆಂಗಳೂರಿನಲ್ಲಿರುವ ಜೆಂಕಣಿತೋಟೆ ಮ॥ ರಾ॥ ಭೋಗಯ್ಯನವರ ಕುಮಾರ್ತಿ ಚಿ॥ ಸೌ॥ ಶಾರದಾಂಬೆಯೆಂಬ ವಧುವಿಗೂ ನಡೆದ ವಿವಾಹಮಹೋತ್ಸವಕಾಲದಲ್ಲಿ ವರನಕಡೆಯಿಂದ ಬಂದ ೪ ರೂಪಾಯಿಗಳೂ, ವಧುವಿನ ಕಡೆಯಿಂದ ಬಂದ ೨ ರೂಪಾಯಿಗಳೂ ಜುಂಲಾ ೬ ರೂಪಾಯಿಗಳು ಬೆಂಗಳೂರು ಊದುಬತ್ತಿ ಫ್ಯಾಕ್ಟರಿ ಮ॥ ರಾ॥ ಯಜಮಾನ್ ಕೆಂಚಪ್ಪನವರ ಮೂಲಕ ಬಂದಿರುತ್ತೆ

3. ಚಿತ್ತೂರು ಜಿಲ್ಲ ಪುಂಗನೂರಿನಲ್ಲಿರುವ ಮ॥ರಾ॥ ಬೆಟ್ಟಿ ನೇಜಪ್ಪನವರ ಪುತ್ರ ಚಿ॥ರಾ॥ ರಾಜಪ್ಪನೆಂಬ ವರನಿಗೂ, ವಡಿಗೆಪಲ್ಲಿಲ್ಲ ಮ॥ ರಾ॥ ವೀರಭದ್ರಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನೆಂಬ ವಧುವಿಗೂ ನಡೆದ ವಿವಾಹಮಹೋತ್ಸವಕಾಲದಲ್ಲಿ ತೆಗೆದ ೪ ರೂಗಳು ಸದರೀ ಮ॥ ರಾ॥ ಯಜಮಾನ್ ಕೆಂಚಪ್ಪನವರ ಮೂಲಕ ತಲುಪಿರುತ್ತೆ

4 ಬೆಂಗಳೂರು ಸಿಟಿ ಮಾಮೂಲ್‌ಪೇಟೆ ದಿಗಂಬರ ಬೆಟ್ಟು ಮ॥ ರಾ॥ ಚಿನ್ನವೀರಬೆಟ್ಟಿರ ಪುತ್ರ ಚಿ॥ ಸೌ॥ ಪುಟ್ಟತಾಯಮ್ಮನೆಂಬ ವಧುವನ್ನು ತಿವರ್ಗಾಗಿದ್ದಲ್ಲಿರುವ ಮ॥ ರಾ॥ ಬಿ ಕೆ ಸಿದ್ದಪ್ಪನವರಿಮಗ ಚಿ॥ ರಾ॥ ವೀರಭದ್ರಯ್ಯನೆಂಬ ವರನಿಗೆ ಕೊಟ್ಟು ನಡೆಸಿದ ವಿವಾಹ ಮಹೋತ್ಸವಕಾಲದಲ್ಲಿ ವಧುವಿನಕಡೆಯಿಂದ ಬಂದ ೨ ರೂಪಾಯಿಗಳು ಆರಳೇಪೇಟೆ ಮ॥ ರಾ॥ ಯಜಮಾನ್ ವೃಟ್ಟಿಪ್ಪನವರ ಮೂಲಕ ತಲುಪಿದೆ

5 ಬೆಂಗಳೂರು ಸಿಟಿ ಅರಳೇಪೇಟೆ ವೀಶದಬೆಟ್ಟು ಮ॥ ರಾ॥ ರುದ್ರಪ್ಪಶೆಟ್ಟರ ಪುತ್ರಿಯವ್ವನ್ನು ಚಿ॥ ಸೌ॥ ಸದೋಜದೆವಿಯನ್ನು, ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ॥ ರಾ॥ ಗುರುಕಾರ್ ಮಲ್ಲಿಕಾರ್ಜುನಯ್ಯನವರ ಜ್ಯೇಷ್ಠ ಪುತ್ರ ಚಿ॥ ರಾ॥ ಸಾಂಬಶಿವಯ್ಯ, ಬಿ ಎಸ್‌ಸಿ, (ಟೆಕ್ನ್) ಇವರಿಗೆ ಕೊಟ್ಟು ನಡೆಸಿದ ವಿವಾಹಮಹೋತ್ಸವಕಾಲದಲ್ಲಿ ಮ॥ ರಾ॥ ಬಿ ರುದ್ರಪ್ಪಶೆಟ್ಟರಿಂದ ಬಂದ 10 ರೂಪಾಯಿಗಳು ಸಂಘದ ಸೆಕ್ರೆಟರಿಯವರ ಮೂಲಕ ತಲುಪಿರುತ್ತೆ

ಶ್ರೀ ಪಂಚಾಚಾರ್ಯರು ಮೇಲ್ಕಂಡ ನೂತನ ವಧೂವರರಿಗೆ ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಬೆಂಗಳೂರು ಸಿಟಿ ಸರಾಫ್ ಬಸಪ್ಪ,
ತಾ॥ ೨೦-೬-೩೮ ಆಕ್ಟಿಂಗ್ ಸೆಕ್ರೆಟರಿ

ಪ್ರಶ್ನೋತ್ತರ ರತ್ನಮಾಲಿಕಾ

ಲೇಖಕರು—ನುಲ್ಲಿಕಾರ್ಜುನಾರಾಧ್ಯ, ರಾಜಬೆನ್ನೂರು
ಮಳೆಮಸ್ಕ, ಮುದೇನೂರು, ಮು॥ ತಿಂಥಿಣಿ

ಪ್ರ—ಯಾರಿಗೆ ಯಾವುದು ಭಾರವಾಗುವದು ?

ಉ—ಅವಿವೇಕಿಗೆ ಶಾಸ್ತ್ರವು, ರಾಗಾಂಧನಿಗೆ ಜ್ಞಾನವು ಶಾಂತಿಹೀನನಿಗೆ ಮನಸ್ಸು, ಆಜ್ಞಾನಿಗೆ ಶರೀರವು ಭಾರ ವೆನಿಸುವವು ಮತ್ತು ರೂಪ ಮನಸ್ಸು ಬುದ್ಧಿಯು ಅಹಂಕಾರವು ಸಹ ದುರ್ಬುದ್ಧಿಗೆ ಭಾರವೆ ಆಗುವದಲ್ಲಿ ರೋಗಗಳೂ ವಿಶತ್ಯುಗಳಿಗೂ ಅತ್ಯಯವಾಗುವ ಆಯುಷ್ಯು ಆಯಾಸಕ್ಕೆ ಸಾಧನವಾಗುವದಿಷ್ಟುವುದರಲ್ಲಿ ಆಶ್ಚರ್ಯವಿಲ್ಲ!

ಪ್ರ—ಜಗತ್ತಿನ ಆವಸ್ಥೆಗಳಾವವು ?

ಉ—ಜನನ ಮರಣ, ಮುಪ್ಪು, ಸಂಪತ್ತು, ವಿಪತ್ತು ಇವುಗಳು ಕಂಡೂ ಕಾಣದ ರೀತಿಗಳಿಂದ ಬಾರಿ ಬಾರಿಗೂ ವೃದ್ಧಿಪಡಿಸುತ್ತಿರುವವು ಬಡುಗಾಲಿಯಿಂದ ವೈಕ್ಷಿಗಳು ಬಡಮೆಲಾಗಿ ಬೀಳುವಂತೆ ಜನರು ತುಚ್ಛವಾದ ಅಭೋಗಗಳಿಂದಲೇ ಮರಮರಳಿ ಪಿಡಿಲರಾಗುವರು

ಪ್ರ—ಭ್ರಾತೃಕಂರಾದ ಗುರುಪಿತೃರಾರು ?

ಉ—ಆ ಜಜ್ಞಾನಂ ಗುರುವೆಂದು ಭಾವಿಸಿ ಪ್ರಶ್ನೆಯಂ ಮಾಡುವ ಶಿಷ್ಯನು ಆಯೋಗ್ಯನೂ ಶಿಷ್ಯನೆಂದು ಭಾವಿಸಿ ಬೋಧಿಸುವ ಗುರುವು ಭ್ರಾತೃತಿಯುಕ್ತರಾದ ಇವರೀರ್ವರ ಪ್ರಶ್ನೋತ್ತರಪದಿಕಗಳು ಬಂಡಗಳಲ್ಲಿ ಜೆಲ್ಲಿದ ಬೀಜಗಳಂತೆ ಫಲಿಸುವದಿಲ್ಲವು ಒಂದುವೇಳೆ ಇಬ್ಬರೂ ಯೋಗ್ಯರಾಗಿದ್ದರೆ ಗುಬಾಬಿಬ್ಬಾವು ಬಿಳ್ಳವಾದ ವಸ್ತ್ರಕ್ಕೆ ತಗಲುವಂತೆ ಗುರೂಪದೇಶವು ಶಿಷ್ಯನಂ ಸೇರಿ ಫಲಕಾರಿಯಪ್ಪುದು.

ಪ್ರ—ಶಿವಯೋಗವೆಂದರೇನು ?

ಉ—ತನ್ನ ಹೀನಸ್ಥಿತಿಯನ್ನು ಹೋಗಲಾಡಿಸಿಕೊಂಡು ಉತ್ಕೃಷ್ಟಸ್ಥಿತಿಗೆ ಒಯ್ಯುವ ಒಂದುಪಾಯವು ಅಂದರೆ ಶಿವನಲ್ಲಿ ಬೆರೆಯುವಿಕೆಯು

ಪ್ರ—ಸತ್ಕರ್ಮ ದುಷ್ಕರ್ಮವೆಂದರೇನು ?

ಉ—ನಿರಾಸೆಯೇ ಸತ್ಕರ್ಮ, ಆಸೆಯೇ ದುಷ್ಕರ್ಮವು ಆಕಾಶರನಿಗೆ ಬಾರದಿರುವ ದುಃಖವು ನಿರಾಶಾಪರನಿಗೆ ಬಾರದಿರುವ ಸುಖವು ಜಗತ್ತಿನಲ್ಲಿಲ್ಲವಾದ್ದರಿಂದ ಆಸೆಯಂತಹ ಕೆಟ್ಟದ್ದೂ ನಿರಾಸೆಯಂತಹ ಒಳ್ಳೆಯದೂ ಯಾವದೂ ಇಲ್ಲವು ಈ ವಿಷಯದಲ್ಲಿ ಜ್ಞಾನಿಗಳು ಜಡವಾದ ಮೇಘಗಳೂ ಆಸೆಬುರುಕರಾದ ಸಜ್ಜನಾರಿಗಳಿಗೆ ಅಶ್ಯಯವಾದ ಗ್ರಾಮ ನಗರಗಳು ಬಿಟ್ಟು ವಿರಕ್ತರಿಗಾಶ್ರಯವಾದ ವನ ಗಿರಿಗಳಲ್ಲಿ ವಿಶೇಷವಾಗಿ ಮಳೆಗರೆಯುವವೆಂದು ಅಭಿಪ್ರಾಯಪಡುವರು ಆದರೆ ಆಸೆಪಡುವ ನರನು ಸದ್ಯಸಿಯ ಪ್ರಾಪ್ತಿಯಲ್ಲಿ ಮನವಂ (ಆಸೆಯಂ) ನಿಲ್ಲಿಸಿದರೆ ಸಾಯುಜ್ಯ ಸಾಮ್ರಾಜ್ಯವಂ ಹೊಂದುವನು ಇನ್ನು ದುರಾಸೆಯದಲ್ಲಿ ಆಸೆಯಂ ನಿಲ್ಲಿಸಿದವನಿಗೆ ಬಂಧಕವಾಗುವದಲ್ಲದೆ ಸಹಜವಾದ ಸುಖ ಗಗನಕುಸುಮಪ್ರಾಯವಾಗುವದು ಅಲ್ಲದೆ ಮಲಿನವಾದ ಕನ್ನಡಿಯು ಪ್ರತಿಬಿಂಬವಂ ಪಿಡಿಯದಿರುವಂತೆ ಆವನ ಮನವು ಜ್ಞಾನೋಪದೇಶವಂ ಪಿಡಿಯುವದಿಲ್ಲವು

ಪ್ರ—ವಿವೇಕ ಮತ್ತು ಅವಿವೇಕಗಳ ಪರಿಣಾಮವೇನು ?

ಉ—ವಿವೇಕವು-ರಿವಿಕಿರಣ ಪ್ರಕಾರದಿಂದ ಜಾರ ಜಾರಾಧಿಯರಣಗುಂವಂತೆ ಮನುಜನ ದುರಾಚಾರ ಬುರಾಲೋಚನೆಗಳನ್ನಳಿಸಿ ಘೂಳುಹೊದ ಚಿನ್ನವಂತೆ ಶುದ್ಧಮಾಡುವದು ಅವಿವೇಕವು ಗಾಳಿಯಂದ ಬೆಮವು ಗಟ್ಟಿಯಾಗಿ ಕಲ್ಲಾಗುವಂತೆ ಮನುಷ್ಯನಿಂದ ದಿನ ದಿನಕ್ಕೂ ಮೂಢನನ್ನಾಗಿ ಮಾಡುವದಲ್ಲದೆ ಮರಾಲೋಚನೆ ದುರಾಚಾರಗಳನ್ನು ವೃದ್ಧಿನಾಡಿ ತಮ್ಮೊಳಕ ಅವನಿಗೂ ಅವನ ಪಂಥ ತಂದೆತಾಯಿಗಳಿಗೂ ಕಲಂಕವನ್ನುಂಟುಮಾಡುವದು ಆದರೆ ನೀತೋಕ್ತಿಗಳನ್ನು ಪಲಂಬಿಸಿ ವಿವೇಕ ವೈರಾಗ್ಯಾದಿಗಳಿಗೆ ಶರಣಾಹೊದಿರುವ ಆಜ್ಞಾನಕ್ಕಿಂತಲೂ ದುಃಖಪ್ರದವಾದ ಶತ್ರುವಿನ್ನೊಂದಿಲ್ಲವು

ಪ್ರ—ಜಗತ್ತಿನ ಸುಖದುಃಖಗಳು ಯಾವುದರ ಫಲವಾಗಿರುವುದು ?

ಉ—ಸುಖಗಳು ವಿಚಾರಫಲಗಳೆಂತಲೂ, ದುಃಖಗಳು ಅವಿಚಾರಫಲಗಳೆಂತಲೂ ತಿಳಿಯಬೇಕು. ವಿಚಾರವಿಲ್ಲದವರು ಕಣ್ಣಿದ್ದರೂ ಹುಟ್ಟುಕುರುಡನೆಂದೂ, ಕೋಣನಿಂತಲೂ ನರರೂಪೀ ಕತ್ತೆಯೆಂತಲೂ ಪ್ರಾಜ್ಞರು ಹೇಳುವರು ಈ ವಿಚಾರವಿಹೀನನ ಹೃದಯವನ್ನು ಗಾಢಾಂಧಕಾರಮಯವಾದ ಗಿರಿ ಗುಹೆಗಳಲ್ಲಿರುವ ಕಗ್ಗಲ್ಲುಗಳ ಸಾಲಿದಿಂದ ಬ್ರಹ್ಮನು ನಿರ್ಮಿಸಿರುವನೆಂದು ಹೇಳುವರು.

ಪ್ರ—ಸತ್ಪುರುಷರೆಂದರೆ ಯಾರು ?

ಉ—ತ್ರಿಕಾಲಾಬಾಧಿತವಾದ ಪರವಸ್ತುವೇ ಸತ್ ಎನಿಸುವದು ಇದಂ ತಿಳಿದವರೇ ಸತ್ಪುರುಷರೆನಿಸುವರು

[೬ ನೆಯ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಈ ಕತ್ತಿಕೆಯು ಜನ್ಮವೆತ್ತಿ ವೈಶಾಖ ಪೂ|| ಪಂಚಮಿಗೆ ಹನ್ನೊಂದು ವರ್ಷಗಳು ತುಂಬಿ ೧೩ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು **ವಿ. ಪಿ ಮಾಡಬೇಕಾಗುತ್ತದೆ ವಿ. ಪಿ** ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು **ಆದುದರಿಂದ** ಚಂದಾದಾರರೆಲ್ಲರೂ ಕೂಡಲೆ ೨ ರೂ ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಲು ಬೇಕು **ವಿ ಪಿ** ಮಾಡಿದರೆ ೩ ರೂ ೧೫ ಆಣೆ ಬೀಳುವುದು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರುಸಲೋ ಆ ಗ್ರಾಮದಲ್ಲಿರುವ ಆಫೀಸಾನಿಗಳು ಚಂದಾದಾರರ ಹಣವನ್ನೂ ಒಟ್ಟುಗೂಡಿಸಿ ಒಂದೇಸಾರಿ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮುಂಯಾರ್ಡರ್ ಮಾಡುವ ಚಿಂತಾದಾರರು ತಮ್ಮ ಹೆಸರಿನ ಪಕ್ಕದಲ್ಲಿ ರೂ **೨ನೆಂಬರನ್ನು** ಮಾತ್ರ ಬರೆಯಿಸಿಟ್ಟು ಮಿಕ್ಕದ್ದು ತಿಂ ಆಸ್‌ಬೇಕು ಸಂಬಂಧಿಸಿದ್ದಂ ತೂಂ೯ ಯಾಗುವುದು

ಸಂ—

~~೧೯೩೬ನೇ ಸಾಲಿನ ಜೂ೯ ತಾ|| ೬ ನೇ ಸೋಮವಾರ~~

ಶ್ರೀಜಗದ್ಗುರು ಪಂಚಾಚಾರ್ಯರು

